# ಅಧ್ಯಾಯ 13

# ಶಿಕ್ಷಣ ಮತ್ತು ಕ್ರೀಡೆ

ಕೊಡಗು ಜಿಲ್ಲೆಯು ಶೈಕ್ಷಣಿಕವಾಗಿ ಒಂದು ಮುಂದುವರಿದ ಜಿಲ್ಲೆ. 1971ರ ಜನಗಣತಿಯಂತೆ ಕೊಡಗು ಜಿಲ್ಲೆಯು ಕರ್ನಾಟಕದಲ್ಲೇ ಸಾಕ್ಷರತೆಯಲ್ಲಿ ಮೊದಲ ಸ್ಥಾನದಲ್ಲಿ ಇತ್ತು. ಈಗ ಮೂರನೇಯ ಸ್ಥಾನದಲ್ಲಿ ಇದೆ. ಬ್ರಿಟಿಷರ ಆಗಮನಕ್ಕೆ ಮೊದಲು ಇಲ್ಲಿ ಶಿಕ್ಷಣ ತೀರ ಹಿಂದುಳಿದಿತ್ತು. ಕೆಲಮಟ್ಟಿಗೆ ಬ್ರಾಹ್ಮಣರು, ಲಿಂಗಾಯಿತರು ಮತ್ತು ಮುಸಲ್ಮಾನರು ಹಾಗೂ ಕೊಡವರಲ್ಲಿ ಅಲ್ಪಪ್ರಮಾಣದ ಜನ ಮಾತ್ರ ಸಾಕ್ಷರತೆ ಹೊಂದಿದವರಾಗಿದ್ದರು. ಕಾಡುಮೇಡುಗಳಿಂದ ತುಂಬಿದ ಈ ನಾಡಿನಲ್ಲಿ ಧಾರ್ಮಿಕ ಮತ್ತು ಆಡಳಿತಾತ್ಮಕ ಕ್ಷೇತ್ರದ ಮತ್ತು ಮೇಲ್ವರ್ಗಗಳ ಜನರವಿನಾ ಉಳಿದವರು ಶಿಕ್ಷಣವನ್ನು ಹೊಂದುವ ಸವಲತ್ತುಗಳನ್ನು ಹೊಂದಿರಲಿಲ್ಲ. ಅಗ್ರಹಾರ, ಮಠ ಮತ್ತು ಅಧಿಕಾರಿಗಳ ಹಾಗೂ ಶ್ರೀಮಂತರ ಮನೆಗಳಲ್ಲಿ ಮಾಡಿಕೊಂಡ ವ್ಯವಸ್ಥೆಗಳಷ್ಟೇ ವಿದ್ಯೆಯ ಸೀಮೆಗಳಾಗಿದ್ದವು.

ಗಂಗರ ಕಾಲದಲ್ಲಿ ಕೆಲವೊಂದು ಅಗ್ರಹಾರಗಳು ಕೊಡಗಿನಲ್ಲಿ ಸ್ಥಾಪನೆಗೊಂಡಿರಬೇಕು. ಎರೆಯೆರಸ ಎಂಬ ಒಬ್ಬ ವಿದ್ವಾಂಸನಿಗಾಗಿ ಅಗ್ರಹಾರವೊಂದನ್ನು ಸ್ಥಾಪಿಸಿದ ಉಲ್ಲೇಖ ಗಂಗರ 10ನೇಯ ಶತಮಾನದ ಒಂದು ಶಾಸನದಲ್ಲಿದೆ. ಈ ಅಗ್ರಹಾರವಿದ್ದ ಊರು ಸೋಮವಾರಪೇಟೆ ತಾಲೂಕಿನ ಹಾರೋಹಳ್ಳಿಯಾಗಿದ್ದು ಊರ ಹೆಸರೇ ಸೂಚಿಸುವಂತೆ ಅದು ಹಾರುವರ (ಬ್ರಾಹ್ಮಣರ) ಹಳ್ಳಿಯಾಗಿದೆ. ಇಲ್ಲಿನ ವಿದ್ವಾಂಸರು ಧಾರ್ಮಿಕ ವಿಧಿಗಳಲ್ಲಿ ತೊಡಗುವುದರ ಜೊತೆ ತಮ್ಮ ಹಾಗೂ ಶ್ರೀಮಂತರ ಮಕ್ಕಳಿಗೆ ಶಿಕ್ಷಣ ಕೊಡುವುದು, ವಿವಿಧ ಕಸುಬುಗಳಿಗೆ ಸಂಬಂಧಿಸಿದ ಶಾಸ್ತ್ರ (ವಿಜ್ಞಾನ)ಗಳನ್ನೂ ತಿಳಿದವರಾಗಿ ಕಸುಬುದಾರರಿಗೆ ಮಾರ್ಗದರ್ಶಕರಾಗಿ ಇರಬೇಕಾಗಿತ್ತು. ಎಲ್ಲಾ ಪ್ರಾಚೀನ ಕಸುಬುಗಳಿಗೆ ಸಂಬಂಧಿಸಿದ ಬಹುಪಾಲು ಕೃತಿಗಳು ('ಬೃಹತ್ ಸಂಹಿತಾ' ಇತ್ಯಾದಿ) ಸಂಸ್ಕೃತದಲ್ಲಿ ಇದ್ದವು. ಮಳೆ ನಕ್ಷತ್ರಗಳ ಬಗ್ಗೆ ಮಾಹಿತಿಗಳನ್ನು ಇಂದಿಗೂ ಹಳ್ಳಿಯ ವಿದ್ವಾಂತರು ರೈತರಿಗೆ ನೀಡುತ್ತ ಬಂದಿದ್ದಾರೆ. ಪ್ರಾಚೀನ ಬಸ್ತಿ, ದೇವಾಲಯಗಳಿದ್ದಲ್ಲೆಲ್ಲ ಸಂಸ್ಕೃತ–ಕನ್ನಡ ವಿದ್ವಾಂಸರು ಇದ್ದರೆಂದು ಊಹಿಸಬಹುದಾಗಿದೆ. ಕೊಂಗಾಳ್ವ, ಹೊಯ್ಸಳ, ಚೆಂಗಾಳ್ವರ ಕಾಲದಲ್ಲಿ ಸಿರಹ, ಅಂಜನಗಿರಿ–ಬೆಟ್ಟಗೇರಿ, ತಾತಂಗಿ (ಈಗ ಈ ಊರು ಇಲ್ಲ), ಮುಳ್ಳೂರು, ಭಾಗಮಂಡಲ, ಬಲಮುರಿ, ಪಾಡಿ, ಮುಂತಾದ ಇಂಥ ಕೇಂದ್ರಗಳನ್ನು ಗುರುತಿಸಬಹುದು. ಮುಳ್ಳೂರಲ್ಲಿ ಅನೇಕ ಭಾರೀ ವಿದ್ವಾಂಸರಾದ ಜೈನ ಸಂನ್ಯಾಸಿಗಳೂ ಇದ್ದರು. ಚೆಂಗಾಳ್ವ ಹಾಗೂ ಹಾಲೇರಿ ಒಡೆಯರ ಕಾಲದಲ್ಲಿ ಸ್ಥಾಪನೆಯಾದ ವೀರಶೈವ ಮಠಗಳೂ ಶಿಕ್ಷಣ ಕ್ಷೇತ್ರದಲ್ಲಿ ಶ್ರಮಿಸುತ್ತಿದ್ದಿರಬೇಕು. ಸುಮಾರು 70 ವೀರಶೈವ ಮಠಗಳು ಕೊಡಗಿನಲ್ಲಿ ಉದ್ದಗಲಕ್ಕೂ ಇದ್ದುವೆಂದು ಪಟ್ಟಿಮಾಡಲಾಗಿದೆ. ಹಾಲೇರಿ ಒಡೆಯರ ಕಾಲದಲ್ಲಿ ಸರಕಾರೀ ನೌಕರರೂ ಅರಮನೆಯವರೂ ತಮ್ಮ ಮಕ್ಕಳಿಗೆ ಕನ್ನಡ, ಉರ್ದು, ಪರ್ಶಿಯನ್ ಕಲಿಸಲು ತಮ್ಮದೇ ವ್ಯವಸ್ಥೆ ಮಾಡಿಕೊಂಡಿದ್ದರು. ಅನೇಕ ಸರಕಾರೀ ನೌಕರಿಗಳು ಮನೆತನಗಳಲ್ಲಿ ಪಾರಂಪರಿಕವಾಗಿದ್ದವು. ಅರಮನೆಯಲ್ಲಿ ಅರಸು ಮಕ್ಕಳ ಶಿಕ್ಷಣಕ್ಕಾಗಿ ಉರ್ದು ಮುನಶಿ ಇದ್ದ ವಿಚಾರ ದಾಖಲೆಗಳಲ್ಲಿ ಇದೆ. ಒಡೆಯರಲ್ಲಿ

ನೌಕರಿ ಮಾಡಲು ಮೈಸೂರು, ಕೇರಳ, ದಕ್ಷಿಣ ಕನ್ನಡಗಳಿಂದ ವಿದ್ಯಾವಂತರು ಬರುವುದಿತ್ತು. 19ನೇಯ ಶತಮಾನದಲ್ಲಿ ಫಾರಸಿ, ಕ್ರೈಸ್ತ ಅಧಿಕಾರಿಗಳನ್ನು ಪತ್ರ ವ್ಯವಹಾರ, ವಿದೇಶ ಸಂಬಂಧಗಳ ನಿರ್ವಹಣೆಗಳಿಗಾಗಿ ನೇಮಿಸಿಕೊಂಡಂತೆ ಇದೆ. ದಕ್ಷಿಣ ಕನ್ನಡದ ಬಂಟ್ವಾಳದಿಂದ ಜಮಲಾಬಾದ್‌ವರೆಗಿದ್ದ ಅನೇಕ ಅಗ್ರಹಾರಗಳ ಬ್ರಾಹ್ಮಣರನ್ನು ಬಲಾತ್ಕಾರದಿಂದ ಕೊಡಗಿಗೆ ತಂದು ನೆಲೆ ನಿಲ್ಲುವಂತೆ ದೊಡ್ಡವೀರರಾಜೇಂದ್ರನು ಮಾಡಿದನೆಂದು ಬುಕನನ್ (1801) ಹೇಳಿದ್ದಾನೆ. ಲಿಂಗರಾಜ ಒಡೆಯ (1811–20)ರ ಕಾಲದಲ್ಲಿ ಶಿರಹ, ಕೊಡಲೂರು ಮುಂತಾದ ಊರುಗಳಲ್ಲಿ ಅಗ್ರಹಾರ ಸ್ಥಾಪಿಸಿದ ಉದಾಹರಣೆಗಳಿವೆ. ಈ ಕಾಲದಲ್ಲಿ ಸ್ಥಾಪಿಸಿದ ನಾಡಿಗೊಂದರಂತೆ ಇರುವ ಶಿವಾಲಯಗಳ ಅರ್ಚಕರೂ ಪರಿಚಾರಕರೂ ಅಕ್ಷರ ಜ್ಞಾನವುಳ್ಳ ಬ್ರಾಹ್ಮಣರೇ ಆಗಿದ್ದರು. ತೋಟಗಾರಿಕೆಯಲ್ಲಿ ತೊಡಗಿದ್ದ ವಿದ್ಯಾವಂತ ಹವ್ಯಕ ಬ್ರಾಹ್ಮಣರು ಹಳ್ಳಿಗಾಡುಗಳಲ್ಲಿ ಹರಡಿದ್ದರು. ಮೋಗ್ಲಿಂಗ್ 1855 ರಲ್ಲಿ ತಿಳಿಸಿರುವಂತೆ (ಬಹುಶಃ ನೌಕರಿ ಸೇರಬಯಸುವವರಿಗೆ) ಸರಕಾರೀ ಕಚೇರಿಗಳಲ್ಲಿ ಕನ್ನಡ ಓದು ಬರಹ ಕಲಿಸಲು ತಿಂಗಳಿಗೆ 2–3 ರೂ. ತಲಬಿಗೆ ಉಪಾಧ್ಯಾಯರನ್ನು ನೇಮಿಸಲಾಗುತ್ತಿತ್ತು. ರಾಜರ ಕಾಲದಲ್ಲೂ ಈ ವ್ಯವಸ್ಥೆ ಇದ್ದಿರಬಹುದು. ಮಡಿಕೇರಿಯ ಕಚೇರಿಯಲ್ಲಿ ಇಂಥ ಒಬ್ಬ ಬ್ರಾಹ್ಮಣಕಾರಕೂನನು ಅಧ್ಯಾಪಕನಾಗಿ ಕನ್ನಡ ಮತ್ತು ತನಗೆ ತಿಳಿದಷ್ಟು ಇಂಗ್ಲಿಷ್ ಕಲಿಸಲು ನೇಮಕಗೊಂಡಿದ್ದನೆಂದೂ ಮೋಗ್ಲಿಂಗ್ ತಿಳಿಸಿದ್ದಾನೆ. ಈತನಿಗೆ ತಿಂಗಳಿಗೆ 17½ ರೂ. ಪಗಾರ ಕೊಡುತ್ತಿದ್ದು, "ನಿರುತ್ಸಾಹೀ ಸೋಮಾರಿ ಶಿಷ್ಯರಿಗೆ" ಆತ ಪಾಠ ಹೇಳುತ್ತಿದ್ದನೆಂದು ಅವನು ಹೇಳಿದ್ದಾನೆ. ಮುಂದೆ ಒಬ್ಬ 'ಇಂಡೊ–ಬ್ರಿಟನ್' ಈ ಹುದ್ದೆಗೆ ನೇಮಕಗೊಂಡನು (ಮೋಗ್ಲಿಂಗ್, ಪು. 78).

ಆದರೂ ಆಧುನಿಕ ಶಿಕ್ಷಣವು ಆರಂಭ ಆಗಿ ಸಾರ್ವತ್ರಿಕ ರೂಪ ತಳೆದುದು 1834ರ ನಂತರವೇ. ಹೀಗಿದ್ದರೂ ಜಿಲ್ಲೆಯ ಪ್ರಥಮ ಪ್ರೌಢಶಾಲೆ 1880ರಲ್ಲಿ ಹಾಗೂ ಕಾಲೇಜು 1949ರಲ್ಲಿ ಆರಂಭವಾದುವು.

## ಸಾಕ್ಷರತೆ

ರಾಜ್ಯದ ಇತರೆಡೆಗಳಿಗೆ ಹೋಲಿಸಿದಾಗ, ಕೊಡಗು ಜಿಲ್ಲೆಯ ಸಾಕ್ಷರತಾ ಪ್ರಮಾಣ ಮೊದಲಿನಿಂದಲೂ ಅಧಿಕವಾಗಿದ್ದುದು ಕಂಡುಬರುತ್ತದೆ. ಬ್ರಿಟಿಷ್ ಆಡಳಿತಾರಂಭದಿಂದ ಮೊದಲುಗೊಂಡು, ಜಿಲ್ಲೆಯ ಅಧಿಕಾರಿಗಳು ಹೆಚ್ಚು ಹೆಚ್ಚು ಶಾಲೆಗಳನ್ನು ಪ್ರಾರಂಭಿಸಿದುದರಿಂದಲೂ, ಜಿಲ್ಲೆಯ ಜನರ ಸಹಜ ವಿದ್ಯಾಕಾಂಕ್ಷೆಯಿಂದಲೂ ಇದು ಸಾಧ್ಯವಾಯಿತು. 1901ರಲ್ಲಿ ವಿದ್ಯಾ ಇಲಾಖೆಯನ್ನು ತನ್ನ ವ್ಯಾಪ್ತಿಗೆ ಒಳಪಡಿಸಿಕೊಂಡ ಜಿಲ್ಲಾ ಬೋರ್ಡ್‌ಗಳು ಸಹ ಹೆಚ್ಚಿನ ಜನಸಂಖ್ಯೆ ಇದ್ದೆಡೆಗಳಲ್ಲೆಲ್ಲ ಶಾಲೆಗಳನ್ನು ಪ್ರಾರಂಭಿಸಿದವು. ಆಗಿನ ಸರಕಾರ, ಮಗುವಿದ್ದ ಪ್ರತೀ ಮನೆಯ ಒಂದೂವರೆ ಮೈಲಿ ಫಾಸಲೆಯಲ್ಲಿ ಒಂದೊಂದು ಏಕೋಪಾಧ್ಯಾಯ ಪೂರಕಶಾಲೆ (ಫೀಡರ್ ಸ್ಕೂಲ್) ಯನ್ನೂ, ಮೂರು ಮೈಲಿ ಫಾಸಲೆಯಲ್ಲಿ ಒಂದೊಂದು ಪ್ರಾಥಮಿಕ ಶಾಲೆಯನ್ನೊಳಗೊಂಡ ಮಾಧ್ಯಮಿಕ ಶಾಲೆಯನ್ನೂ ಪ್ರಾರಂಭಿಸಿದುದರಿಂದ ವಿದ್ಯಾಭಿವೃದ್ಧಿಗೆ ಮಹತ್ವದ ಪುಷ್ಟಿ ಸಿಕ್ಕಿತು. ಇದೇ ಸಮಯದಲ್ಲಿ ಹಲವಾರು ಪ್ರಾಥಮಿಕ ಶಾಲೆಗಳು ಮಾಧ್ಯಮಿಕ ಶಾಲೆಗಳಾಗಿ ಮಾರ್ಪಟ್ಟು ಮತ್ತೆ ಕೆಲವೆಡೆ ವಯಸ್ಕರ ಶಿಕ್ಷಣ ತರಗತಿಗಳನ್ನು ಪ್ರಾರಂಭಿಸಲಾಯಿತು. ಈ ಎಲ್ಲಾ ಕಾರಣಗಳಿಂದ ಜಿಲ್ಲೆಯಲ್ಲಿ ದಶಕದಿಂದ ದಶಕಕ್ಕೆ ಸಾಕ್ಷರತಾ ಪ್ರಮಾಣದಲ್ಲಿ ಗಣನೀಯ ಪ್ರಗತಿ ಉಂಟಾಯಿತು. 1911ರ ಜನಗಣತಿಯಂತೆ ಜಿಲ್ಲೆಯ ಒಟ್ಟು ಜನಸಂಖ್ಯೆ 1,17,976 (97,279 ಗಂ. 77,697 ಹೆಂ.) ಮಂದಿಯಲ್ಲಿ ಒಟ್ಟು 17,443 ಅಂದರೆ ಶೇಕಡಾ 10ರಷ್ಟು ಮಂದಿ ಮಾತ್ರ ಸಾಕ್ಷರರಾಗಿದ್ದರು. ಇದು ಹಿಂದಿನ ದಶಕದ ಶೇಕಡಾವಾರು ಸಾಕ್ಷರತೆಯಾದ 8ಕ್ಕಿಂತ ಹೆಚ್ಚಿದ್ದಿತು. ಮೇಲಿನ ಸಾಕ್ಷರರಲ್ಲಿ 7,715 ಅಥವಾ ಶೇ. 44.23 ಮಂದಿ ಕೊಡವರಿದ್ದರು. ಆಗ ಜಿಲ್ಲೆಯಲ್ಲಿ ಕೊಡವರ ಶೇಕಡಾವಾರು ಸಂಖ್ಯೆ 19.37 ಇದ್ದಿತು. 1921ರ ಜನಗಣತಿಯ ಪ್ರಕಾರ, ಜಿಲ್ಲೆಯ ಒಟ್ಟು ಜನಸಂಖ್ಯೆ 1,63,838. ಇದರಲ್ಲಿ ಒಟ್ಟು 20,643 ಅಥವಾ ಶೇಕಡಾ 12.6ರಷ್ಟು ಸಾಕ್ಷರರಿದ್ದರು. ಹಿಂದಿನ ದಶಕದ ಸಾಕ್ಷರತೆಗಿಂತ ಈ ಸಂಖ್ಯೆ 3,200 ಮಂದಿಯಷ್ಟು ಅಥವಾ ಶೇಕಡಾ 2.6ರಷ್ಟು ಹೆಚ್ಚಾಗಿತ್ತು. 1931ರಲ್ಲಿ ಜಿಲ್ಲೆಯ ಜನಸಂಖ್ಯೆ 1,63,327 ಆಗಿತ್ತು. ಇವರಲ್ಲಿ ಒಟ್ಟು 25,336 ಮಂದಿ ಅಥವಾ ಶೇ. 15.51ರಷ್ಟು ಅಕ್ಷರಸ್ಥರಾಗಿದ್ದರು. ಈ ದಶಕದಲ್ಲಿ ಗಂಡಸರಲ್ಲಿ ಸಾಕ್ಷರತೆ ಶೇಕಡಾ 17ರಷ್ಟು ಹೆಚ್ಚಿದರೆ, ಹೆಂಗಸರ ಸಾಕ್ಷರತೆ ಶೇಕಡಾ 48ರಷ್ಟು ಹೆಚ್ಚಿತು. 1941ರ ಜನಗಣತಿಯಂತೆ ಜಿಲ್ಲೆಯ ಒಟ್ಟು ಜನಸಂಖ್ಯೆ 1,68,726 (92,347 ಗಂ. 76,379 ಹೆಂ.) ರಲ್ಲಿ ಒಟ್ಟು 34,563 ಮಂದಿ (24,827 ಗಂ, 9,736 ಹೆಂ.) ಅಕ್ಷರಸ್ಥರಾಗಿದ್ದರು. ಜಿಲ್ಲೆಯ ಒಟ್ಟು ಸಾಕ್ಷರತೆಯ ಶೇಕಡಾವಾರು ಪ್ರಮಾಣ 20.5 ಇದ್ದಿತು. ಇವರಲ್ಲಿ ಶೇಕಡಾ 26.9 ಗಂಡಸರು, 12.7 ಹೆಂಗಸರಿದ್ದರು. 1951 ರಿಂದ 1961ರ ದಶಕದಲ್ಲಿ ಜಿಲ್ಲೆಯ ಶೇಕಡಾವಾರು

ಸಾಕ್ಷರತೆ ಗಣನೀಯ ಪ್ರಮಾಣದಲ್ಲಿ ಹೆಚ್ಚಿತು. 1951ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ 2,29,405 ಮಂದಿಯಲ್ಲಿ 62,430 ಜನ, ಅಂದರೆ ಶೇ. 27.2ರಷ್ಟು ಅಕ್ಷರಸ್ಥರಿದ್ದರು. ಇವರಲ್ಲಿ 42,658 ಗಂಡಸರು ಮತ್ತು 19,772 ಹೆಂಗಸರು ಸೇರಿದ್ದರು.

ಇದೇ ವರ್ಷದಲ್ಲಿ ಜಿಲ್ಲೆಯಲ್ಲಿ 53,345 ವಿದ್ಯಾವಂತರಿದ್ದು, ಅವರಲ್ಲಿ 35,885 ಗಂಡಸರು ಹಾಗೂ 17,460 ಹೆಂಗಸರಿದ್ದರು. ಈ ಪೈಕಿ 6,228 ಮಂದಿ (4,438 ಗಂ., 1,790 ಹೆಂ.) ಮಾಧ್ಯಮಿಕ ಮಟ್ಟವನ್ನೂ, 2,174 ಮಂದಿ (1,736 ಗಂ., 438 ಹೆಂ.) ಹೈಯರ್ ಸೆಕೆಂಡರಿ ಮಟ್ಟವನ್ನೂ, 255 ಮಂದಿ (215 ಗಂ., 40 ಹೆಂ.) ಇಂಟರ್‌ಮೀಡಿಯೇಟ್ ಮಟ್ಟವನ್ನೂ, 124 ಮಂದಿ (107 ಗಂ., 17 ಹೆಂ.) ಪದವಿ ಮಟ್ಟವನ್ನೂ, 24 ಮಂದಿ (23 ಗಂ., 01 ಹೆಂ.) ಸ್ನಾತಕೋತ್ತರ ಮಟ್ಟವನ್ನೂ, 131 ಮಂದಿ (113 ಗಂ., 18 ಹೆಂ.) ಶಿಕ್ಷಕ ತರಬೇತಿ (ಬಿ.ಟಿ.) ಮಟ್ಟವನ್ನೂ, 20 ಮಂದಿ (ಎಲ್ಲಾ ಗಂಡಸರು) ಇಂಜನೀಯರಿಂಗ್ ಪದವಿ ಮಟ್ಟವನ್ನೂ, 12 ಮಂದಿ (ಎಲ್ಲಾ ಗಂಡಸರು) ಕೃಷಿ ಪದವಿ ಮಟ್ಟವನ್ನೂ, ಇಬ್ಬರು ಗಂಡಸರು ಪಶುವೈದ್ಯ ಪದವಿಯನ್ನೂ, 12 ಗಂಡಸರು ವಾಣಿಜ್ಯ ಪದವಿ ಮಟ್ಟವನ್ನೂ, 35 ಗಂಡಸರು ಕಾನೂನು ಪದವಿ ಮಟ್ಟವನ್ನೂ, ಒಟ್ಟು 33 ಮಂದಿ (28 ಗಂ., 05 ಹೆಂ.) ವೈದ್ಯಕೀಯ ಪದವಿ ಮಟ್ಟವನ್ನೂ, ಒಟ್ಟು 35 (33 ಗಂ., 2 ಹೆಂ.) ಇತರೆ ಪದವಿಗಳ ಮಟ್ಟವನ್ನೂ ತಲುಪಿದ್ದರು.

1961ರ ಜನಗಣತಿಯಂತೆ ಜಿಲ್ಲೆಯ ಒಟ್ಟು ಜನಸಂಖ್ಯೆ 3,22,829 ಆಗಿದ್ದಿತು. ಇವರಲ್ಲಿ ಒಟ್ಟು 1,17,074 (75,378 ಗಂ., 41,696 ಹೆಂ.) ಸಾಕ್ಷರರಾಗಿದ್ದರು. ಅಂದರೆ ಜಿಲ್ಲೆಯ ಒಟ್ಟು ಶೇಕಡಾವಾರು ಸಾಕ್ಷರತೆ 36.26 (43.48 ಗಂ., 27.83 ಹೆಂ.) ಆಗಿದ್ದಿತು. ಈ ದಶಕದಲ್ಲಿ ಅತೀ ಹೆಚ್ಚಿನ ಸಾಕ್ಷರತೆ (46.59 ಶೇ.) ಮಡಿಕೇರಿ ತಾಲೂಕಿನಲ್ಲಿಯೂ, ಅತೀ ಕಡಿಮೆ ಸಾಕ್ಷರತೆ (28.15 ಶೇ.) ಸೋಮವಾರಪೇಟೆ ತಾಲೂಕಿನಲ್ಲಿಯೂ ಇದ್ದಿತು. ಮಡಿಕೇರಿ ತಾಲೂಕಿನ ಒಟ್ಟು ಜನಸಂಖ್ಯೆಯಾದ 79,540 ಮಂದಿಯಲ್ಲಿ ಒಟ್ಟು 37,060 (22,907 ಗಂ., 14,153 ಹೆಂ.) ಮಂದಿ ಅಥವಾ ಶೇ. 53.26 (38.73 ಗಂ., 46.59 ಹೆಂ.), ಸೋಮವಾರಪೇಟೆ ತಾಲೂಕಿನ ಒಟ್ಟು ಜನಸಂಖ್ಯೆಯಾದ 1,09,417 ಮಂದಿಯಲ್ಲಿ ಒಟ್ಟು 30,801 (21,595 ಗಂ., 9,206 ಹೆಂ.) ಮಂದಿ ಅಥವಾ ಒಟ್ಟು ಶೇ. 28.15 (37.23 ಗಂ., 9,206 ಹೆಂ.) ಮಂದಿ ಮತ್ತು ವೀರರಾಜಪೇಟೆ ತಾಲೂಕಿನ ಒಟ್ಟು ಜನಸಂಖ್ಯೆಯಾದ 1,33,872 ಮಂದಿಯಲ್ಲಿ ಒಟ್ಟು 49,213 (30,876 ಗಂ., 18,337 ಹೆಂ.) ಮಂದಿ ಅಥವಾ ಒಟ್ಟು ಶೇ. 36.76 (42.68 ಗಂ., 29.79 ಹೆಂ.) ಸಾಕ್ಷರರಾಗಿದ್ದರು.

1971ರ ಜನಗಣತಿಯಂತೆ ಜಿಲ್ಲೆಯ ಒಟ್ಟು ಜನಸಂಖ್ಯೆ 3,78,291 ಯಲ್ಲಿ ಒಟ್ಟು 1,67,592(99,496 ಗಂ. 68,096 ಹೆಂ.) ಅಕ್ಷರಸ್ಥರಾಗಿದ್ದರು. ಅಂದರೆ ಒಟ್ಟು ಶೇಕಡಾವಾರು ಸಾಕ್ಷರತೆ 44.30 (50.22 ಗಂ., 37.79 ಹೆಂ.) ಇದ್ದಿತು. ಮಡಿಕೇರಿ ತಾಲೂಕಿನ ಜನಸಂಖ್ಯೆಯಾದ ಒಟ್ಟು 96,237 ಮಂದಿಯಲ್ಲಿ 51,554 ಮಂದಿ ಅಥವಾ ಶೇ. 53.56 ಅಕ್ಷರಸ್ಥರಿದ್ದರು. ಅವರಲ್ಲಿ 29,660 (45.00 ಶೇ.) ಗಂಡಸರೂ, 21,894 (ಶೇ. 47.71) ಹೆಂಗಸರೂ ಇದ್ದರು. ಸೋಮವಾರಪೇಟೆ ತಾಲೂಕಿನ ಒಟ್ಟು 1,39,070 ಜನಸಂಖ್ಯೆಯಲ್ಲಿ ಒಟ್ಟು 51,864 (37.29) ಮಂದಿ ಅಕ್ಷರಸ್ಥರಾಗಿದ್ದರು. ಇವರಲ್ಲಿ 32,470 (44.90 ಶೇ.) ಗಂಡಸರೂ, 19,394 (ಶೇ. 29.04) ಹೆಂಗಸರೂ ಸೇರಿದ್ದರು. ವೀರರಾಜಪೇಟೆ ತಾಲೂಕಿನ ಒಟ್ಟು 1,42,984 (75,452 ಗಂ., 67,532 ಹೆಂ.) ಜನಸಂಖ್ಯೆಯಲ್ಲಿ ಒಟ್ಟು 64,184 (ಶೇ. 44.88) ಮಂದಿ ಸಾಕ್ಷರರಾಗಿದ್ದರು. ಇವರಲ್ಲಿ 37,376 (49.53 ಶೇ.) ಗಂಡಸರೂ, 26,808 (39.69) ಹೆಂಗಸರೂ ಇದ್ದರು.

1981ರ ಜನಗಣತಿಯಂತೆ ಜಿಲ್ಲೆಯ ಒಟ್ಟು ಜನಸಂಖ್ಯೆ 4,61,888 ರಲ್ಲಿ ಒಟ್ಟು 231,621 ಮಂದಿ ಸಾಕ್ಷರರಾಗಿದ್ದರು. ಇವರಲ್ಲಿ 1,35,055 ಗಂಡಸರೂ, 96,566 ಹೆಂಗಸರೂ ಇದ್ದರು. ಜಿಲ್ಲೆಯ ಶೇಕಡಾವಾರು ಸಾಕ್ಷರತೆ ಒಟ್ಟು 50.14 ಆಗಿದ್ದು, ಗಂಡಸರ ಶೇಕಡಾವಾರು ಸಾಕ್ಷರತೆ 56.53 ಮತ್ತು ಹೆಂಗಸರ ಸಾಕ್ಷರತೆ 43.30 ಆಗಿತ್ತು. ಇವರಲ್ಲಿ ಅಸಾಂಪ್ರದಾಯಿಕ ಶಿಕ್ಷಣ (ನಾನ್-ಫಾರ್ಮಲ್ ಎಜುಕೇಶನ್) ಹೊಂದಿದವರು ಒಟ್ಟು 198 (114 ಗಂ., 84 ಹೆಂ.), ಸಾಂಪ್ರದಾಯಿಕ ಶಿಕ್ಷಣ (ಫಾರ್ಮಲ್ ಎಜುಕೇಷನ್) ಹೊಂದಿದವರು ಒಟ್ಟು 22,665(12,394 ಗಂ., 10,271 ಹೆಂ.), ಪ್ರಾಥಮಿಕ ಶಿಕ್ಷಣ ಹೊಂದಿದವರು ಒಟ್ಟು 17,850 (10,234 ಗಂ. 7,616 ಹೆಂ.), ಮಾಧ್ಯಮಿಕ ಶಿಕ್ಷಣ ಹೊಂದಿದವರು ಒಟ್ಟು

12,302 (6,563 ಗಂ., 5,739 ಹೆಂ.), ಎಸ್.ಎಸ್.ಎಲ್.ಸಿ./ಮೆಟ್ರಿಕ್ ಶಿಕ್ಷಣ ಹೊಂದಿದವರು ಒಟ್ಟು 3,773 (2,033 ಗಂ., 1,740 ಹೆಂ.), ಹೈಯರ್ ಸೆಕೆಂಡರಿ/ಇಂಟರ್‌ಮೀಡಿಯೇಟ್/ಪಿಯುಸಿ ಶಿಕ್ಷಣ ಹೊಂದಿದವರು ಒಟ್ಟು 1,721 (953 ಗಂ., 768 ಹೆಂ.), ನಾನ್-ಟೆಕ್ನಿಕಲ್ ಡಿಪ್ಲೊಮೊ ಹೊಂದಿದವರು ಒಟ್ಟು 05 ಹೆಂಗಸರು, ಟೆಕ್ನಿಕಲ್ ಡಿಪ್ಲೊಮಾ ಹೊಂದಿದವರು ಒಟ್ಟು 20 ಗಂಡಸರು, ಪದವೀಧರರು, ಅದರಿಂದ ಮೇಲ್ಪಟ್ಟವರು ಒಟ್ಟು 164 (90 ಗಂ., 74 ಹೆಂ.) ಇದ್ದರು. 1991ರ ಜನಗಣತಿಯ ತಾತ್ಕಾಲಿಕ ವರದಿಯಂತೆ ಜಿಲ್ಲೆಯಲ್ಲಿ ಒಟ್ಟು 4,85,229 ಜನಸಂಖ್ಯೆ ಇದ್ದು, ಇದರಲ್ಲಿ ಒಟ್ಟು 2,83,921 (ಶೇ. 58.51) ಮಂದಿ ಅಕ್ಷರಸ್ಥರಾಗಿದ್ದರು. (ಈ ದಶಕದ ಜನಗಣತಿಯಲ್ಲಿ 7 ವರ್ಷದ ಒಳಗಿನ ಮಕ್ಕಳನ್ನು ಅನಕ್ಷರಸ್ಥರೆಂದು ಪರಿಗಣಿಸಿ ಸಾಕ್ಷರತೆಯ ಎಣಿಕೆಯಲ್ಲಿ ಕೈಬಿಡಲಾಗಿದೆ). ಮೇಲ್ಕಂಡ ಅಕ್ಷರಸ್ಥರ ಸಂಖ್ಯೆಯಲ್ಲಿ ಒಟ್ಟು 1,56,886 ಮಂದಿ ಅಥವಾ ಶೇ. 64.30 ಗಂಡಸರೂ, 1,27,035 ಮಂದಿ ಅಥವಾ ಶೇ. 52.65 ಹೆಂಗಸರೂ ಸೇರಿದ್ದರು. ಈ ಪೈಕಿ ಮಡಿಕೇರಿ ತಾಲೂಕಿನಲ್ಲಿ ಸಾಕ್ಷರರು 83,539 (ಗಂ. 44,946, ಹೆಂ. 38,593), ಸೋಮವಾರಪೇಟೆ ತಾ॥ನಲ್ಲಿ 1,01,420 (ಗಂ. 57,544, ಹೆಂ. 43,876) ಹಾಗೂ ವೀರರಾಜಪೇಟೆ ತಾ॥ನಲ್ಲಿ 98,862 (ಗಂ. 54,290, ಹೆಂ. 44,566).

**ಪೂರ್ವ ಪ್ರಾಥಮಿಕ ಶಿಕ್ಷಣ**

ಪೂರ್ವ ಪ್ರಾಥಮಿಕ ಶಾಲೆಗಳ ಆರಂಭವು ರಾಜ್ಯದಲ್ಲಿನ ಸ್ವಾತಂತ್ರ್ಯೋತ್ತರ ಕಾಲದ ಬೆಳವಣಿಗೆ. ಸಮಾಜ ಕಲ್ಯಾಣ ಮಂಡಲಿಯಿಂದ ಸ್ಥಾಪಿಸಲ್ಪಟ್ಟ, ಮಹಿಳಾ ಪ್ರತಿನಿಧಿಗಳಿಂದ ಕೂಡಿದ ಮಹಿಳಾ ಸಮಾಜಗಳು 1958ರ ವೇಳೆಗೆ ಒಂಭತ್ತು ನರ್ಸರಿ ಶಾಲೆಗಳನ್ನು ಜಿಲ್ಲೆಯಲ್ಲಿ ನಡೆಸುತ್ತಿದ್ದವು. ಈ ಶಾಲಾ ಶಿಕ್ಷಕರ ವೇತನಕ್ಕಾಗಿ ಸರಕಾರದ ಧನಸಹಾಯ ದೊರೆಯುತ್ತಿತ್ತು. ಕ್ರೀಡೋಪಕರಣಗಳು ಮತ್ತು ಪಾಠೋಪಕರಣಗಳಿಗಾಗಿ ಶಿಕ್ಷಣ ಹಾಗೂ ಸಮಾಜ ಕಲ್ಯಾಣ ಇಲಾಖೆಗಳೆರಡೂ ಧನಸಹಾಯ ನೀಡುತ್ತಿದ್ದವು. ಇಂತಹ ಶಾಲೆಗಳಿರದ ಗ್ರಾಮಗಳ ಮಾಧ್ಯಮಿಕ ಶಾಲೆಗಳಲ್ಲಿ 1960 ರಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲಾಯಿತು. ಇವುಗಳಲ್ಲಿ ನರ್ಸರಿ ತರಬೇತಿ ಹೊಂದಿದ ಮಹಿಳೆಯರನ್ನು ಶಿಕ್ಷಕಿಯರಾಗಿ ನೇಮಿಸಲಾಯಿತು. 25 ಪೈಸೆಗಳ ಮಾಸಿಕ ಶುಲ್ಕ ನೀಡಿದ ಎಲ್ಲರಿಗೂ ಇವುಗಳಲ್ಲಿ ಪ್ರವೇಶಾವಕಾಶವಿತ್ತು. 1963ರ ವೇಳೆಗೆ 3 ರಿಂದ 5 ವರ್ಷಗಳ 2,000 ಮಕ್ಕಳು ಈ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿದ್ದರು.

ರಾಜ್ಯ ಪುನರ್ವಿಂಗಡನೆಯಾದ ಮೇಲೆ, ಕೊಡಗಿನ ನರ್ಸರಿ ಶಿಕ್ಷಣ ಇತರೆಡೆಗಳಂತೆ ಸರಕಾರೀ, ಅನುದಾನಿತ ಹಾಗೂ ಅನುದಾನ ರಹಿತ ಸಂಸ್ಥೆಗಳಿಂದ ನಡೆಸಲ್ಪಡುತ್ತಿದೆ. ಈ ಶಾಲಾ ಶಿಕ್ಷಕರಿಗೆ ತರಬೇತಿ ನೀಡಲು ಅನೇಕ ಖಾಸಗಿ ಸಂಸ್ಥೆಗಳು ಪ್ರಾರಂಭವಾಗಿವೆ. ಸರಕಾರವೂ ಈ ಕೆಲವನ್ನು ನಡೆಸುತ್ತಿದೆ. ಈ ಕೆಳಕಂಡ ಕೋಷ್ಟಕದಲ್ಲಿ 1990–91ನೇಯ ಸಾಲಿಗೆ ತಾಲೂಕುವಾರು ಪೂರ್ವ ಪ್ರಾಥಮಿಕ ಶಾಲೆಗಳ ವಿವರಗಳನ್ನು ನೀಡಲಾಗಿದೆ.

1990–91ನೇಯ ಸಾಲಿಗೆ ಜಿಲ್ಲೆಯ ಪೂರ್ವ ಪ್ರಾಥಮಿಕ ಶಾಲೆಗಳ ವಿವರ.

| ತಾಲೂಕುಗಳು | ಒಟ್ಟು ಶಾಲೆಗಳು | ಒಟ್ಟು ವಿದ್ಯಾರ್ಥಿಗಳು | | ಒಟ್ಟು ಪ.ಜಾತಿ ವಿದ್ಯಾರ್ಥಿಗಳು | | ಒಟ್ಟು ಪ.ವರ್ಗ ವಿದ್ಯಾರ್ಥಿಗಳು | |
|---|---|---|---|---|---|---|---|
| | | ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. |
| ಮಡಿಕೇರಿ | 20 | 645 | 585 | 27 | 13 | 04 | 03 |
| ಸೋಮವಾರಪೇಟೆ | 23 | 268 | 205 | 25 | 19 | 06 | 03 |
| ವೀರರಾಜಪೇಟೆ | 27 | 652 | 518 | 29 | 13 | 08 | 04 |
| ಒಟ್ಟು | 70 | 1,565 | 1,308 | 81 | 45 | 18 | 10 |

## ಪ್ರಾಥಮಿಕ ಶಿಕ್ಷಣ

ಇಂಗ್ಲಿಷ್ ಅಧಿಕಾರಿಯಾದ ಜನರಲ್ ಫ್ರೇಜರನು 1834 ರಲ್ಲಿ ಫ್ರೇಜರ್‌ಪೇಟೆ (ಕುಶಾಲನಗರ)ಯಲ್ಲಿ 300 ರೂ.ಗಳ ಠೇವಣಿ ಹೂಡಿ ಒಂದು ಶಾಲೆಯ ಸ್ಥಾಪನೆಗೆ ಕಾರಣನಾದ. ಈ ಠೇವಣಿಯಿಂದ ಬಂದ ಬಡ್ಡಿಯಲ್ಲಿ ಆ ಶಾಲಾ ಶಿಕ್ಷಕರಿಗೆ ವೇತನ ನೀಡಲಾಗುತ್ತಿತ್ತು. ಕ್ರಮೇಣ ಈ ಶಾಲೆಯನ್ನು ಸರಕಾರ ವಹಿಸಿಕೊಂಡು, ಆ್ಯಂಗ್ಲೊ ವರ್ನಾಕ್ಯುಲರ್ ಶಾಲೆಯಾಗಿ ಪರಿವರ್ತಿಸಿತು. ಇದು ಕೊಡಗಿನ ಮೊದಲ ಆಧುನಿಕ ಮಾದರಿಯ ಪ್ರಾಥಮಿಕ ಶಾಲೆಯಾಯಿತು. 1834ರಲ್ಲೇ ಮಡಿಕೇರಿ ಹಾಗೂ ವೀರರಾಜಪೇಟೆಗಳಲ್ಲಿ ಇಂಗ್ಲಿಷ್ ಕೂಡ ಕಲಿಸುವ ಶಾಲೆಗಳನ್ನೂ, ಕಿಗ್ಗಟ್ಟುನಾಡಿನ ಪೊನ್ನಂಪೇಟೆಯಲ್ಲಿ ಒಂದು ಕನ್ನಡ ಶಾಲೆಯನ್ನೂ ಆರಂಭಿಸಿದರು. ಈ ಮೂರು ಸರಕಾರೀ ಶಾಲೆಗಳ ಆಗಿನ ವಾರ್ಷಿಕ ವೆಚ್ಚ ಒಟ್ಟು ರೂ. 90 ಆಗಿತ್ತು ಎಂದು ತಿಳಿಯುತ್ತದೆ. 1842ರಲ್ಲಿ ವೀರರಾಜಪೇಟೆಯ ಕ್ಯಾಥಲಿಕ್ ಚರ್ಚಿನ ಆವರಣದಲ್ಲಿ ಒಂದು ಪ್ರಾಥಮಿಕ ಶಾಲೆಯನ್ನು ಆ ಮತದ ಪಾದ್ರಿಗಳು ಸ್ಥಾಪಿಸಿದರು. ವೀರರಾಜಪೇಟೆಯ ಸರಕಾರೀ ಶಾಲೆಯ ಮಕ್ಕಳೆಲ್ಲ ಈ ಶಾಲೆಗೆ ಸೇರಿದ್ದರಿಂದ ಅಲ್ಲಿನ ಸರಕಾರೀ ಶಾಲೆ ಮುಚ್ಚಲ್ಪಟ್ಟಿತು. 1843ರ ವೇಳೆಗೆ ಜಿಲ್ಲೆಯ ಇತರೆಡೆಗಳಲ್ಲಿ ಒಟ್ಟು 11 ಕನ್ನಡ ಶಾಲೆಗಳು ಪ್ರಾರಂಭವಾದವು. 1854ರಲ್ಲಿ ಜಿಲ್ಲೆಯಲ್ಲಿ ಒಟ್ಟು 21 ಕನ್ನಡ ಶಾಲೆಗಳಿದ್ದವು. ಈ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ 30ಕ್ಕಿಂತ ಮೇಲ್ಪಟ್ಟಿದ್ದಲ್ಲಿ, ಶಿಕ್ಷಕರಿಗೆ ತಿಂಗಳಿಗೆ 5 ರೂ.ಗಳ ಸಂಬಳ ದೊರೆಯುತ್ತಿತ್ತು. 30ಕ್ಕಿಂತ ಕಡಿಮೆ ಸಂಖ್ಯೆಯ ಮಕ್ಕಳಿದ್ದಲ್ಲಿ ಪ್ರತೀ ಐದು ಮಕ್ಕಳ ಕಡಿತಕ್ಕೆ ಒಂದು ರೂಪಾಯಿಯಂತೆ ಉಪಾಧ್ಯಾಯರ ಸಂಬಳ ಕಡಿಮೆಯಾಗುತ್ತಿತ್ತು. ಮೇಲಿನ ಶಾಲೆಗಳಲ್ಲಿ ಕೆಲವು ಏಕೋಪಾಧ್ಯಾಯ ಶಾಲೆಗಳಾಗಿದ್ದು, ಶಿಕ್ಷಕರಿಗೆ $2\frac{1}{2}$ ರೂ. ಸಂಬಳ ದೊರೆಯುತ್ತಿತ್ತು. ಬಾಸೆಲ್ ಮಿಷನ್ನಿನ ಡಾ|| ಮೋಗ್ಲಿಂಗ್ 1855ರಲ್ಲಿ ಸರಕಾರದ ಧನ ಸಹಾಯದಿಂದ ಮಡಿಕೇರಿಯಲ್ಲಿ ಒಂದು ಲೋಯರ್ ಸೆಕೆಂಡರಿ ಶಾಲೆ ಸ್ಥಾಪಿಸಿದನು. 1856ರಲ್ಲೇ ಬಾಸೆಲ್ ಮಿಷನ್‌ನ ರಿಕ್ಟರ್ ಇವರ ಮುಖ್ಯೋಪಾಧ್ಯಾಯನಾಗಿ ಸರಕಾರದಿಂದ ನೇಮಿಸಲ್ಪಟ್ಟನು. ಆಗ ಇದನ್ನು 'ಸುಪೀರಿಯರ್ ಇಂಗ್ಲಿಷ್ ಸ್ಕೂಲ್' ಎಂದು ಕರೆಯಲಾಗುತ್ತಿತ್ತು. ಇದನ್ನೇ ಮುಂದೆ 'ಸೆಂಟ್ರಲ್ ಸ್ಕೂಲ್' ಎಂದು ಕರೆಯಲಾಯಿತು. ಮೈಸೂರು, ಕೊಡಗುಗಳಲ್ಲಿ ಏಕರೂಪ ವಿದ್ಯಾಭ್ಯಾಸ ಪದ್ಧತಿಗೆ 1857 ರಲ್ಲಿ ಸರಕಾರ ಮಂಜೂರಾತಿ ನೀಡಿತು. ಇದರಂತೆ, ಮಡಿಕೇರಿಯ ಲೋಯರ್ ಸೆಕೆಂಡರಿ ಶಾಲೆಯ ಜೊತೆಗೆ ಕೊಡಗಿನ ಆಗಿನ ಆರು ತಾಲೂಕು ಕೇಂದ್ರಗಳಲ್ಲಿ (ಮಡಿಕೇರಿ, ವೀರರಾಜಪೇಟೆ, ನಾಪೋಕ್ಲು, ಹುದಿಕೇರಿ, ಶನಿವಾರಸಂತೆ, ಕುಶಾಲನಗರ) ಸರಕಾರಿ ಪ್ರಾಥಮಿಕ ಶಾಲೆಗಳು ಪ್ರಾರಂಭವಾಗಿ, ಎಲ್ಲಾ ಶಾಲೆಗಳೂ ಮೈಸೂರು ವಿದ್ಯಾ ಇಲಾಖೆಯ ಒಬ್ಬ ಅಧಿಕಾರಿಯ ಮೇಲ್ವಿಚಾರಣೆಗೆ ಒಳಪಟ್ಟವು. 1860ರಲ್ಲಿ ಡಾ|| ಮೋಗ್ಲಿಂಗ್ ಅನಾರೋಗ್ಯದಿಂದ ಸ್ವದೇಶಕ್ಕೆ ಮರಳಿದಾಗ, ರೆ|| ರಿಕ್ಟರ್ ಮಡಿಕೇರಿ ಶಾಲೆಯ ಪ್ರಿನ್ಸಿಪಾಲನಾಗಿ, ಕನ್ನಡ ಶಾಲೆಗಳ ಉಪಾಧ್ಯಾಯರಿಗೆ ಶಿಕ್ಷಕ ತರಬೇತಿಯನ್ನು ಅದೇ ಶಾಲೆಯಲ್ಲಿ ನೀಡುವ ಏರ್ಪಾಡು ಮಾಡಿದನು. ಈ ತರಬೇತಿ ಹೊಂದಿದ ಶಿಕ್ಷಕರಿಗೆ ತಿಂಗಳಿಗೆ ಏಳು ರೂಪಾಯಿ ಸಂಬಳ ನೀಡುವ ವ್ಯವಸ್ಥೆಯಾಯಿತು. ಯೂರೋಪಿಯನ್ ಪ್ಲಾಂಟರುಗಳೊಡನೆ ಭಾಷಾ ಸಂಪರ್ಕವಿಲ್ಲದ ಕೊಡಗಿನ ಜನರಿಗೆ ಇಂಗ್ಲಿಷ್ ಕಲಿಕೆ ಅನಿವಾರ್ಯವಾಯಿತು. ಸರಕಾರಕ್ಕೆ ಇವರು ಇದರ ಬಗ್ಗೆ ಮನವಿ ಸಲ್ಲಿಸಲಾಗಿ, 1863ರಲ್ಲಿ 176 ಮಂದಿ ಸ್ಥಳೀಯರನ್ನು ಸೆಂಟ್ರಲ್ ಸ್ಕೂಲಿನ ಇಂಗ್ಲಿಷ್ ಬೋಧನಾ ತರಗತಿಗಳಿಗೆ ಸೇರಿಸಿಕೊಳ್ಳಲಾಯಿತು. 1875 ರಲ್ಲಿ ಇದರ ಸಂಖ್ಯೆ 348ಕ್ಕೆ ಏರಿತು. ಈ ವೇಳೆಗೆ ಜಿಲ್ಲೆಯಲ್ಲಿ ಒಟ್ಟು 1,545 ಶಾಲಾ ವಿದ್ಯಾರ್ಥಿಗಳಿದ್ದು, 1,422ಮಂದಿ ಸರಕಾರಿ ಶಾಲೆಗಳಲ್ಲಿಯೂ, ಉಳಿದವರು ಇತರೆ ಶಾಲೆಗಳಲ್ಲಿಯೂ ವಿದ್ಯಾಭ್ಯಾಸ ಮಾಡುತ್ತಿದ್ದರು. ಇವರಲ್ಲಿ ಒಟ್ಟು 1,082 ಮಂದಿ ಕೊಡವರಾಗಿದ್ದರು. 1877ರ ವೇಳೆಗೆ ಜಿಲ್ಲೆಯಲ್ಲಿ ಕನ್ನಡ ಮತ್ತು ಹಿಂದೂಸ್ತಾನಿ ವಿಭಾಗಗಳನ್ನೊಳಗೊಂಡ 348 ವಿದ್ಯಾರ್ಥಿಗಳುಳ್ಳ ಮಡಿಕೇರಿಯ ಸೆಂಟ್ರಲ್ ಶಾಲೆ, 117 ವಿದ್ಯಾರ್ಥಿಗಳಿದ್ದ ನಾಲ್ಕು ಎ.ವಿ. ಶಾಲೆಗಳು, 1,610 ವಿದ್ಯಾರ್ಥಿಗಳಿದ್ದ (1,028 ಕೊಡವ ಗಂಡು ಮಕ್ಕಳು, 95 ಕೊಡವ ಹೆಣ್ಣುಮಕ್ಕಳು ಸೇರಿ) 36 ನಾಡ ಶಾಲೆಗಳು, ಆರು ವಿದ್ಯಾರ್ಥಿಗಳಿದ್ದ ಒಂದು ನಾರ್ಮಲ್‌ಶಾಲೆ, 66 ವಿದ್ಯಾರ್ಥಿಗಳಿದ್ದ (55 ಗಂ., 11 ಹೆಂ.) ಎರಡು ಖಾಸಗಿ ಅನುದಾನಿತ ಶಾಲೆಗಳು, 559 ವಿದ್ಯಾರ್ಥಿಗಳಿದ್ದ 39 ಅನುದಾನ ರಹಿತ ಶಾಲೆಗಳಿದ್ದವು. ಸೆಂಟ್ರಲ್ ಶಾಲೆಗೆ ಸೇರಿದ ವಿದ್ಯಾರ್ಥಿನಿಲಯದಲ್ಲಿ ಒಟ್ಟು 91 ಮಂದಿ ವಿದ್ಯಾರ್ಥಿಗಳಿದ್ದರು. ಹೀಗೆ, ಜಿಲ್ಲೆಯ ಒಟ್ಟು 84 ಶಾಲೆಗಳಲ್ಲಿ ಒಟ್ಟು 2,739 ವಿದ್ಯಾರ್ಥಿಗಳಿದ್ದರು. ಮೂರ್ನಾಡುವಿನಲ್ಲಿ 1882 ರಲ್ಲಿ ಬಿದ್ದಂಡ ಅಯ್ಯಣ್ಣನವರು ಕಟ್ಟಿಸಿದ ಕಟ್ಟಡದಲ್ಲಿ ಪ್ರಾಥಮಿಕ ಶಾಲೆಯೊಂದು ಪ್ರಾರಂಭವಾಗಿ, 1982ಕ್ಕೆ ನೂರು ವರ್ಷ ತುಂಬಿ, ಇದರ ಶತಮಾನೋತ್ಸವ 1992ನೇ

ಜನವರಿಯಲ್ಲಿ ನೆರವೇರಿತು. ಸುಮಾರು 10 ಲಕ್ಷ ರೂ.ಗಳ ವೆಚ್ಚದಲ್ಲಿ ಶತಮಾನೋತ್ಸವ ಕಟ್ಟಡವನ್ನೂ ಹೊಂದಿರುವ ಈ ಶಾಲೆಯಲ್ಲಿ 1991-92ನೇ ಸಾಲಿಗೆ 700 ಮಂದಿ ವಿದ್ಯಾರ್ಥಿಗಳೂ, 19 ಮಂದಿ ಅಧ್ಯಾಪಕರೂ ಇದ್ದರು.

ಕ್ರೈಸ್ತ ಮಿಷನರಿಗಳಿಂದ ಸ್ಥಾಪಿಸಲ್ಪಟ್ಟ ಪ್ರಾಥಮಿಕ ಶಾಲೆಗಳು 1901ರಲ್ಲಿ ಜಿಲ್ಲಾ ಬೋರ್ಡ್‌ನ ಅಧಿಕಾರ ವ್ಯಾಪ್ತಿಗೊಳಪಟ್ಟವು. ಜಿಲ್ಲಾ ಬೋರ್ಡ್ ಶಿಕ್ಷಣದ ವಿಸ್ತಾರಕ್ಕಾಗಿ ವಿಶೇಷವಾಗಿ ಶ್ರಮಿಸಿತು. 1904ರ ವೇಳೆಗೆ 4,600 ವಿದ್ಯಾರ್ಥಿಗಳನ್ನು ಒಳಗೊಂಡ 88 ಸರಕಾರೀ ಶಾಲೆಗಳೂ, 33 ಖಾಸಗಿ ಶಾಲೆಗಳೂ ಇದ್ದವು. ಅದೇ ವರ್ಷ ಐದು ತಾಲೂಕು ಮುಖ್ಯ ಕೇಂದ್ರಗಳಲ್ಲಿ ಮಾದರಿ ಪ್ರಾಥಮಿಕ ಶಾಲೆಗಳು ಸ್ಥಾಪಿತವಾದವು. ಜಿಲ್ಲಾ ಬೋರ್ಡಿನ ವ್ಯಾಪ್ತಿಯಲ್ಲಿ 1905ರ ವೇಳೆಗೆ 66 ಪ್ರಾಥಮಿಕ ಶಾಲೆಗಳಿದ್ದು, ಅವುಗಳಲ್ಲಿ ಆರು ಪರಿಶಿಷ್ಟ ಜಾತಿಯವರಿಗೆ ಮೀಸಲಾಗಿದ್ದವು. 1910ರಲ್ಲಿ ಕೆಲವು ಕನ್ನಡ ಶಾಲೆಗಳಲ್ಲಿ ಇಂಗ್ಲಿಷ್ ಬೋಧನೆ ಪ್ರಾರಂಭವಾಯಿತು. 1912ರಲ್ಲಿ ಜಿಲ್ಲೆಯಲ್ಲಿ ಒಟ್ಟು 86 ಪ್ರಾಥಮಿಕ ಶಾಲೆಗಳಿದ್ದು, ಅವುಗಳಲ್ಲಿ 5,743 ಮಕ್ಕಳು (3,970 ಗಂ., 1,773 ಹೆಂ.) ವ್ಯಾಸಂಗ ಮಾಡುತ್ತಿದ್ದರು. 1922ರಲ್ಲಿ ಶಾಲೆಗಳ ಸಂಖ್ಯೆ 109 ಆಗಿದ್ದು, ಒಟ್ಟು ಮಕ್ಕಳ ಸಂಖ್ಯೆ 7,709 (5,449 ಗಂ, 2,260 ಹೆಂ.) ಆಗಿದ್ದಿತು.

**ಬೋಧನಾಕ್ರಮ :** 19ನೇಯ ಶತಮಾನದಲ್ಲಿ ಸಾಮಾನ್ಯವಾಗಿ ಪ್ರಾಥಮಿಕ ಶಾಲೆಗಳಲ್ಲಿ ಓದು, ಬರಹ ಹಾಗೂ ಗಣಿತಕ್ಕೆ ಆದ್ಯತೆ ನೀಡಲಾಗುತ್ತಿತ್ತು. ಕನ್ನಡ, ಉರ್ದುಗಳನ್ನು ಕಲಿಸಲಾಗುತ್ತಿತ್ತು. ಅಕ್ಷರಗಳನ್ನು ಮರಳಿನ ಮೇಲೆ ಅಭ್ಯಾಸ ಮಾಡಿಸಲಾಗುತ್ತಿತ್ತು. ಹಲಗೆಯ ಬಳಕೆ ನಂತರ ರೂಢಿಗೆ ಬಂದಿತು. ವಿದ್ಯಾರ್ಥಿಗಳು ಮುದ್ರಿತ ಅಕ್ಷರಗಳನ್ನು ಓದುವುದನ್ನು ಕಲಿತ ನಂತರ ಅವರಿಗೆ ಕೈಬರಹದ ಕಾಗದ ಪತ್ರ ಓದುವುದನ್ನು ಅಭ್ಯಾಸ ಮಾಡಿಸಲಾಗುತ್ತಿತ್ತು. ಮುಸಲ್ಮಾನ ವಿದ್ಯಾರ್ಥಿಗಳಿಗೆ ಮಸೀದಿಗಳಲ್ಲಿ ಕುರಾನ್ ಪಠನ ಏರ್ಪಾಡು ಮಾಡಲಾಗಿತ್ತು.

**ಪ್ರಾಥಮಿಕ ಶಾಲೆಗಳ ತನಿಖೆ :** ಮಡಿಕೇರಿ ಸೆಂಟ್ರಲ್ ಶಾಲೆಯ ಮುಖ್ಯೋಪಾಧ್ಯಾಯರೇ ಎ.ವಿ. ಶಾಲೆಗಳ ತನಿಖೆ ನಡೆಸುತ್ತಿದ್ದರು. ಇವರಿಗೆ ಸಬ್-ಡೆಪ್ಯುಟಿ ಇನ್ಸ್‌ಪೆಕ್ಟರು ಸಹಾಯಕರಾಗಿದ್ದರು. 1899ರಲ್ಲಿ ಹೆಣ್ಣುಮಕ್ಕಳ ಶಾಲೆಗಳ ತನಿಖೆಯನ್ನು ಮದರಾಸ್ ಪ್ರಾಂತ್ಯದ ತನಿಖಾಧಿಕಾರಿಯವರೇ ನಡೆಸುತ್ತಿದ್ದರು. 1901 ರಿಂದ ಪ್ರಾಥಮಿಕ ಶಿಕ್ಷಣ ಜಿಲ್ಲಾ ಮಂಡಲಿಗಳ ಆಡಳಿತಕ್ಕೆ ಒಳಪಟ್ಟಿತು. ಆದರೆ, ಮಡಿಕೇರಿ ಮತ್ತು ವೀರರಾಜಪೇಟೆಗಳ ಮುನಿಸಿಪಾಲಿಟಿಗಳು ತಮ್ಮದೇ ಆದ ಪ್ರಾಥಮಿಕ ಶಾಲೆಗಳನ್ನು ನಡೆಸುತ್ತಿದ್ದವು. 1905 ರಿಂದ ಕೊಡಗಿನ ಎಲ್ಲಾ ಶಾಲೆಗಳ ತನಿಖೆ, ಕಲ್ಲಿಕೋಟೆಯಲ್ಲಿ ಕೇಂದ್ರ ಸ್ಥಾನ ಹೊಂದಿದ ತನಿಖಾಧಿಕಾರಿಯಿಂದ ನಡೆಯುತ್ತಿತ್ತು. ರಾಜ್ಯ ಪುನರ್ವಿಂಗಡನೆಯ ತರುವಾಯ ಇದು ಬದಲಾವಣೆಯಾಯಿತು. 1903ರಲ್ಲಿ ಜಿಲ್ಲೆಯಲ್ಲಿ ಒಟ್ಟು 88 ಸರಕಾರಿ ಹಾಗೂ 33 ಖಾಸಗಿ ಶಾಲೆಗಳಿದ್ದು, ಅವುಗಳಲ್ಲಿ ಒಟ್ಟು 4,599 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದರು. ಅವರಲ್ಲಿ 3,636 ಗಂಡು ಮತ್ತು 967 ಹೆಣ್ಣು ಮಕ್ಕಳಿದ್ದರು. ಶಾಲೆಗೆ ಹೋಗುವ ಮಕ್ಕಳ ಸಂಖ್ಯೆಯಲ್ಲಿ ಶೇ.15.7 ಗಂಡು ಮತ್ತು ಶೇ. 4.5 ಹೆಣ್ಣು ಮಕ್ಕಳಿದ್ದರು. ಇದೇ ವರ್ಷ ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ಒಂದು ತರಬೇತಿ ಕೇಂದ್ರ ಸ್ಥಾಪನೆಯಾಯಿತು. ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ 1834-35ರಲ್ಲಿ ಮೂರು ಶಾಲೆಗಳಲ್ಲಿ 60 ಮಕ್ಕಳು, 1859-60ರಲ್ಲಿ 26 ಶಾಲೆಗಳಲ್ಲಿ 680 ಮಕ್ಕಳು, 1869-70ರಲ್ಲಿ 27 ಶಾಲೆಗಳಲ್ಲಿ 1,414 ಮಕ್ಕಳು, 1874-75ರಲ್ಲಿ 44 ಶಾಲೆಗಳಲ್ಲಿ 2,167 ಮಕ್ಕಳು, 1912-13ರಲ್ಲಿ 125 ಶಾಲೆಗಳಲ್ಲಿ 6,942 ಮಕ್ಕಳು, 1916-17ರಲ್ಲಿ 115 ಶಾಲೆಗಳಲ್ಲಿ 7,745 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದರು.

**ವಿದ್ಯಾ ಇಲಾಖೆಯ ಆಡಳಿತ :** 1865 ರಿಂದ 68ರವರೆಗೆ ಬಿ.ಎಲ್.ರೈಸ್ ರವರು ಕೊಡಗಿನ ಶಾಲಾ ತನಿಖಾಧಿಕಾರಿಯಾಗಿದ್ದರು. 1868 ರಿಂದ 1883ರವರೆಗೆ ಅವರು ಮೈಸೂರು ಸಂಸ್ಥಾನದ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿ ನೇಮಕವಾಗಿ, ನಂತರ ಸರಕಾರದ ಶಿಕ್ಷಣ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದರು. 1883 ರಿಂದ ಶಾಲೆಗಳ ತನಿಖೆಯನ್ನು ಮದ್ರಾಸಿನ ಪ್ರಾಂತ್ಯದ ಪಶ್ಚಿಮವಲಯಕ್ಕೆ ವಹಿಸಿದರು. ಕೊಡಗಿನ ವಿದ್ಯಾ ಇಲಾಖೆ ದಕ್ಷಿಣ ಕನ್ನಡ ವೃತ್ತ(ಸರ್ಕಲ್)ದ ಆಡಳಿತದಲ್ಲಿದ್ದುದರಿಂದ, ಜಿಲ್ಲೆಯ ಶೇಕಡಾ 90ರಷ್ಟು ಅಧ್ಯಾಪಕರು ದಕ್ಷಿಣ ಕನ್ನಡದವರಾಗಿದ್ದರು. ಇವರಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದವರು ಜಿಲ್ಲಾ ಶಿಕ್ಷಣಾಧಿಕಾರಿ ರಘುನಾಥರಾಯರು. ತಮ್ಮ ಸೇವಾವಧಿಯಲ್ಲಿ ಇವರು ಜಿಲ್ಲೆಯಲ್ಲಿದ್ದ ಪ್ರಾಥಮಿಕ ಶಾಲೆಗಳ ಸಂಖ್ಯೆಯನ್ನು 90ಕ್ಕೆ ಏರಿಸಿದರು (1907). ಮಡಿಕೇರಿಯ ಕವಿ ಶಾಮರಾಯರಿಂದ ನೈತಿಕ ಶಾಸ್ತ್ರದ ಬಗ್ಗೆ ಪುಸ್ತಕ ಬರೆಯಿಸಿ ಅದನ್ನು ಶಾಲೆಯ ಪಠ್ಯಕ್ರಮದಲ್ಲಿ ಸೇರಿಸಿದರು. ಇವರ

ನಂತರ ಎ. ರಾಮರಾವ್ ಅವರು ಜಿಲ್ಲೆಯ ಅಸಿಸ್ಟೆಂಟ್ ಇನ್ಸ್‌ಪೆಕ್ಟರಾದರು. ಇವರ ಕಾಲದಲ್ಲಿ ಜಿಲ್ಲೆಯ ಪ್ರಾಥಮಿಕ ಶಿಕ್ಷಣ ಸರ್ವತೋಮುಖ ಏಳಿಗೆ ಕಂಡಿತು. ಇವರಿಗೆ ಸಹಾಯಕರಾಗಿ ಉತ್ತರ ಮತ್ತು ದಕ್ಷಿಣ ಕೊಡಗಿಗೆ ಒಬ್ಬೊಬ್ಬರಂತೆ ಇಬ್ಬರು ಸೂಪರ್‌ವೈಸರ್‌ಗಳು ನೇಮಕವಾದರು. ಇದೇ ಸಮಯದಲ್ಲಿ ಎಲ್ಲಾ ಶಾಲೆಗಳಿಗೆ ಪಾಠೋಪಕರಣ ಮತ್ತು ಪೀಠೋಪಕರಣಗಳ ಸರಬರಾಜಾಯಿತು. ಉಪಾಧ್ಯಾಯರ ವೇತನಗಳೂ ಉತ್ತಮಗೊಂಡವು. ವೃತ್ತಿ ಶಿಕ್ಷಣಗಳಾದ ನೇಯ್ಗೆ (ಮಗ್ಗ) ಕೆಲಸವನ್ನು ಶನಿವಾರಸಂತೆಯಲ್ಲಿಯೂ, ಚಿತ್ರದ ಕೆಲಸವನ್ನು ನಾಪೋಕ್ಲುವಿನಲ್ಲಿಯೂ, ಮರಗೆಲಸವನ್ನು ಮಡಿಕೇರಿಯಲ್ಲಿಯೂ, ದರ್ಜಿ ಕೆಲಸವನ್ನು ವೀರರಾಜಪೇಟೆಯಲ್ಲಿಯೂ, ದೋಭಿ/ಲಾಂಡ್ರಿ ಉದ್ಯೋಗವನ್ನು ಪೊನ್ನಂಪೇಟೆಯಲ್ಲಿಯೂ ಸ್ಥಾಪಿಸಲು ಕ್ರಮ ಕೈಗೊಂಡರು. ಇವರ ನಂತರ 1916 ರಿಂದ 1918ರ ವರೆಗೆ ಅಧಿಕಾರದಲ್ಲಿದ್ದ ಆರ್.ಎಂ. ಸವರ್ ಅವರು ವಿದ್ಯಾರ್ಥಿಗಳ ಪಠ್ಯೇತರ ಚಟುವಟಿಕೆಗಳಿಗೆ ಉತ್ತೇಜನ ನೀಡಿದರು. 1920ರಲ್ಲಿ ಅಸಿಸ್ಟೆಂಟ್ ಇನ್ಸ್‌ಪೆಕ್ಟರಾಗಿ ನೇಮಕಗೊಂಡ ಪಂಜೆ ಮಂಗೇಶರಾಯರು ಅಲ್ಪಾವಧಿಯಲ್ಲಿಯೇ ಉತ್ತಮ ಸೇವೆ ಸಲ್ಲಿಸಿ 1924ರಲ್ಲಿ ಸೆಂಟ್ರಲ್ ಶಾಲೆಯ ಪ್ರಥಮ ಭಾರತೀಯ ಮುಖ್ಯೋಪಾಧ್ಯಾಯರಾಗಿ ಬಡ್ತಿ ಹೊಂದಿದರು. ಖ್ಯಾತ ಕವಿಯೂ ಆಗಿದ್ದ ಇವರು ಕೊಡಗಿನ ಜನಪ್ರಿಯ 'ಹುತ್ತರಿ ಹಾಡು' ಎಂಬ ಕವನವನ್ನು ರಚಿಸಿದರು. ಇವರ ನಂತರ ಕೊಡಗಿನ ವಿದ್ಯಾಧಿಕಾರಿಯಾದ ಪಿ.ಸಿ. ಉತ್ತಯ್ಯ ಅವರು ಅಖಿಲ ಕೊಡಗು ವಿದ್ಯಾ ಇಲಾಖೆಯ ಸಂಘ ಪ್ರಾರಂಭಿಸಿದರು.

1931ರಲ್ಲಿ ಜಿಲ್ಲೆಯಲ್ಲಿ 8,908 ಮಕ್ಕಳನ್ನೊಳಗೊಂಡ 108 ಪ್ರಾಥಮಿಕ ಶಾಲೆಗಳು ಇದ್ದವು. ಇವುಗಳಲ್ಲಿ ಕನ್ನಡ, ಗಣಿತ, ಇತಿಹಾಸ, ಭಾರತೀಯ ಭೂಗೋಳ, ಪೌರನೀತಿ ಮುಂತಾದ ವಿಷಯಗಳು ಬೋಧಿಸಲ್ಪಡುತ್ತಿದ್ದವು. 3ನೇ ತರಗತಿಯಿಂದ ಇಂಗ್ಲಿಷ್ ಹೇಳಿಕೊಡಲಾಗುತ್ತಿತ್ತು. ಈ ಶಾಲೆಗಳೊಂದಿಗೆ, ಶಿಕ್ಷಣ ಇಲಾಖೆಯ ಚೌಕಟ್ಟಿಗೆ ಒಳಪಡದ 405 ಮಕ್ಕಳನ್ನು ಹೊಂದಿದ 17 ಪ್ರಾಥಮಿಕ ಶಾಲೆಗಳಿದ್ದವು. 1931 ರಿಂದ 41ರ ಒಳಗೆ ಜಿಲ್ಲಾ ಮಂಡಳಿಯ ಪ್ರಾಥಮಿಕ ಶಾಲೆಗಳನ್ನೆಲ್ಲ ಮಾಧ್ಯಮಿಕ ಶಾಲೆಗಳಾಗಿ ಪರಿವರ್ತಿಸಿದಾಗ, ಹಳ್ಳಿಯ ಸಾರ್ವಜನಿಕರು ಶಾಲಾ ಕಟ್ಟಡಗಳನ್ನು ಒದಗಿಸಿದ್ದೇ ಅಲ್ಲದೆ, ಅವಕ್ಕೆ ಪೀಠೋಪಕರಣಗಳನ್ನೂ ನೀಡಿದರು. ಇದೇ ದಶಕದಲ್ಲಿ ಅನುದಾನ ರಹಿತ ಶಾಲೆಗಳಿದ್ದ ಹಳ್ಳಿಗಳಲ್ಲಿ ಜಿಲ್ಲಾ ಬೋರ್ಡ್ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿತು. ಇಂತಹ ಶಾಲೆಗಳು ಗಂಡು ಮಕ್ಕಳಿಗಾಗಿ ಒಟ್ಟು 118 ಮತ್ತು ಹೆಣ್ಣು ಮಕ್ಕಳಿಗಾಗಿ ಎರಡು ಇದ್ದವು. ಇವುಗಳಲ್ಲಿ ಕ್ರಮವಾಗಿ, 11,789 ಮತ್ತು 76 ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರಿದ್ದರು. ಈ 120 ಶಾಲೆಗಳಲ್ಲಿ 25 ಶಾಲೆಗಳು ಉನ್ನತ ಪ್ರಾಥಮಿಕ ಶಾಲೆಗಳಾಗಿದ್ದವು. 1946–47ರ ವೇಳೆಗೆ ಜಿಲ್ಲೆಯಲ್ಲಿ ಒಟ್ಟು 119 ಪ್ರಾಥಮಿಕ ಶಾಲೆಗಳೂ, (3 ಸರಕಾರಿ, 96 ಜಿಲ್ಲಾ ಬೋರ್ಡ್/ಮುನಿಸಿಪಾಲಿಟಿ, 20 ಖಾಸಗೀ ಅನುದಾನ ರಹಿತ) ಮತ್ತು 28 ಮಾಧ್ಯಮಿಕ ಅಥವಾ ಉನ್ನತ ಪ್ರಾಥಮಿಕ ಶಾಲೆಗಳು (ಮೂರು ಸರಕಾರಿ ಮತ್ತು 25 ಜಿಲ್ಲಾ ಬೋರ್ಡ್/ಮುನಿಸಿಪಾಲಿಟಿ) ಇದ್ದವು.

**1956ರ ನಂತರ :** ರಾಜ್ಯ ಪುನರ್ವಿಂಗಡನೆಯ ನಂತರ ಕೊಡಗಿನ ವಿದ್ಯಾಧಿಕಾರಿಯ ಕೈಕೆಳಗೆ ಮೂರು ಮಂದಿ ಸಬ್ ಡಿವಿಷನ್ ಇನ್ಸ್‌ಪೆಕ್ಟರುಗಳು ಮತ್ತು ಮೂರು ಮಂದಿ ಡೆಪ್ಯುಟಿ ಇನ್ಸ್‌ಪೆಕ್ಟರುಗಳೂ ಇದ್ದರು. ಸೀನಿಯರ್ ಬೇಸಿಕ್ ಶಾಲೆಗಳ ಮತ್ತು ಪ್ರಾಥಮಿಕ ಶಾಲೆಗಳ ಮೇಲ್ವಿಚಾರಣೆಯನ್ನು ಜಿಲ್ಲಾ ವಿದ್ಯಾಧಿಕಾರಿ (ಡಿಇಒ) ನಡೆಸುತ್ತಿದ್ದರು. ಇವರಲ್ಲದೆ, ದೈಹಿಕ ಶಿಕ್ಷಣ ತನಿಖಾಧಿಕಾರಿ, ಒಬ್ಬ ಹಿಂದಿ ಪ್ರಚಾರಕರು, ಒಬ್ಬ ವಿಜ್ಞಾನ ವಿದ್ಯಾಪ್ರಗತಿ ವೀಕ್ಷಕರು ಮತ್ತು ಒಬ್ಬ ಸಮಾಜ ಶಿಕ್ಷಣ ವ್ಯವಸ್ಥಾಪಕರೂ ಇದ್ದರು. ಪ್ರೌಢಶಾಲೆಗಳ ತನಿಖೆಯನ್ನು ಸ್ವತಃ ಉಪನಿರ್ದೇಶಕರೇ ಮಾಡುತ್ತಿದ್ದರು.

1956–57 ಶೈಕ್ಷಣಿಕ ವರ್ಷಕ್ಕೆ ಜಿಲ್ಲೆಯಲ್ಲಿ ಒಟ್ಟು 7,671 (4,386 ಗಂ., 3,285 ಹೆಂ.) ಮಕ್ಕಳನ್ನೊಳಗೊಂಡ 81 ಸರಕಾರಿ ಶಾಲೆಗಳೂ, ಒಟ್ಟು 994 ವಿದ್ಯಾರ್ಥಿಗಳನ್ನೊಳಗೊಂಡ (553 ಗಂ., 441 ಹೆಂ.) ಐದು ಮುನಿಸಿಪಲ್ ಶಾಲೆಗಳೂ, ಮತ್ತು ಒಟ್ಟು 5,363 ವಿದ್ಯಾರ್ಥಿಗಳನ್ನೊಳಗೊಂಡ (2,909 ಗಂ., 2,454 ಹೆಂ.) 106 ಅನುದಾನಿತ ಶಾಲೆಗಳೂ ಇದ್ದವು. ಈ ಒಟ್ಟು 192 ಶಾಲೆಗಳಲ್ಲಿ 60 ಮಡಿಕೇರಿ ತಾಲೂಕಿನಲ್ಲಿಯೂ 66 ಸೋಮವಾರಪೇಟೆ ತಾಲೂಕಿನಲ್ಲಿಯೂ ಮತ್ತು 66 ವೀರರಾಜಪೇಟೆ ತಾಲೂಕಿನಲ್ಲಿಯೂ ಇದ್ದವು. ಇವುಗಳಲ್ಲಿ ಕ್ರಮವಾಗಿ 4,175 (2,278 ಗಂ., 1,877 ಹೆಂ.), 4,097 (2,380 ಗಂ., 1,717 ಹೆಂ. ಮತ್ತು 5,706 (3,170 ಗಂ., 2,536 ಹೆಂ.) ಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ಹಾಗೂ ಇವುಗಳಲ್ಲಿ ಅನುಕ್ರಮವಾಗಿ 125 (96 ಗಂ., 29 ಹೆಂ.), 133 (127 ಗಂ.,

06 ಹೆಂ.) ಮತ್ತು 160 (137 ಗಂ., 23 ಹೆಂ.) ಮಂದಿ ಬೋಧಕ ಸಿಬ್ಬಂದಿ ಇದ್ದರು.

ಮುಂದೆ ನೀಡಿರುವ ಕೋಷ್ಟಕ 1, 2 ಮತ್ತು 3ಗಳಲ್ಲಿ 1990-91ನೇಯ ಸಾಲಿಗೆ ಪ್ರಾಥಮಿಕ ಶಾಲೆಗಳ, ವಿದ್ಯಾರ್ಥಿಗಳ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರ ವಿವರಗಳನ್ನು ನೀಡಲಾಗಿದೆ.

### ಕೋಷ್ಟಕ — 1

### 1990–91ನೇಯ ಸಾಲಿಗೆ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಹಾಗೂ ವಿದ್ಯಾರ್ಥಿಗಳ ವಿವರ

| ತಾಲೂಕುಗಳು | ಒಟ್ಟು ಶಾಲೆಗಳು | ಒಟ್ಟು ವಿದ್ಯಾರ್ಥಿಗಳು | | ಒಟ್ಟು ಪ.ಜಾತಿ ವಿದ್ಯಾರ್ಥಿಗಳು | | ಒಟ್ಟು ಪ.ವರ್ಗ ವಿದ್ಯಾರ್ಥಿಗಳು | |
|---|---|---|---|---|---|---|---|
| | | ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. |
| ಮಡಿಕೇರಿ | 135 | 13,492 | 10,977 | 1,359 | 1,209 | 481 | 415 |
| ಸೋಮವಾರಪೇಟೆ | 154 | 15,771 | 14,148 | 2,455 | 1,988 | 772 | 621 |
| ವೀರರಾಜಪೇಟೆ | 129 | 12,843 | 11,375 | 1,750 | 1,453 | 1,227 | 986 |
| ಒಟ್ಟು | 418 | 42,106 | 36,500 | 5,564 | 4,650 | 2,480 | 2,022 |

### ಕೋಷ್ಟಕ — 2

### 1989–90ನೇಯ ಸಾಲಿಗೆ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ 1 ರಿಂದ 7ರ ವರೆಗೆ ತರಗತಿವಾರು ವಿದ್ಯಾರ್ಥಿಗಳ ವಿವರ

| ತಾಲೂಕುಗಳು | ತರಗತಿ 1 | | ತರಗತಿ 2 | | ತರಗತಿ 3 | | ತರಗತಿ 4 | |
|---|---|---|---|---|---|---|---|---|
| | ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. |
| ಮಡಿಕೇರಿ | 1,654 | 1,506 | 3,102 | 1,656 | 2,541 | 2,245 | 2,038 | 1,846 |
| ಸೋಮವಾರಪೇಟೆ | 2,769 | 2,527 | 2,488 | 2,358 | 2,780 | 2,429 | 2,215 | 2,021 |
| ವೀರರಾಜಪೇಟೆ | 1,890 | 1,713 | 2,088 | 1,824 | 2,677 | 2,527 | 1,906 | 1,641 |
| ಒಟ್ಟು | 6,313 | 5,743 | 7,678 | 5,838 | 7,998 | 7,201 | 6,159 | 5,508 |

| ತಾಲುಕುಗಳು | ತರಗತಿ 5 | | ತರಗತಿ 6 | | ತರಗತಿ 7 | |
|---|---|---|---|---|---|---|
| | ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. |
| ಮಡಿಕೇರಿ | 1,648 | 1,467 | 1,323 | 1,227 | 1,186 | 1,030 |
| ಸೋಮವಾರಪೇಟೆ | 2,040 | 1,970 | 1,924 | 1,499 | 1,565 | 1,344 |
| ವೀರರಾಜಪೇಟೆ | 1,740 | 1,384 | 1,354 | 1,240 | 1,188 | 1,046 |
| ಒಟ್ಟು | 5,428 | 4,821 | 4,601 | 3,966 | 3,939 | 3,420 |

ಕೋಷ್ಟಕ — 3

1987–88 ರಿಂದ 1989–90ರ ವರೆಗೆ ಮೂರು ವರ್ಷಗಳ ತಾಲೂಕುವಾರು ಪ್ರಾಥಮಿಕ ಶಾಲಾ ಶಿಕ್ಷಕರ ವಿವರ

| ತಾಲೂಕುಗಳು | ಒಟ್ಟು ಶಿಕ್ಷಕರ ಸಂಖ್ಯೆ | | | | | |
|---|---|---|---|---|---|---|
| | 1987–88 | | 1988–89 | | 1989–90 | |
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಮಡಿಕೇರಿ | 206 | 345 | 188 | 340 | 173 | 326 |
| ಸೋಮವಾರಪೇಟೆ | 338 | 232 | 281 | 224 | 280 | 216 |
| ವೀರರಾಜಪೇಟೆ | 266 | 416 | 246 | 418 | 198 | 421 |
| ಒಟ್ಟು | 810 | 993 | 715 | 982 | 651 | 963 |

| ತಾಲೂಕುಗಳು | ಒಟ್ಟು ಹರಿಜನ ಶಿಕ್ಷಕರ ಸಂಖ್ಯೆ | | | | | |
|---|---|---|---|---|---|---|
| | 1987–88 | | 1988–89 | | 1989–90 | |
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಮಡಿಕೇರಿ | 22 | 04 | 14 | 10 | 19 | 07 |
| ಸೋಮವಾರಪೇಟೆ | 17 | 11 | 14 | 10 | 21 | 10 |
| ವೀರರಾಜಪೇಟೆ | 07 | 09 | 07 | 07 | 07 | 11 |
| ಒಟ್ಟು | 46 | 24 | 35 | 27 | 47 | 28 |

| ತಾಲೂಕುಗಳು | ಒಟ್ಟು ಗಿರಿಜನ ಶಿಕ್ಷಕರ ಸಂಖ್ಯೆ | | | | | |
|---|---|---|---|---|---|---|
| | 1987–88 | | 1988–89 | | 1989–90 | |
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಮಡಿಕೇರಿ | 03 | 03 | 02 | 02 | 03 | 03 |
| ಸೋಮವಾರಪೇಟೆ | 06 | 04 | 05 | 03 | 04 | 04 |
| ವೀರರಾಜಪೇಟೆ | 01 | 03 | 01 | 03 | 01 | 03 |
| ಒಟ್ಟು | 10 | 10 | 08 | 08 | 08 | 10 |

**ಫೀಡರ್ ಶಾಲೆಗಳು**

ಏಕೋಪಾಧ್ಯಾಯ ಶಾಲೆಗಳಾದ, ಫೀಡರ್ (ಪೂರಕ) ಶಾಲೆಗಳಲ್ಲಿ ಒಂದು, ಎರಡು ಮತ್ತು ಮೂರನೇ ತರಗತಿಗಳು ಇದ್ದವು. ಓದು, ಬರಹ ಮತ್ತು ಗಣಿತಗಳಿಗೆ ಇಲ್ಲಿ ಪ್ರಾಮುಖ್ಯತೆ ನೀಡಲಾಗುತ್ತಿತ್ತು. ಇವುಗಳೊಡನೆ ಕುಶಲ ಕೈಗಾರಿಕೆ ಮತ್ತು ದೈಹಿಕ ಶಿಕ್ಷಣ ನೀಡಲಾಗುತ್ತಿತ್ತು. ಮುಂದೆ ಈ ಶಾಲೆಯ ಮಕ್ಕಳು ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಮುಂದುವರಿಸಬೇಕಿತ್ತು. ಅಲ್ಲಿ ಪ್ರಕೃತಿ ಶಿಕ್ಷಣ, ಭಾರತೀಯ ಇತಿಹಾಸದ ಕಥೆಗಳು, ಪೌರನೀತಿ, ಪ್ರಾಂತೀಯ ಇತಿಹಾಸ, ಪ್ರಾಂತೀಯ ಭೂಗೋಳ–ಇವುಗಳನ್ನು ಹೇಳಿಕೊಡಲಾಗುತ್ತಿತ್ತು. 5ನೇ ತರಗತಿಯಿಂದ ಸಮಾಜಶಾಸ್ತ್ರ ಮತ್ತು ವಿಜ್ಞಾನ ಪಠ್ಯ ಕ್ರಮದಲ್ಲಿ ಸೇರುತ್ತಿದ್ದವು. 1950ರಲ್ಲಿ ಇಂಗ್ಲಿಷ್ ಭಾಷೆಯನ್ನು ಪಠ್ಯಕ್ರಮದಲ್ಲಿ ಸೇರಿಸಿದರೂ, ಇದು ಪರೀಕ್ಷಾ ವಿಷಯವಾಗಿರಲಿಲ್ಲ. 1952ರ ವರೆಗೆ ಜಿಲ್ಲಾ ಶಿಕ್ಷಣಾಧಿಕಾರಿಯ ಮೇಲ್ವಿಚಾರಣೆಯಲ್ಲಿ 5ನೇ ತರಗತಿಗೆ ಪಬ್ಲಿಕ್ ಪರೀಕ್ಷೆ ನಡೆಯುತ್ತಿತ್ತು. ಜಿಲ್ಲೆಯಲ್ಲಿ ಕಡ್ಡಾಯ ಶಿಕ್ಷಣ ನೀತಿ ಜಾರಿಗೆ ಬರುವವರೆಗೆ ಫೀಡರ್ ಶಾಲೆಗಳು ಅಸ್ತಿತ್ವದಲ್ಲಿದ್ದವು.

**ಉನ್ನತ ಪ್ರಾಥಮಿಕ ಅಥವಾ ಮಾಧ್ಯಮಿಕ ಶಾಲೆಗಳು**

ಈ ಶಾಲೆಗಳಲ್ಲಿ 1 ರಿಂದ 8ನೇಯ ತರಗತಿಗಳಿದ್ದವು. ಜಿಲ್ಲೆಯಲ್ಲಿ ಕೇವಲ ಮಾಧ್ಯಮಿಕ ತರಗತಿಗಳು (6 ರಿಂದ 8) ಮಾತ್ರ ಇದ್ದ ಉನ್ನತ ಪ್ರಾಥಮಿಕ ಶಾಲೆಗಳು ಇರಲಿಲ್ಲ. 1918 ರಿಂದ 1930ರ ಮಧ್ಯದಲ್ಲಿ ನಾಪೋಕ್ಲು, ಪೊನ್ನಂಪೇಟೆ, ಹುದಿಕೇರಿ ಮತ್ತು ಸೋಮವಾರಪೇಟೆಗಳಲ್ಲಿದ್ದ ಪ್ರಾಥಮಿಕ ಶಾಲೆಗಳು ಉನ್ನತ ಪ್ರಾಥಮಿಕ (ಹೈಯರ್ ಎಲಿಮೆಂಟರಿ) ಶಾಲೆಗಳಾದವು. ಈ ಶಾಲೆಗಳು ಮಕ್ಕಳನ್ನು ಎಂಟನೇಯ ತರಗತಿ (ಮೂರನೇ ಫಾರ್ಮ್)ಗೆ ಸಮಾನವಾದ ಸಾಮಾನ್ಯ ಪ್ರವೇಶಪರೀಕ್ಷೆಗೆ ಸಿದ್ಧಪಡಿಸುತ್ತಿದ್ದವು. ಈ ಪರೀಕ್ಷೆಗಳು ಸಾರ್ವತ್ರಿಕ (ಪಬ್ಲಿಕ್) ವಾಗಿದ್ದು ಎಲ್ಲ ಶಾಲೆಗಳಿಗೂ ಸಾಮಾನ್ಯ ಪ್ರಶ್ನೆ ಪತ್ರಿಕೆ, ಮೌಲ್ಯಮಾಪನ ಇರುತ್ತಿತ್ತು. ಕಾಲಕ್ರಮದಲ್ಲಿ ಜಿಲ್ಲಾ ಬೋರ್ಡ್ ಹಾಗೂ ಅನುದಾನಿತ ಪ್ರಾಥಮಿಕ ಶಾಲೆಗಳನ್ನೆಲ್ಲ ಉನ್ನತ ಪ್ರಾಥಮಿಕ ಶಾಲೆಗಳಾಗಿ ಪರಿವರ್ತಿಸಲಾಯಿತು. ಈ ಶಾಲೆಗಳ ಪಬ್ಲಿಕ್ ಪರೀಕ್ಷೆ 1864 ರಿಂದಲೇ ಪ್ರಾರಂಭವಾಗಿದ್ದಿತು. 1953ರ ಏಪ್ರಿಲ್‌ನಿಂದ ಜಿಲ್ಲಾ ಬೋರ್ಡ್‌ಗಳ ಆಡಳಿತದಲ್ಲಿದ್ದ ಎಲ್ಲಾ ಪ್ರಾಥಮಿಕ ಹಾಗೂ ಉನ್ನತ ಪ್ರಾಥಮಿಕ ಶಾಲೆಗಳನ್ನು ಸರಕಾರವೇ ವಹಿಸಿಕೊಂಡಿತು. ಇದೇ ವರ್ಷದಿಂದ ಮಾಧ್ಯಮಿಕ ಶಾಲೆಯ ಅಂತ್ಯದವರೆಗೆ ಎಲ್ಲ ಮಕ್ಕಳಿಗೂ ಉಚಿತ ಶಿಕ್ಷಣ ನೀಡುವ ಆಜ್ಞೆಯನ್ನು ಸರಕಾರ ಹೊರಡಿಸಿತು. (ಪ್ರಾಥಮಿಕ ಶಿಕ್ಷಣ 1920 ರಿಂದಲೇ ಉಚಿತವಾಗಿತ್ತು). 1956ರಲ್ಲಿ ಜಿಲ್ಲೆಯಲ್ಲಿ 20,700 (12,310 ಗಂ., 8,290 ಹೆಂ.) ಮಕ್ಕಳುಳ್ಳ 54 ಸರಕಾರೀ ಉನ್ನತ ಪ್ರಾಥಮಿಕ ಶಾಲೆಗಳೂ, 39 ವಿದ್ಯಾರ್ಥಿಗಳುಳ್ಳ ಒಂದು ಅನುದಾನಿತ ಹೆಣ್ಣುಮಕ್ಕಳ ಶಾಲೆಯೂ ಇದ್ದವು. ಇವು ಮಡಿಕೇರಿ ತಾಲೂಕಿನಲ್ಲಿ 15, ಸೋಮವಾರಪೇಟೆ ತಾಲೂಕಿನಲ್ಲಿ 14 ಮತ್ತು ವೀರರಾಜಪೇಟೆ ತಾಲೂಕಿನಲ್ಲಿ 26–ಈ ರೀತಿ ಹಂಚಿದ್ದವು. ಇವುಗಳಲ್ಲಿ ಕ್ರಮವಾಗಿ ಒಟ್ಟು 6,248 (3,739 ಗಂ., 2,509 ಹೆಂ.) 4,519 (2,863 ಗಂ., 1,656 ಹೆಂ.) ಮತ್ತು 9,872 (5,708 ಗಂ., 4,164 ಹೆಂ.) ಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ಈ ಶಾಲೆಗಳಲ್ಲಿ ಅನುಕ್ರಮವಾಗಿ 172 (125 ಗಂ., 47 ಹೆಂ.) 150 (120 ಗಂ, 30 ಹೆಂ.) ಮತ್ತು 284 (210 ಗಂ., 74 ಹೆಂ.) ಬೋಧಕ ಸಿಬ್ಬಂದಿ ಇದ್ದರು.

1957ರ ಡಿಸೆಂಬರ್‌ನಲ್ಲಿ ಸರಕಾರ ರಚಿಸಿದ ಸಮಗ್ರ ಶಿಕ್ಷಣ ಸಲಹಾ ಮಂಡಳಿಯ ಶಿಫಾರ್ಸಿನಂತೆ ಪ್ರಾಥಮಿಕ ಶಿಕ್ಷಣ ಏಳು ವರ್ಷಗಳ ಸಮಗ್ರ ಶಿಕ್ಷಣವಾಗಿ ರೂಪುಗೊಂಡು ಈಗ 8, 9 ಮತ್ತು 10ನೇ ತರಗತಿಗಳು ಪ್ರೌಢ ಶಿಕ್ಷಣದ ಚೌಕಟ್ಟಿಗೆ ಒಳಪಡುತ್ತವೆ.

**ಕಡ್ಡಾಯ ಪ್ರಾಥಮಿಕ ಶಿಕ್ಷಣ**

ರಾಜ್ಯ ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀತಿಯಂತೆ ಕೊಡಗಿನಲ್ಲಿ 1961ರ ಆಗಸ್ಟ್ ಒಂದರಿಂದ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು 6 ರಿಂದ 7ನೇ ವಯಸ್ಸಿನ ಮಕ್ಕಳಿಗೆ ಜಾರಿಗೊಳಿಸಲಾಯಿತು. ಇದರ ಅನುಷ್ಠಾನಕ್ಕಾಗಿ ಸರಕಾರ ಹೊಸದಾಗಿ ಕೆಲವು ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿತಲ್ಲದೆ, ಎಲ್ಲಾ ಫೀಡರ್ ಶಾಲೆಗಳನ್ನೂ ತನ್ನ ವಶಕ್ಕೆ ತೆಗೆದುಕೊಂಡು ಅವನ್ನು ಪ್ರಾಥಮಿಕ ಶಾಲೆಗಳಾಗಿ ಪರಿವರ್ತಿಸಿತು. ಈ ಶಿಕ್ಷಣ ನೀತಿಗೆ ಒಳಪಟ್ಟ ಒಟ್ಟು 14,591 (7,343 ಗಂ., 7,157 ಹೆಂ.) ಮಕ್ಕಳನ್ನು ಇದರ ವ್ಯಾಪ್ತಿಗೆ ಒಳಪಡಿಸಲಾಯಿತಾದರೂ, ಇವರಲ್ಲಿ ಒಟ್ಟು 12,561 (6,753 ಗಂ, 5,808 ಹೆಂ.) ಮಾತ್ರ ಶಾಲೆಗಳಲ್ಲಿ ದಾಖಲಾದರು. 1961–62ರಲ್ಲಿ 47 ಮಂದಿ ಅಧ್ಯಾಪಕರನ್ನು ಈ ಶಾಲೆಗಳಿಗಾಗಿ ನೇಮಿಸಲಾಯಿತು. 1962–64 ರಿಂದ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು 8 ರಿಂದ 9ನೇ ವಯೋಮಿತಿಯ ಮಕ್ಕಳಿಗೂ ವಿಸ್ತರಿಸಲಾಯಿತು; ಪ್ರತೀ ವರ್ಷ ಶಾಲೆಗಳು ಇಲ್ಲದೆಡೆಗಳಲ್ಲೆಲ್ಲಾ ಸರಕಾರ ಶಾಲೆಗಳನ್ನು ಪ್ರಾರಂಭಿಸಿದುದರಿಂದ 1963ರಲ್ಲಿ 70 ಮಂದಿ, 1964ರಲ್ಲಿ

145 ಮಂದಿ ಹೆಚ್ಚಿನ ಬೋಧಕ ಸಿಬ್ಬಂದಿಯನ್ನು ನೇಮಿಸಿಕೊಳ್ಳಲಾಯಿತು. ಇದರ ವೆಚ್ಚ ಭರಿಸಲು ಸಾರ್ವಜನಿಕರಿಂದ ಹಣ ಹಾಗೂ ಇತರೆ ರೂಪಗಳಲ್ಲಿ ಚಂದಾ ವಸೂಲು ಮಾಡಲಾಯಿತು. 1961-62, 62-63 ಮತ್ತು 63-64 ಈ ಮೂರೂ ವರ್ಷಗಳ ಒಟ್ಟು ಚಂದಾ ಹಣದ ಮೊತ್ತ 1,65,616 ರೂಪಾಯಿಗಳಾಗಿತ್ತು. ಈ ಮೂರೂ ವರ್ಷಗಳಿಗೆ ತಾಲೂಕುವಾರು ವಸೂಲಾದ ಹಣ – ಮಡಿಕೇರಿ : 18,859 ; 25,635 ; ಮತ್ತು 13,717 ರೂ., ಸೋಮವಾರಪೇಟೆ : 30,061 ; 26,192 ; ಮತ್ತು 26,771 ರೂ. ಹಾಗೂ ವೀರರಾಜಪೇಟೆ 14,136 ; 7,581 ಮತ್ತು 2,664 ರೂಪಾಯಿಗಳಾಗಿತ್ತು.

### ಮೂಲ ಶಿಕ್ಷಣ (ಬೇಸಿಕ್ ಎಜುಕೇಷನ್)

ಕೊಡಗಿನಲ್ಲಿ 1953ರಲ್ಲಿ ಮೂಲ ಶಿಕ್ಷಣವನ್ನು ಪ್ರಾರಂಭಿಸಲಾಯಿತು. ಇದಕ್ಕಾಗಿ ಮೊದಲು ಸೋಮವಾರಪೇಟೆ ತಾಲೂಕಿನ 21 ಪ್ರಾಥಮಿಕ ಶಾಲೆಗಳನ್ನು, 13 ಮಾಧ್ಯಮಿಕ ಶಾಲೆಗಳನ್ನು 'ತೀವ್ರ ಶೈಕ್ಷಣಿಕ ವಿಕಾಸ'ಕ್ಕಾಗಿ ಕ್ರಮವಾಗಿ ಕಿರಿಯ ಮತ್ತು ಹಿರಿಯ ಮೂಲ ಶಿಕ್ಷಣ ಶಾಲೆಗಳನ್ನಾಗಿ ಪರಿವರ್ತಿಸಲಾಯಿತು. ಇವುಗಳಲ್ಲಿ ವೀರರಾಜಪೇಟೆಯ ಬೇಸಿಕ್ ಟ್ರೈನಿಂಗ್ ಕಾಲೇಜಿನಲ್ಲಿ ತರಬೇತಿ ಹೊಂದಿದ ಶಿಕ್ಷಕರು ಬೋಧಿಸುತ್ತಿದ್ದರು. 1954ರಲ್ಲಿ ಇನ್ನೂ 46 ಪ್ರಾಥಮಿಕ ಮತ್ತು 35 ಮಾಧ್ಯಮಿಕ ಶಾಲೆಗಳನ್ನು ಇದೇ ರೀತಿ ಪರಿವರ್ತಿಸಲಾಯಿತು. ಈ ಶಾಲೆಗಳಲ್ಲಿ ಕೃಷಿ ಮುಖ್ಯ ಪಠ್ಯ ವಿಷಯವಾಗಿತ್ತು. ಪೀಠೋಪಕರಣಗಳು, ತೋಟಗಾರಿಕೆ ಉಪಕರಣಗಳು, ಬೇಲಿ ತಂತಿ, ಮುಂತಾದ ಪದಾರ್ಥಗಳನ್ನು ಸರಕಾರ ಸರಬರಾಜು ಮಾಡುತ್ತಿತ್ತು. ಪ್ರತೀ ಹಿರಿಯ ಶಾಲೆಗೆ ಕೃಷಿಯಲ್ಲಿ ವಿಶೇಷ ತರಬೇತಿ ಹೊಂದಿದ್ದ ಒಬ್ಬ ಅಧ್ಯಾಪಕನನ್ನು ನೇಮಿಸಲಾಗುತ್ತಿತ್ತು. ಪೊನ್ನಂಪೇಟೆ ನಾಡಿನ ಎರಡು ಹಿರಿಯ ಶಾಲೆಗಳಲ್ಲಿ ಕೃಷಿಗೆ ಬದಲಾಗಿ ಬಳ್ಳಿ ಹಾಗೂ ಬೆತ್ತದ ಹೆಣಿಗೆ ಕಲೆಗಳನ್ನು ಪಠ್ಯ ವಿಷಯಗಳಾಗಿ ಪ್ರಾರಂಭಿಸಲಾಯ್ತು. ಮಡಿಕೇರಿಯ ಸೆಂಟ್ರಲ್ ಶಾಲೆಯ ಭಾಗವಾಗಿದ್ದ ಮಾಧ್ಯಮಿಕ ಶಾಲೆಯನ್ನು ಮೂಲ ಶಿಕ್ಷಣ ಶಾಲೆಯಾಗಿ ಮಾರ್ಪಡಿಸಿ, ಅದರಲ್ಲಿ 'ಮನೆ ಕಟ್ಟುವಿಕೆ'ಯನ್ನು ಪಠ್ಯ ವಿಷಯವಾಗಿ ಬೋಧಿಸಲಾಗುತ್ತಿತ್ತು. ಸಮಗ್ರ ಶಿಕ್ಷಣ ಸಲಹಾ ಸಮಿತಿಯ ಶಿಫಾರ್ಸಿನಂತೆ 1959-60 ರಿಂದ ಸಮಗ್ರ ಪ್ರಾಥಮಿಕ ಶಿಕ್ಷಣ ಪ್ರಾರಂಭವಾದ ನಂತರ ಐದು ತರಗತಿಗಳಿಂದ ಕೂಡಿದ್ದ ಮೂಲ ಶಿಕ್ಷಣ ಶಾಲೆಗಳನ್ನು 'ನ್ಯೂಟೈಪ್ ಮಿಡ್ಲ್ ಸ್ಕೂಲ್'ಗಳಾಗಿ ಮಾರ್ಪಡಿಸಲಾಯಿತು.

### ಪ್ರಾಥಮಿಕ ಶಿಕ್ಷಣದ ಪುನರ್‌ವ್ಯವಸ್ಥೆ

ರಾಜ್ಯ ಪುನರ್‌ವಿಂಗಡನೆಯ ಕಾಲಕ್ಕೆ ವಿವಿಧ ಮಾದರಿ ಶಾಲೆಗಳು ವಿವಿಧ ರೀತಿಗಳಲ್ಲಿ ಶಿಕ್ಷಣ ಒದಗಿಸುತ್ತಿದ್ದವು. ಎಲ್ಲಾ ಜಿಲ್ಲೆಗಳ ಶಾಲೆಗಳಲ್ಲಿಯೂ ಒಂದು ಏಕರೂಪತೆಯ ಅವಶ್ಯಕತೆ ಕಂಡುಬಂದಿತು. ಇದನ್ನು ಹಂತ ಹಂತವಾಗಿ ಜಾರಿಗೊಳಿಸಬೇಕಿದ್ದಿತು. ಇದಕ್ಕಾಗಿ 1957ರ ಡಿಸೆಂಬರ್‌ನಲ್ಲಿ ಸರಕಾರದಿಂದ ರಚಿತವಾದ ಸಮಗ್ರ ಶಿಕ್ಷಣ ಸಲಹಾ ಸಮಿತಿ (ಎಜುಕೇಷನ್ ಇಂಟೆಗ್ರೇಷನ್ ಅಡ್ವೈಸರಿ ಕಮಿಟಿ), ಪ್ರಾಥಮಿಕ ಶಿಕ್ಷಣ ಏಳು ವರ್ಷಗಳ ಸಮಗ್ರ ಶಿಕ್ಷಣವಾಗಿರಬೇಕೆಂದೂ, ಇವರಲ್ಲಿ ಮೂಲ ಶಿಕ್ಷಣದ ಪಠ್ಯಕ್ರಮ ಅನುಸರಿಸಬೇಕೆಂದೂ ಶಿಫಾರಸು ಮಾಡಿತು. 1959-60ನೇ ಶೈಕ್ಷಣಿಕ ವರ್ಷದಿಂದ ಈ ಕ್ರಮವನ್ನು ಹಂತಹಂತವಾಗಿ ಜಾರಿಗೆ ತರಲಾಯಿತು. 1964-65ರಿಂದ ಜಿಲ್ಲೆಯ ಅರು ಸರಕಾರಿ ಮತ್ತು ಅರು ಅನುದಾನಿತ ಪ್ರಾಥಮಿಕ ಶಾಲೆಗಳ ಪಠ್ಯ ಕ್ರಮದಲ್ಲಿ ಗೃಹ ವಿಜ್ಞಾನವನ್ನು ಸೇರಿಸಲಾಯಿತು. ಈ ಪಠ್ಯಕ್ರಮ ಪ್ರೌಢ ಶಾಲಾ ಪಠ್ಯ ಕ್ರಮಕ್ಕೆ ಪೂರಕವಾಗಿರುವಂತೆ ಮಾಡಲು 1969ರಲ್ಲಿ ಒಂದು ಸಾಮಾನ್ಯ ಪಠ್ಯ ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿ ಶಿಫಾರಸು ಮಾಡಿದ ಪಠ್ಯಕ್ರಮ 1971 ರಿಂದ ಜಾರಿಗೆ ಬಂದಿತು. ಇದರಲ್ಲಿ ಅಳವಡಿಸಲಾದ ಮುಖ್ಯ ಬದಲಾವಣೆಗಳೆಂದರೆ : 1) ತ್ರಿಭಾಷಾಸೂತ್ರದನ್ವಯ ಕನ್ನಡೇತರರಿಗೆ ಕನ್ನಡವನ್ನು 3ನೇ ತರಗತಿಯಿಂದ ಕಡ್ಡಾಯಗೊಳಿಸಲಾಯಿತು. 2) ವಿಜ್ಞಾನ ಪಠ್ಯದಲ್ಲಿ ಆರೋಗ್ಯ ಶಿಕ್ಷಣ ಮತ್ತು ಸಮಾಜಶಾಸ್ತ್ರದಲ್ಲಿ ಜನಸಂಖ್ಯಾ ಶಿಕ್ಷಣ ಸೇರ್ಪಡೆಯಾಯಿತು. 3) ನೈತಿಕ ಶಿಕ್ಷಣ ಕಡ್ಡಾಯವಾಯಿತು. 4) ದೈಹಿಕ ಶಿಕ್ಷಣಕ್ಕೆ ಪ್ರಾಮುಖ್ಯತೆ ದೊರೆಯಿತು. ಈ ಪುನರ್ವಿಮರ್ಶಿತ ಪಠ್ಯ ಕ್ರಮ ಹಂತಗಳಲ್ಲಿ 1974-75ನೇ ವರ್ಷದಿಂದ ಜಾರಿಗೆ ಬಂದಿತು.

### ಪರಿಶಿಷ್ಟ ವರ್ಗಗಳ ಶಿಕ್ಷಣ

ಜಿಲ್ಲೆಯ ಪರಿಶಿಷ್ಟ ವರ್ಗದವರು ಸಾಮಾನ್ಯವಾಗಿ ಕೃಷಿ ಮತ್ತು ಪ್ಲಾಂಟೇಷನ್ ಕಾರ್ಮಿಕರಾದುದರಿಂದ, ಶೈಕ್ಷಣಿಕವಾಗಿ ಹಿಂದುಳಿದಿದ್ದರು. ಇವರು ಇದ್ದೆಡೆಗಳಲ್ಲಿ 1904 ರಲ್ಲಿಯೇ ಏಳು ಪ್ರತ್ಯೇಕ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಯಿತು. ಪ್ರಾರಂಭದಲ್ಲಿ ಈ ಶಾಲೆಗಳಲ್ಲಿ ಮೇಲ್ಜಾತಿಯ ಅಧ್ಯಾಪಕರಿದ್ದರೂ, ಕಾಲಕ್ರಮದಲ್ಲಿ ಅದೇ ವರ್ಗದ ಯುವಕರೇ ಅಧ್ಯಾಪಕರಾದರು. 1921ರ ವೇಳೆಗೆ ಈ ವರ್ಗದವರು ಮತ್ತು ಇತರರು ಒಂದೇ ಶಾಲೆಯಲ್ಲಿ ವ್ಯಾಸಂಗ ಪ್ರಾರಂಭಿಸಿದಾಗ, ಇಂಥ ಪ್ರತ್ಯೇಕ ಶಾಲೆಗಳ ಸಂಖ್ಯೆ ಇಳಿಮುಖ

ವಾಯಿತು. ಕೊಡಗು ಜಿಲ್ಲೆಯ ಬಹಳ ಮಂದಿ ಪರಿಶಿಷ್ಟ ವರ್ಗದವರು ರಾಜರ ಹಾಗೂ ದಿವಾನರ ಊಳಿಗದವರಾಗಿದ್ದುದರಿಂದ, ಅಸ್ಪೃಶ್ಯತೆ ಗಣನೀಯ ರೀತಿಯಲ್ಲಿ ಪ್ರಚಲಿತವಾಗಿರಲಿಲ್ಲ. 1910ರವರೆವಿಗೆ ಈ ಎಲ್ಲಾ ಶಾಲೆಗಳಲ್ಲಿ ಕನ್ನಡ ಸಾಮಾನ್ಯ ವಿಷಯವಾಗಿದ್ದು, ಆ ವರ್ಷದಿಂದ ಇಂಗ್ಲಿಷ್ ಭಾಷೆಯ ಬೋಧನೆ ಮೂರನೇಯ ತರಗತಿಯಿಂದ ಪ್ರಾರಂಭವಾಯಿತು. 1951ರ ಜನಗಣತಿಯಲ್ಲಿ 25,690 ಇದ್ದ ಇವರ ಸಂಖ್ಯೆ 1961ರ ಜನಗಣತಿಯ ವೇಳೆಗೆ 30,610 ಆಗಿತ್ತು. ಇವರ ವಿದ್ಯಾಭಿವೃದ್ಧಿಗಾಗಿ ಮಡಿಕೇರಿ, ವೀರರಾಜಪೇಟೆ, ಸೋಮವಾರಪೇಟೆ, ಕುಶಾಲನಗರ ಮತ್ತು ಪೊನ್ನಂಪೇಟೆಗಳಲ್ಲಿ ಪ್ರಾರಂಭವಾದ ವಿದ್ಯಾರ್ಥಿನಿಲಯಗಳಲ್ಲಿ ಒಟ್ಟು 185 ಮಂದಿ ವಿದ್ಯಾರ್ಥಿಗಳಿಗೆ ಉಚಿತ ಊಟ ವಸತಿಗಳನ್ನು ಏರ್ಪಾಡು ಮಾಡಲಾಯಿತು. ಸರಕಾರ ಈ ವಿದ್ಯಾರ್ಥಿ ನಿಲಯಗಳಿಗೆ ಗ್ರಂಥಾಲಯಗಳನ್ನು, ಕ್ರೀಡಾ ವಸ್ತುಗಳನ್ನೂ ಉಚಿತವಾಗಿ ನೀಡಿತು. ಪರಿಶಿಷ್ಟ ಜಾತಿಯ ಹೆಣ್ಣು ಮಕ್ಕಳಿಗಾಗಿ ಮಡಿಕೇರಿ ಮತ್ತು ಪೊನ್ನಂಪೇಟೆಗಳಲ್ಲಿ 1961ರಲ್ಲಿ ಎರಡು ಪ್ರತ್ಯೇಕ ವಿದ್ಯಾರ್ಥಿನಿಲಯಗಳನ್ನು ತೆರೆಯಲಾಯಿತು. ಇವುಗಳಲ್ಲಿ ಒಟ್ಟು 63 ಹೆಣ್ಣು ಮಕ್ಕಳಿದ್ದರು. ವಿದ್ಯಾರ್ಥಿ ನಿಲಯಗಳ ಅನುಕೂಲ ಪಡೆಯದ ಅಥವಾ ಅವು ಇಲ್ಲದ 29 ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಮತ್ತು 39 ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೆ ಕ್ರಮವಾಗಿ ತಲಾ ರೂ. 75 ಮತ್ತು ರೂ. 50 ವಾರ್ಷಿಕ ವಿದ್ಯಾರ್ಥಿ ವೇತನ ನೀಡಲಾಯಿತು.

### ಪರಿಶಿಷ್ಟ ವರ್ಗದ ಹೆಣ್ಣು ಮಕ್ಕಳ ಕ್ಷೇಮಾಭಿವೃದ್ಧಿ ಕೇಂದ್ರಗಳು

ಹೆಬ್ಬಾಲೆ, ಕುಶಾಲನಗರ, ಬಾಳೆಲೆ, ಬಿಳಗುಂದ ಮತ್ತು ಚೆನ್ನನಕೋಟೆಗಳಲ್ಲಿ 1961ರಲ್ಲಿ ಪರಿಶಿಷ್ಟ ವರ್ಗಗಳ ಹೆಣ್ಣು ಮಕ್ಕಳ ಕ್ಷೇಮಾಭಿವೃದ್ಧಿಗಾಗಿ ಕೇಂದ್ರಗಳನ್ನು ತೆರೆಯಲಾಯಿತು. ಈ ಕೇಂದ್ರಗಳು ಹೆಣ್ಣು ಮಕ್ಕಳಿಗಾಗಿ ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಶಾಲೆಗಳನ್ನು ನಡೆಸುತ್ತಿವೆ. ಇವರಿಗೆ ಮಧ್ಯಾಹ್ನ ಭೋಜನ ನೀಡುವ ಕಾರ್ಯಕ್ರಮಗಳನ್ನೂ ಈ ಕೇಂದ್ರಗಳು ಹಮ್ಮಿಕೊಂಡಿವೆ. ಕನ್ನಡ ವರ್ಣಮಾಲೆ, ಗಣಿತ ಹಾಗೂ ನರ್ಸರಿ ಪದಗಳನ್ನೂ ಈ ಕೇಂದ್ರಗಳಲ್ಲಿ ಹೇಳಿಕೊಡಲಾಗುತ್ತದೆ. ವರ್ಷಂಪ್ರತಿ 150 ಮಕ್ಕಳು ಇದರ ಫಲಾನುಭವಿಗಳಾಗಿರುತ್ತಾರೆ.

### ಪರಿಶಿಷ್ಟ ಬುಡಕಟ್ಟಿನವರ ವಿದ್ಯಾಭ್ಯಾಸ

1961ರ ಜನಗಣತಿಯಂತೆ ಜಿಲ್ಲೆಯಲ್ಲಿ 27,102 ಪ. ಬುಡಕಟ್ಟಿನ ಜನರಿದ್ದರು. ಇವರು ಪರಿಶಿಷ್ಟ ಜಾತಿಯವರಿಗಿಂತ ವಿದ್ಯೆಯಲ್ಲಿ ಹಿಂದಿದ್ದಾರೆ. ಆದ್ದರಿಂದ ರಾಜ್ಯ ಹಾಗೂ ಕೇಂದ್ರ ಸರಕಾರಗಳೆರಡೂ ಈ ಜನರ ಪುರೋಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿವೆ. ಗಿರಿಜನ ಮಕ್ಕಳಿಗಾಗಿಯೇ ಸೋಮವಾರಪೇಟೆ, ಬಸವನಹಳ್ಳಿ ಮತ್ತು ಆದಿನದೂರು, ಹಾಗೂ ವೀರರಾಜಪೇಟೆ ತಾಲೂಕಿನ ಬೇಗೂರಿನಲ್ಲಿ ಶಾಲೆಗಳನ್ನು ತೆರೆಯಲಾಯಿತು. ಅವುಗಳಲ್ಲಿ 1961ನೇ ಸಾಲಿಗೆ 140 ಗಿರಿಜನ ಮಕ್ಕಳಿದ್ದರು. ಇವರಿಗೆ ಈ ಶಾಲೆಗಳಲ್ಲಿ ಉಚಿತ ಊಟ, ಬಟ್ಟೆ, ಸ್ಲೇಟು, ಪುಸ್ತಕ ಮತ್ತು ವೈದ್ಯಕೀಯ ಸೌಲಭ್ಯ ನೀಡಲಾಯಿತು. ವೀರರಾಜಪೇಟೆ ತಾಲೂಕಿನ ಕುಟ್ಟ ಹಾಗೂ ಕಲ್ಲಹಳ್ಳಿಗಳಲ್ಲಿ ಇವರಿಗಾಗಿ ವಿದ್ಯಾರ್ಥಿನಿಲಯಗಳನ್ನೂ ತೆರೆಯಲಾಯಿತು. 1963ನೇ ಸಾಲಿಗೆ ಮೇಲಿನ ವಿದ್ಯಾರ್ಥಿನಿಲಯಗಳಲ್ಲಿ ಕ್ರಮವಾಗಿ 40 ಮತ್ತು 60 ಮಕ್ಕಳಿದ್ದರು. 1963–64ನೇ ಸಾಲಿಗೆ ಇಲ್ಲಿನ ಒಬ್ಬ ಹೈಸ್ಕೂಲು ವಿದ್ಯಾರ್ಥಿಗೆ 100 ರೂ.ಗಳ ವಿದ್ಯಾರ್ಥಿ ವೇತನವನ್ನೂ, 18 ಮಾಧ್ಯಮಿಕ ಶಾಲಾ ಮಕ್ಕಳಿಗೆ 50 ರೂ.ಗಳ ವಿದ್ಯಾರ್ಥಿ ವೇತನವನ್ನೂ ನೀಡಲಾಯಿತು. ಸೋಮವಾರಪೇಟೆಯ, ಬಸವನಹಳ್ಳಿ ಮತ್ತು ವೀರರಾಜಪೇಟೆಯ ಸಿದ್ದಾಪುರ ಹಡ್ಲುಗಳಲ್ಲಿ 5 ವರ್ಷದೊಳಗಿನ ಗಿರಿಜನ ಮಕ್ಕಳಿಗೆ ನರ್ಸರಿ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಇಲ್ಲಿ ಉಚಿತ ಊಟದ ವ್ಯವಸ್ಥೆ ಇದ್ದಿತು. ಪರಿಶಿಷ್ಟ ಬುಡಕಟ್ಟುಗಳ ಹೆಂಗಸರಿಗೆ ಇಲ್ಲಿ ಹೊಲಿಗೆ ತರಗತಿಗಳನ್ನೂ ನಡೆಸಲಾಯಿತು. 1963ರಲ್ಲಿ ಇವರ ಕಾಲನಿಗಳಾದ ಕಾನೂರು, ರೇಷ್ಮೆಹಡ್ಲು ಮತ್ತು ಕುರುಚಿಗಳಲ್ಲಿ ಹೆಂಗಸರ ಕ್ಷೇಮಾಭಿವೃದ್ಧಿ ಕೇಂದ್ರಗಳನ್ನು ಪ್ರಾರಂಭಿಸಲಾಯಿತು. ಈ ಕೇಂದ್ರಗಳಲ್ಲಿ ಆರು ವರ್ಷದೊಳಗಿನ ಗಿರಿಜನ ಮಕ್ಕಳಿಗೆ ಉಚಿತ ನರ್ಸರಿ ಶಿಕ್ಷಣ, ಬಟ್ಟೆ ಹಾಗೂ ಮಧ್ಯಾಹ್ನ ಭೋಜನ ನೀಡಲಾಯಿತು.

### ಆಶ್ರಮ ಶಾಲೆಗಳು

ಮೂರನೇಯ ಪಂಚವಾರ್ಷಿಕ ಯೋಜನೆಯ ಅಂತ್ಯಕ್ಕೆ ಬಸವನಹಳ್ಳಿ, ನಾಗರಹೊಳೆ ಮತ್ತು ಗೋಣಿಗದ್ದೆಗಳಲ್ಲಿ ಮೂರು ಆಶ್ರಮ ಶಾಲೆಗಳನ್ನು 'ಗ್ರಾಮಾಂತರ ತಾತ್ಪೂರ್ತಿಕ ಕ್ಷೇತ್ರ' (ರೂರಲ್ ಆಡ್‌ಹಾಕ್ ಬ್ಲಾಕ್) ಯೋಜನೆಯಡಿ ಪ್ರಾರಂಭಿಸಲಾಯಿತು. ಇದಕ್ಕಾಗಿ ಕೇಂದ್ರ ಸರಕಾರ ಐದು ಲಕ್ಷ ರೂ. ಮಂಜೂರು ಮಾಡಿತು. ಈ ಮೂರೂ ಶಾಲೆಗಳು ಪ್ರತೀಯೊಂದರಲ್ಲಿ ಸುಮಾರು 25 ಮಂದಿ ಮಕ್ಕಳನ್ನೊಳಗೊಂಡು 1963ರಲ್ಲಿ ಪ್ರಾರಂಭವಾದವು. ಇವು ಪರಿಶಿಷ್ಟ ಬುಡಕಟ್ಟಿನ ಮಕ್ಕಳಿಗಾಗಿಯೇ ಪ್ರಾರಂಭವಾದರೂ, ಇವುಗಳಲ್ಲಿ ಶೇಕಡಾ 5ರಷ್ಟು ಪರಿಶಿಷ್ಟ ವರ್ಗದ ಮಕ್ಕಳೂ, ಶೇಕಡಾ 25ರಷ್ಟು ಇತರ ಹಿಂದುಳಿದ ವರ್ಗದ ಮಕ್ಕಳೂ

ಇರುತ್ತಾರೆ. 1 ರಿಂದ 5ನೇ ತರಗತಿಗಳನ್ನು ಹೊಂದಿರುವ ಈ ಶಾಲೆಗಳಲ್ಲಿ ಉಚಿತ ಊಟ, ವಸತಿ ಪೂರೈಕೆಯನ್ನು ಜಿಲ್ಲಾ ಕ್ಷೇತ್ರಾಭಿವೃದ್ಧಿ ಅಧಿಕಾರಿ ಮಾಡುತ್ತಾರೆ. ಇದರ ಮೇಲ್ವಿಚಾರಣೆ ಜಿಲ್ಲಾ ಪರಿಶಿಷ್ಟ ಬುಡಕಟ್ಟುಗಳ ಸಮನ್ವಯಾಧಿಕಾರಿ ನಡೆಸುತ್ತಾರೆ. 1990-91ನೇ ಸಾಲಿಗೆ ನಾಗರಹೊಳೆ ಶಾಲೆಯಲ್ಲಿ 125 ಮಕ್ಕಳು, ಒಬ್ಬ ಪೂರ್ಣಕಾಲಿಕ ಮತ್ತು ನಾಲ್ಕು ಅರೆಕಾಲಿಕ ಬೋಧಕ ಸಿಬ್ಬಂದಿ, ಬಸವನಹಳ್ಳಿ ಶಾಲೆಯಲ್ಲಿ 50 ಮಕ್ಕಳು ಮತ್ತು ಇಬ್ಬರು ಬೋಧಕ ಸಿಬ್ಬಂದಿ, ಹಾಗೂ ಗೋಣಿಗದ್ದೆ ಶಾಲೆಯಲ್ಲಿ 87 ಮಕ್ಕಳು ಮತ್ತು ಮೂರು ಮಂದಿ ಬೋಧಕ ಸಿಬ್ಬಂದಿ ಇದ್ದರು.

**ಮಧ್ಯಾಹ್ನ ಭೋಜನ ಯೋಜನೆ**

ಈ ಯೋಜನೆ ಮುಖ್ಯವಾಗಿ ಶಾಲೆಗೆ ಬಾರದ, ಬರಲು ಅಸಮರ್ಥರಾದ ಮಕ್ಕಳನ್ನು ಶಾಲೆಗೆ ಬರುವಂತೆ ಮಾಡಲು, ಅಮೆರಿಕದ ಸಹಯೋಗದ 'ಕೇರ್' (ಕೋ-ಆಪರೇಟಿವ್ ಅಮೆರಿಕನ್ ರಿಲೀಫ್ ಎವೆರಿವ್ಹೇರ್) ಯೋಜನೆಯಡಿ 1963 ರಲ್ಲಿ ಜಿಲ್ಲೆಯ ಒಟ್ಟು 73 ಶಾಲೆಗಳಲ್ಲಿ ಪ್ರಾರಂಭವಾಯಿತು. ಇದರ ಕೇಂದ್ರಗಳು, ಮಡಿಕೇರಿ ತಾಲೂಕಿನಲ್ಲಿ 21, ಸೋಮವಾರಪೇಟೆ ತಾಲೂಕಿನಲ್ಲಿ 44 ಮತ್ತು ವೀರರಾಜಪೇಟೆ ತಾಲೂಕಿನಲ್ಲಿ 8 ಇದ್ದವು. ಇವುಗಳಲ್ಲಿ ಕ್ರಮವಾಗಿ 2,370, 2,619 ಮತ್ತು 3,230 ಫಲಾನುಭವಿಗಳಿದ್ದರು. 1965ರಲ್ಲಿ ಈ ಯೋಜನೆಯನ್ನು ಜಿಲ್ಲೆಯ ಒಟ್ಟು 123 ಶಾಲೆಗಳಿಗೆ ವಿಸ್ತರಿಸಲಾಯಿತು ಮತ್ತು ಫಲಾನುಭವಿಗಳ ಸಂಖ್ಯೆ ಒಟ್ಟು 8,219 ರಿಂದ 13,715ಕ್ಕೆ ಏರಿತು. ಈ ಮುಂದಿನ ಕೋಷ್ಟಕದಲ್ಲಿ ಮಧ್ಯಾಹ್ನ ಭೋಜನದ ಫಲಾನುಭವಿಗಳ ತಾಲೂಕುವಾರು ವಿವರಗಳನ್ನು 1987-88 ರಿಂದ 1989-90ರ ವರೆಗೆ ನೀಡಲಾಗಿದೆ.

| ತಾಲೂಕುಗಳು | ಒಟ್ಟು ಫಲಾನುಭವಿಗಳ ಸಂಖ್ಯೆ | | | | | |
|---|---|---|---|---|---|---|
| | 1987-88 | | 1988-89 | | 1989-90 | |
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಮಡಿಕೇರಿ | 4,369 | 1,631 | 4,481 | 1,519 | 4,686 | 1,314 |
| ಸೋಮವಾರಪೇಟೆ | 5,154 | 4,156 | 4,162 | 3,838 | 4,266 | 3,734 |
| ವೀರರಾಜಪೇಟೆ | 4,313 | 3,687 | 4,813 | 4,113 | 4,313 | 3,687 |
| ಒಟ್ಟು | 23,310 | | 22,926 | | 22,000 | |

| ತಾಲೂಕುಗಳು | ಒಟ್ಟು ಪರಿಶಿಷ್ಟಜಾತಿಯ ಫಲಾನುಭವಿಗಳು | | | | | |
|---|---|---|---|---|---|---|
| | 1987-88 | | 1988-89 | | 1989-90 | |
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಮಡಿಕೇರಿ | 784 | 701 | 796 | 716 | 805 | 731 |
| ಸೋಮವಾರಪೇಟೆ | 958 | 225 | 958 | 866 | 988 | 728 |
| ವೀರರಾಜಪೇಟೆ | 814 | 824 | 814 | 824 | 814 | 824 |
| ಒಟ್ಟು | 4,306 | | 4,974 | | 4,890 | |

| ತಾಲೂಕುಗಳು | ಒಟ್ಟು ಪರಿಶಿಷ್ಟವರ್ಗದ ಫಲಾನುಭವಿಗಳು | | | | | |
|---|---|---|---|---|---|---|
| | 1987–88 | | 1988–89 | | 1989–90 | |
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಮಡಿಕೇರಿ | 221 | 176 | 228 | 185 | 236 | 201 |
| ಸೋಮವಾರಪೇಟೆ | 232 | 147 | 286 | 234 | 290 | 189 |
| ವೀರರಾಜಪೇಟೆ | 673 | 635 | 1,192 | 1,042 | 673 | 635 |
| ಒಟ್ಟು | 1,126 | 958 | 1,706 | 1,461 | 1,199 | 1,025 |

**ಶಾಲೆ ಬಿಟ್ಟ ಮಕ್ಕಳು**

ಹಲವಾರು ಮಕ್ಕಳು ಬಡತನ, ವಿದ್ಯೆಯ ಬಗ್ಗೆ ಅಜ್ಞಾನ ಹಾಗೂ ಕೌಟುಂಬಿಕ ಕಾರಣಗಳಿಂದ ಪ್ರೈಮರಿ ಶಾಲೆಯ ನಂತರ ಅಥವಾ ಅದು ಮುಗಿಯುವ ಮೊದಲೇ ಶಾಲೆಗೆ ಹೋಗುವುದನ್ನು ನಿಲ್ಲಿಸುತ್ತಾರೆ. ಇಂತಹ ಶಾಲೆ ಬಿಟ್ಟ ಮಕ್ಕಳ ತಾಲೂಕುವಾರು ವಿವರಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.

| ತಾಲೂಕುಗಳು | ಶಾಲೆ ಬಿಟ್ಟ ಮಕ್ಕಳ ಸಂಖ್ಯೆ | | | | | |
|---|---|---|---|---|---|---|
| | 1987–88 | | 1988–89 | | 1989–90 | |
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಮಡಿಕೇರಿ | 466 | 377 | 486 | 417 | 546 | 472 |
| ಸೋಮವಾರಪೇಟೆ | 62 | 53 | 71 | 57 | 74 | 61 |
| ವೀರರಾಜಪೇಟೆ | 931 | 784 | 792 | 690 | 573 | 586 |
| ಒಟ್ಟು | 1,439 | 1,214 | 1,349 | 1,164 | 1,193 | 1,119 |

| ತಾಲೂಕುಗಳು | ಶಾಲೆ ಬಿಟ್ಟ ಪರಿಶಿಷ್ಟಜಾತಿಯ ಮಕ್ಕಳು | | | | | |
|---|---|---|---|---|---|---|
| | 1987–88 | | 1988–1989 | | 1989–90 | |
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಮಡಿಕೇರಿ | 106 | 76 | 121 | 86 | 136 | 86 |
| ಸೋಮವಾರಪೇಟೆ | 17 | 13 | 19 | 16 | 21 | 18 |
| ವೀರರಾಜಪೇಟೆ | 113 | 109 | 86 | 82 | 102 | 76 |
| ಒಟ್ಟು | 236 | 198 | 226 | 184 | 259 | 190 |

| ತಾಲೂಕುಗಳು | ಶಾಲೆ ಬಿಟ್ಟ ಪರಿಶಿಷ್ಟವರ್ಗದ ಮಕ್ಕಳು | | | | | |
|---|---|---|---|---|---|---|
| | 1987–88 | | 1988–89 | | 1989–90 | |
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಮಡಿಕೇರಿ | 32 | 21 | 35 | 24 | 39 | 28 |
| ಸೋಮವಾರಪೇಟೆ | 11 | 08 | 14 | 11 | 18 | 15 |
| ವೀರರಾಜಪೇಟೆ | 83 | 73 | 73 | 69 | 63 | 59 |
| ಒಟ್ಟು | 126 | 102 | 122 | 104 | 120 | 102 |

## ಉಚಿತ ಪುಸ್ತಕ ಮತ್ತು ಸಮವಸ್ತ್ರ ಹಂಚಿಕೆ

ಕರ್ನಾಟಕ ಸರಕಾರವು ಶಿಕ್ಷಣದ ವಿಸ್ತರಣೆಗಾಗಿ ಕೈಗೊಂಡಿರುವ ಕಾರ್ಯಕ್ರಮಗಳಲ್ಲಿ ಪ್ರಮುಖವಾದದ್ದು ಉಚಿತ ಪುಸ್ತಕ ಮತ್ತು ಸಮವಸ್ತ್ರ ಹಂಚಿಕೆ ಯೋಜನೆ. ಇದರಡಿ ಒಂದನೇಯ ತರಗತಿಯಿಂದ ಏಳನೇಯ ತರಗತಿಯವರೆಗೆ ಜಿಲ್ಲೆಯಲ್ಲಿ ಮೂರು ವರ್ಷಗಳ ಫಲಾನುಭವಿಗಳ ಸಂಖ್ಯೆಯನ್ನು ಈ ಮುಂದಿನ ಕೋಷ್ಟಕಗಳಲ್ಲಿ ನೀಡಲಾಗಿದೆ.

1987–88 ರಿಂದ 1990ನೇಯ ವರ್ಷಗಳಲ್ಲಿ ಜಿಲ್ಲೆಯ ಉಚಿತ ಸಮವಸ್ತ್ರ ವಿತರಣೆಯ ವಿವರ.

| | ಒಟ್ಟು ಫಲಾನುಭವಿಗಳ ಸಂಖ್ಯೆ | | |
|---|---|---|---|
| ತಾಲೂಕುಗಳು | 87–88 | 88–89 | 89–90 |
| ಮಡಿಕೇರಿ | 7,396 | 7,667 | 7,303 |
| ಸೋಮವಾರಪೇಟೆ | 14,700 | 9,047 | 8,643 |
| ವೀರರಾಜಪೇಟೆ | 12,048 | 4,447 | 8,145 |
| ಒಟ್ಟು | 34,144 | 21,161 | 24,091 |

| | ಒಟ್ಟು ಪರಿಶಿಷ್ಟಜಾತಿ ಫಲಾನುಭವಿಗಳು | | |
|---|---|---|---|
| ತಾಲೂಕುಗಳು | 87–88 | 88–89 | 89–90 |
| ಮಡಿಕೇರಿ | 1,971 | 2,327 | 2,368 |
| ಸೋಮವಾರಪೇಟೆ | 2,897 | 1,977 | 2,870 |
| ವೀರರಾಜಪೇಟೆ | 1,800 | 1,828 | 1,977 |
| ಒಟ್ಟು | 4,058 | 6,132 | 7,235 |

| | ಒಟ್ಟು ಪರಿಶಿಷ್ಟವರ್ಗದ ಫಲಾನುಭವಿಗಳು | | |
|---|---|---|---|
| ತಾಲೂಕುಗಳು | 87–88 | 88–89 | 89–90 |
| ಮಡಿಕೇರಿ | 737 | 770 | 825 |
| ಸೋಮವಾರಪೇಟೆ | 1,114 | 572 | 1,030 |
| ವೀರರಾಜಪೇಟೆ | 1,475 | 1,513 | 1,373 |
| ಒಟ್ಟು | 3,356 | 2,855 | 3,228 |

1987–88 ರಿಂದ 1989–90ನೇಯ ವರ್ಷಗಳಲ್ಲಿ ಜಿಲ್ಲೆಯಲ್ಲಿ ಉಚಿತ ಪಠ್ಯಪುಸ್ತಕ ವಿತರಣೆಯ ವಿವರ.

| | ಒಟ್ಟು ಫಲಾನುಭವಿಗಳ ಸಂಖ್ಯೆ | | |
|---|---|---|---|
| ತಾಲೂಕುಗಳು | 87–88 | 88–89 | 89–90 |
| ಮಡಿಕೇರಿ | 20,280 | 21,628 | 21,282 |
| ಸೋಮವಾರಪೇಟೆ | 22,471 | 26,622 | 29,919 |
| ವೀರರಾಜಪೇಟೆ | 22,169 | 22,149 | 21,316 |
| ಒಟ್ಟು | 64,920 | 70,399 | 72,517 |

| | ಒಟ್ಟು ಪರಿಶಿಷ್ಟಜಾತಿಯ ಫಲಾನುಭವಿಗಳು | | |
|---|---|---|---|
| ತಾಲೂಕುಗಳು | 87–88 | 88–89 | 89–90 |
| ಮಡಿಕೇರಿ | 2,285 | 2,599 | 2,636 |
| ಸೋಮವಾರಪೇಟೆ | 3,192 | 2,997 | 4,443 |
| ವೀರರಾಜಪೇಟೆ | 2,912 | 2,977 | 3,189 |
| ಒಟ್ಟು | 8,389 | 8,573 | 10,268 |

| | ಒಟ್ಟು ಪರಿಶಿಷ್ಟವರ್ಗದ ಫಲಾನುಭವಿಗಳು | | |
|---|---|---|---|
| ತಾಲೂಕುಗಳು | 87–88 | 88–89 | 89–90 |
| ಮಡಿಕೇರಿ | 831 | 843 | 891 |
| ಸೋಮವಾರಪೇಟೆ | 1,203 | 1,280 | 1,393 |
| ವೀರರಾಜಪೇಟೆ | 2,251 | 2,292 | 2,191 |
| ಒಟ್ಟು | 4,285 | 4,415 | 4,475 |

## ಶಿಕ್ಷಕರ ತರಬೇತಿ

ಪ್ರಾಥಮಿಕ ಶಿಕ್ಷಕರ ತರಬೇತಿ ಜಿಲ್ಲೆಯಲ್ಲಿ 1871ರಲ್ಲಿ ಮಡಿಕೇರಿಯ ಸೆಂಟ್ರಲ್ ಶಾಲೆಯಲ್ಲಿ ಆರಂಭವಾಯಿತು. ಇಲ್ಲಿನ ಪ್ರಾಚಾರ್ಯರು ಸ್ವತಃ ತಾವೇ ನಾಲ್ಕೈದು ಶಿಕ್ಷಕರಿಗೆ ನಾಲ್ಕು ತಿಂಗಳ ತರಬೇತಿ ನೀಡುತ್ತಿದ್ದರು. ಸರಕಾರ 1872 ರಲ್ಲಿ ಮಡಿಕೇರಿಯಲ್ಲಿ ಒಂದು ನಾರ್ಮಲ್ ಶಾಲೆ ಪ್ರಾರಂಭಿಸಿತು. ಈ ಶಾಲೆ 1923ರವರೆಗೂ ನಡೆಯಿತು. 1904ರಲ್ಲಿ

ಇಲ್ಲಿ ಪ್ರಾರಂಭವಾದ ಉಪಾಧ್ಯಾಯ ತರಬೇತಿ ಶಾಲೆಯಲ್ಲಿ ಮದರಾಸ್ ಶಿಕ್ಷಣ ಇಲಾಖೆಯ ಕಿರಿಯ ದರ್ಜೆ ಸರ್ಟಿಫಿಕೇಟ್ ಪರೀಕ್ಷೆಗೆ ಉಪಾಧ್ಯಾಯರನ್ನು ತರಬೇತಿ ಮಾಡಲಾಗುತ್ತಿತ್ತು. ಈ ಶಾಲೆ 1924ರವರೆಗೆ ನಡೆಯಿತು. 1923ರಲ್ಲಿ ಕೊಡಗು ಮತ್ತು ಬೆಂಗಳೂರು ಸಿವಿಲ್ ಹಾಗೂ ಮಿಲಿಟರಿ ಸ್ಟೇಷನ್‌ಗಳ ಶಿಕ್ಷಕರ ತರಬೇತಿಗಾಗಿ ತರಬೇತಿ ಶಾಲೆಯೊಂದನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು. ಈ ಶಾಲೆ 1942ರವರೆಗೆ ನಡೆದು ಮುಚ್ಚಲ್ಪಟ್ಟಿತು. 1930ರ ನಂತರ ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಶಾಲೆಗಳ ಸಂಖ್ಯೆ ಹೆಚ್ಚಿದಾಗ, ಉಪಾಧ್ಯಾಯರ ಬೇಡಿಕೆಯೂ ಹೆಚ್ಚಿತು.

ಆದುದರಿಂದ ಕೊಡಗು ಸರಕಾರ 1944ರಲ್ಲಿ ಮಡಿಕೇರಿಯ ಸೆಂಟ್ರಲ್ ಶಾಲೆಯಲ್ಲಿ ಶಿಕ್ಷಕರ ತರಬೇತಿ ವಿಭಾಗವೊಂದನ್ನು ತೆರೆಯಿತು. ಈ ವಿಭಾಗ 1950ರ ತನಕ ನಡೆದು, ನಂತರ ವೀರರಾಜಪೇಟೆಯ ಸರಕಾರಿ ಪ್ರೌಢಶಾಲೆಗೆ ವರ್ಗಾಯಿಸಲ್ಪಟ್ಟಿತು. ಅಲ್ಲಿ ಮುಂದೆ ಇದನ್ನು ಬೇಸಿಕ್ ಶಾಲೆಯಾಗಿ ಪರಿವರ್ತಿಸಲಾಯಿತು. 1955ರಲ್ಲಿ ಈ ಶಾಲೆಯನ್ನು ಕುಶಾಲನಗರ ತಾಲೂಕಿನ ಕೂಡಿಗೆಯ ಸ್ವಂತ ಕಟ್ಟಡಕ್ಕೆ 'ಬೇಸಿಕ್ ಟ್ರೈನಿಂಗ್ ಶಾಲೆ' ಎಂಬ ಹೆಸರಿನಲ್ಲಿ ವರ್ಗಾಯಿಸಿದಾಗ, ಇದರಲ್ಲಿ ಒಟ್ಟು 75 ಮಂದಿ ಶಿಕ್ಷಕರು ತರಬೇತಿ ಪಡೆಯುತ್ತಿದ್ದರು. 1963ರವರೆವಿಗೂ ಇಲ್ಲಿ ಶಿಕ್ಷಕರನ್ನು ಎರಡು ವರ್ಷದ ಟೀಚರ್ಸ್ ಸರ್ಟಿಫಿಕೇಟ್ ಲೋಯರ್ ಗ್ರೇಡ್ ಮತ್ತು ಹತ್ತು ತಿಂಗಳ ಟೀಚರ್ಸ್ ಸರ್ಟಿಫಿಕೇಟ್ ಹೈಯರ್ ಗ್ರೇಡ್ ಪರೀಕ್ಷೆಗಳಿಗೆ ತಯಾರು ಮಾಡಲಾಗುತ್ತಿತ್ತು. 1963–64ನೇ ಶೈಕ್ಷಣಿಕ ವರ್ಷದಿಂದ ಲೋಯರ್ ಗ್ರೇಡ್ ಪರೀಕ್ಷೆ ರದ್ದುಗೊಳಿಸಿ ಹೈಯರ್ ಗ್ರೇಡ್ ಪರೀಕ್ಷೆಗೆ ಹೆಚ್ಚು ಉಪಾಧ್ಯಾಯರನ್ನು ಸೇರಿಸಿಕೊಳ್ಳಲಾಯಿತು. ವಸತಿ ಶಾಲೆಯಾದ ಇಲ್ಲಿ ಸಹ-ಶಿಕ್ಷಣವಿದ್ದಿತು. ಗಂಡಸರಿಗೆ ಮತ್ತು ಹೆಂಗಸರಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯಗಳಿದ್ದವು.

1990–91ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಮೂರು ಶಿಕ್ಷಕ ತರಬೇತಿ ಶಾಲೆಗಳಿದ್ದವು. 1955ರಲ್ಲಿ ಪ್ರಾರಂಭವಾದ ಕೂಡಿಗೆಯ ಸರಕಾರಿ ಶಿಕ್ಷಕ ತರಬೇತಿ ಶಾಲೆಯಲ್ಲಿ 1988-89 89–90 ಮತ್ತು 90–91ನೇ ವರ್ಷಗಳಿಗೆ ಕ್ರಮವಾಗಿ, 30 (20 ಗಂ., 10 ಹೆಂ.) 30 (11 ಗಂ., 19 ಹೆಂ.) ಹಾಗೂ 30 (13 ಗಂ., 17 ಹೆಂ.) ವಿದ್ಯಾರ್ಥಿಗಳಿದ್ದರು. 1966ರಲ್ಲಿ ಪ್ರಾರಂಭವಾದ ವೀರರಾಜಪೇಟೆಯ ಮಹಿಳೆಯರ ಶಿಕ್ಷಕ ತರಬೇತಿ ಶಾಲೆಯಲ್ಲಿ ಮೇಲಿನ ಮೂರು ವರ್ಷಗಳಿಗೆ ಕ್ರಮವಾಗಿ 125, 82 ಮತ್ತು 82 ವಿದ್ಯಾರ್ಥಿನಿಯರಿದ್ದರು. 1973ರಲ್ಲಿ ಪ್ರಾರಂಭವಾದ ಮಡಿಕೇರಿಯ ಸರಸ್ವತಿ ಶಿಕ್ಷಕ ತರಬೇತಿ ಶಾಲೆಯಲ್ಲಿ ಮೇಲಿನ ಮೂರು ವರ್ಷಗಳಿಗೆ ಕ್ರಮವಾಗಿ, 180 (95 ಗಂ., 85 ಹೆಂ.) 109 (64 ಗಂ., 45 ಹೆಂ.) ಮತ್ತು 109 (50 ಗಂ., 59 ಹೆಂ.) ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಮೇಲಿನ ಸಂಸ್ಥೆಗಳಲ್ಲಿ 1990–91ನೇಯ ಸಾಲಿಗೆ ಕ್ರಮವಾಗಿ 11, (9 ಗಂ., 2 ಹೆಂ.) 09 (4 ಗಂ., 5 ಹೆಂ.) ಮತ್ತು 08 (3 ಗಂ., 5 ಹೆಂ.) ಅಧ್ಯಾಪಕರು ಬೋಧನೆ ಮಾಡುತ್ತಿದ್ದರು. ವೀರರಾಜಪೇಟೆಯಲ್ಲಿ 1966ರಲ್ಲಿ ಪ್ರಾರಂಭವಾದ ಸರ್ವೋದಯ ಮಹಿಳೆಯರ ಶಿಕ್ಷಣ ಕಾಲೇಜಿನಲ್ಲಿ 1988–89ರಲ್ಲಿ ಒಟ್ಟು 51 (ಪ. ಜಾತಿ ಮೂರು, ಪ. ವರ್ಗ ಒಂದು), 89–90ರಲ್ಲಿ 39 (ಪ. ಜಾತಿ ಎರಡು, ಪ. ವರ್ಗ ಇಲ್ಲ) ಮತ್ತು 90–91ರಲ್ಲಿ 52 (ಪ. ಜಾತಿ ಒಂದು, ಪ. ವರ್ಗ ಒಂದು) ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದರು.

### ಸ್ಕೌಟ್ಸ್ ಮತ್ತು ಗೈಡ್ಸ್

ಕೊಡಗಿನಲ್ಲಿ 1935ರಲ್ಲಿಯೇ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿ ಪ್ರಾರಂಭವಾಯಿತಾದರೂ, 1963ರವರೆಗೆ ತೀವ್ರತರ ಅಭಿವೃದ್ಧಿಯನ್ನು ಹೊಂದಲಿಲ್ಲ. ಇದಕ್ಕೆ ಕಾರಣವೇನೆಂದರೆ, 12 ವರ್ಷಕ್ಕೆ ಮೇಲ್ಪಟ್ಟ ಮಕ್ಕಳೆಲ್ಲ ಎನ್.ಸಿ.ಸಿ. ಸೇರಬೇಕಿತ್ತು ಮತ್ತು ಅಲ್ಲಿ ದೇಹದಾರ್ಢ್ಯವಿಲ್ಲದೆ ಪ್ರವೇಶ ನಿರಾಕರಿಸಲ್ಪಟ್ಟವರೆಲ್ಲ ಕಡ್ಡಾಯವಾಗಿ ಎ.ಸಿ.ಸಿ. ಸೇರಬೇಕಿತ್ತು. ಆಗಿನ ಜಿಲ್ಲಾ ಸ್ಕೌಟ್ಸ್ ಕಮಿಷನರ್ ಆಗಿದ್ದ ಕಲಿಯಾಟಂಡ ಬೆಳ್ಳಪ್ಪನವರ ಶ್ರಮದಿಂದ ಹಲವಾರು ಶಾಲೆಗಳಲ್ಲಿ ಸ್ಕೌಟ್ ಚಳವಳಿ ಪ್ರಾರಂಭವಾಯಿತು. 1950ರಲ್ಲಿ ಬಾಯ್‌ಸ್ಕೌಟ್ಸ್ ಅಸೋಸಿಯೇಷನ್, ಹಿಂದೂಸ್ತಾನ್ ಅಸೋಸಿಯೇಷನ್ ಮತ್ತು ಗರ್ಲ್ ಗೈಡ್ಸ್ ಅಸೋಸಿಯೇಷನ್‌ಗಳು ಒಟ್ಟಿಗೆ ವಿಲೀನವಾಗಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಎಂದು ಕರೆಯಲ್ಪಟ್ಟಿತು. 1963ರಲ್ಲಿ ಕೊಡಗಿನ ಐದು ಶಾಲೆಗಳಲ್ಲಿ ಒಂದೊಂದರಲ್ಲಿ 25 ಮಂದಿಯಂತೆ ಐದು ಸ್ಕೌಟ್ ಟ್ರೂಪ್‌ಗಳನ್ನು ಪ್ರಾರಂಭಿಸಲಾಯಿತು. ಇದೇ ವರ್ಷ 12 ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಒಂದೊಂದರಲ್ಲಿ 24 ಮಂದಿಯಂತೆ, ಗೈಡ್ ಟ್ರೂಪ್‌ಗಳನ್ನು ಪ್ರಾರಂಭಿಸಲಾಯಿತು. 1970ರಲ್ಲಿ 12ನೇ ರಾಜ್ಯಮಟ್ಟದ ಜಾಂಬೂರಿ ಮಡಿಕೇರಿಯಲ್ಲಿ ನಡೆಯಿತು. ಹಲವಾರು ಗಣ್ಯರಿಗೆ ಇಲ್ಲಿ ಸೇವಾಪದಕ ನೀಡಲಾಯಿತು. ಮರುವರ್ಷ ಮಡಿಕೇರಿಯಲ್ಲೊಂದು ಸ್ಕೌಟ್ಸ್ ಮತ್ತು ಗೈಡ್ಸ್ ಭವನ ನಿರ್ಮಾಣ

ವಾಯಿತು. 1976ರಲ್ಲಿ ಸ್ಕ್ಯಾಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಆಯುಕ್ತರಿಗೆ ಅವರ ಅಮೋಘ ಸೇವೆಗಾಗಿ ರಾಷ್ಟ್ರಪತಿಯವರ 'ಸಿಲ್ವರ್ ಸ್ಟಾರ್' ಪದಕ ನೀಡಲಾಯಿತು.

1989-90ನೇ ಸಾಲಿಗೆ ಜಿಲ್ಲೆಯಲ್ಲಿ 1,536 ಸ್ಕ್ಯಾಟ್‌ಗಳು, 1,165 ಗೈಡ್‌ಗಳು, 936 ಕಬ್‌ಗಳು, 1,790 ಬುಲ್‌ಬುಲ್‌ಗಳು, 8 ರೇಂಜರ್‌ಗಳೂ ಇದ್ದರು. ಇವರಿಗೆ ತರಬೇತಿ ನೀಡಲು 48 ಸ್ಕ್ಯಾಟ್ ಮಾಸ್ಟರುಗಳು, 42 ಗೈಡ್ ಕ್ಯಾಪ್ಟನ್‌ಗಳು, 39 ಕಬ್‌ಮಾಸ್ಟರುಗಳು, ಒಬ್ಬ ರೇಂಜರ್ ಲೀಡರ್ ಮತ್ತು ಒಬ್ಬ ರೋವರ್ ಲೀಡರ್ ಇದ್ದರು. ಸಂಖ್ಯಾಬಲದಲ್ಲಿ ಕೊಡಗು ಜಿಲ್ಲೆ ರಾಜ್ಯದಲ್ಲಿ ನಾಲ್ಕನೇ ಸ್ಥಾನ ಪಡೆದಿದೆ. ಜಿಲ್ಲೆಯ ಸ್ಕ್ಯಾಟ್ಸ್‌ಗಳು ಮತ್ತು ಗೈಡ್‌ಗಳು ಫರೀದಾಬಾದ್, ಮುಂಬೈ ಹಾಗೂ ಭೋಪಾಲ್‌ಗಳಲ್ಲಿ ನಡೆದ ರಾಷ್ಟ್ರಮಟ್ಟದ ಜಾಂಬೂರಿಗಳಲ್ಲಿಯೂ ಮತ್ತು ರಾಜ್ಯದಲ್ಲಿ ನಡೆದ ಹತ್ತು ಜಾಂಬೂರಿಗಳಲ್ಲಿಯೂ ಭಾಗವಹಿಸಿದ್ದಾರೆ.

## ಪ್ರೌಢ ಶಿಕ್ಷಣ

ಸಮಗ್ರ ಪ್ರಾಥಮಿಕ ಶಿಕ್ಷಣ ವ್ಯವಸ್ಥೆ ಜಾರಿಯಾದ ನಂತರ ಪ್ರೌಢ ಶಿಕ್ಷಣ 8, 9 ಮತ್ತು 10ನೇ ತರಗತಿಗಳನ್ನೊಳಗೊಂಡಿದ್ದು, 10ನೇ ತರಗತಿಯಲ್ಲಿ ಎಸ್.ಎಸ್.ಎಲ್.ಸಿ. ಪಬ್ಲಿಕ್‌ಪರೀಕ್ಷೆಯಲ್ಲಿ ಮುಕ್ತಾಯಗೊಳ್ಳುತ್ತದೆ. ಮಡಿಕೇರಿಯ ಸೆಂಟ್ರಲ್ ಶಾಲೆಯಲ್ಲಿ 1879ರಲ್ಲಿ ಮೆಟ್ರಿಕ್ಯುಲೇಷನ್ ಪ್ರಾರಂಭವಾದುದರಿಂದ ಅದು ಪ್ರೌಢಶಾಲೆಯಾಗಿ ಮಾರ್ಪಟ್ಟಿತು. 1880ರಲ್ಲಿ ಈ ಶಾಲೆಯಿಂದ ಪ್ರಥಮ ವಿದ್ಯಾರ್ಥಿ ತಂಡ ಮದ್ರಾಸ್ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಯಿತು. 1909ರಲ್ಲಿ ಫ್ರೆಂಚ್ ಕ್ಯಾಥೊಲಿಕ್ ಮಿಷನ್‌ನವರು ಮಡಿಕೇರಿಯಲ್ಲಿ ಹೆಣ್ಣುಮಕ್ಕಳ ಶಾಲೆಯೊಂದನ್ನು ಆರಂಭಿಸಿ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಒಂದು ವಿದ್ಯಾರ್ಥಿ ನಿಲಯವನ್ನೂ ಕಟ್ಟಿದರು. 1922ರ ವರೆಗೆ ಮಡಿಕೇರಿಯ ಸೆಂಟ್ರಲ್ ಶಾಲೆ ಕೇವಲ ಗಂಡು ಮಕ್ಕಳಿಗಾಗಿ ಇದ್ದ ಪ್ರೌಢ ಶಾಲೆಯಾಗಿದ್ದಿತು. 1924ರ ವರೆಗೆ ಇಲ್ಲಿ ಯುರೋಪಿಯನ್ನರೇ ಮುಖ್ಯೋಪಾಧ್ಯಾಯರಾಗಿದ್ದರು. ಆ ವರ್ಷ ಪಂಜೆ ಮಂಗೇಶರಾಯರು ಪ್ರಥಮ ಭಾರತೀಯ ಮುಖ್ಯೋಪಾಧ್ಯಾಯರಾದರು. ಕೊಡಗಿನ ಶಿಕ್ಷಣ ಇಲಾಖೆ ಮದರಾಸಿನ ಶಿಕ್ಷಣ ಇಲಾಖೆಯ ಅಧೀನದಲ್ಲಿದ್ದುದ್ದರಿಂದ ಅಲ್ಲಿನ ವಿದ್ಯಾರ್ಥಿಗಳು ಮದರಾಸ್ ವಿಶ್ವವಿದ್ಯಾಲಯದ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಸಿದ್ಧರಾಗುತ್ತಿದ್ದರು. 1923ರಲ್ಲಿ ಮಡಿಕೇರಿಯ ಹೆಣ್ಣು ಮಕ್ಕಳ ಲೋಯರ್ ಸೆಕೆಂಡರಿ ಶಾಲೆ ಮತ್ತು ವೀರರಾಜಪೇಟೆಯ ಸರಕಾರೀ ಪ್ರಾಥಮಿಕ ಶಾಲೆಗಳನ್ನು ಪ್ರೌಢ ಶಾಲೆಗಳಾಗಿ ಪರಿವರ್ತಿಸಲಾಯಿತು. 1909ರಲ್ಲಿ ಸ್ಥಾಪನೆಯಾದ ಮಡಿಕೇರಿಯ ಕಾನ್ವೆಂಟ್ ಬಾಲಕಿಯರ ಶಾಲೆಯೂ ಇದೇ ವರ್ಷ ಪ್ರೌಢಶಾಲೆಯಾಯಿತು. ಸೋಮವಾರಪೇಟೆ, ನಾಪೋಕ್ಲು ಹಾಗೂ ಪೊನ್ನಂಪೇಟೆಗಳಲ್ಲಿ 1944ರಲ್ಲಿ ಖಾಸಗಿಯತ್ನದಿಂದ ಆದ ಪ್ರೌಢಶಾಲೆಗಳನ್ನು 1948ರಲ್ಲಿ ಸರಕಾರವು ವಹಿಸಿಕೊಂಡಿತು. ಇಲ್ಲಿನ ಸೇಂಟ್ ಮೈಕೇಲ್ ಶಾಲೆ ಮತ್ತು ವೀರರಾಜಪೇಟೆಯ ಸೇಂಟ್ ಆ್ಯನ್ ಶಾಲೆಗಳು ಕ್ರಮವಾಗಿ 1945 ಮತ್ತು 1949ರಲ್ಲಿ ಪ್ರೌಢಶಾಲೆಗಳಾದವು. ಹಾತೂರಿನಲ್ಲಿ 1948ರಲ್ಲಿ, ಮುದಿಕೇರಿಯಲ್ಲಿ 1949ರಲ್ಲಿ ಹಾಗೂ ಶ್ರೀಮಂಗಲದಲ್ಲಿ 1951ರಲ್ಲಿ ಖಾಸಗಿ ಪ್ರೌಢ ಶಾಲೆಗಳು ಪ್ರಾರಂಭವಾದವು. 1947ರಲ್ಲಿ ಜಿಲ್ಲೆಯಲ್ಲಿ ಏಳು ಪ್ರೌಢಶಾಲೆಗಳಿದ್ದು, 1956ರ ವೇಳೆಗೆ ಇವುಗಳ ಸಂಖ್ಯೆ 11 ಆಗಿದ್ದಿತು. ಇವುಗಳಲ್ಲಿ 5 ಸರಕಾರಿ ಮತ್ತು 6 ಅನುದಾನಿತ ಪ್ರೌಢಶಾಲೆಗಳಾಗಿದ್ದವು.

### ಪಠ್ಯಕ್ರಮ

ಕೊಡಗಿನ ಪ್ರೌಢಶಾಲೆಗಳು ಮದರಾಸಿನ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಿದ್ದುದರಿಂದ ಅಲ್ಲಿನ ಪಠ್ಯಕ್ರಮವನ್ನೇ ಅನುಸರಿಸುತ್ತಿದ್ದವು. ಈ ಪದ್ಧತಿ 1957ರ ವರೆಗೆ ಜಾರಿಯಲ್ಲಿತ್ತು. ಮಡಿಕೇರಿಯ ಪ್ರೌಢ ಶಾಲೆಗಳಲ್ಲಿ 1933 ರಿಂದ 1949ರ ವರೆಗೆ ಚಿತ್ರದ ಕುಶಲ ಕೈಗಾರಿಕೆ ಮತ್ತು ವೀರರಾಜಪೇಟೆ ಪ್ರೌಢಶಾಲೆಯಲ್ಲಿ ಬಡಗಿ ಕೆಲಸಗಳು ಶಾಲಾ ಪಠ್ಯಕ್ರಮದಲ್ಲಿ ಬೋಧನಾ ವಿಷಯಗಳಾಗಿದ್ದವು. ಶನಿವಾರಸಂತೆ ಪ್ರೌಢಶಾಲೆಯಲ್ಲಿ ನೇಯ್ಗೆ ಕೆಲಸ ಬಹಳ ಹಿಂದಿನಿಂದಲೂ ಬೋಧನಾ ವಿಷಯವಾಗಿದ್ದಿತು. 1944ರ ವರೆವಿಗೆ ಶಿಕ್ಷಣ ಮಾಧ್ಯಮ ಇಂಗ್ಲಿಷ್ ಆಗಿದ್ದು, ತದನಂತರ ಕನ್ನಡವಾಯಿತು. ಇಂಗ್ಲಿಷ್, ಕನ್ನಡ, ಸಮಾಜ ಶಾಸ್ತ್ರ ಸಾಮಾನ್ಯ ಗಣಿತ ಹಾಗೂ ಸಾಮಾನ್ಯ ವಿಜ್ಞಾನ ಇವು ಪರೀಕ್ಷಾ ವಿಷಯಗಳಾಗಿದ್ದವು. ಹತ್ತನೇ ತರಗತಿಯವರೆಗೆ ಹಿಂದಿ ಭಾಷೆ ಬೋಧನಾ ವಿಷಯವೂ, ಪರೀಕ್ಷಾ ವಿಷಯವೂ ಆಗಿದ್ದಿತು. 1952ರಲ್ಲಿ ಮೈಸೂರು ರಾಜ್ಯದಲ್ಲಿ ನೇಮಿಸಲ್ಪಟ್ಟ ಪ್ರೌಢಶಿಕ್ಷಣ ಆಯೋಗ 1953ರಲ್ಲಿ ತನ್ನ ವರದಿ ಸಲ್ಲಿಸಿತು. ಅದರಲ್ಲಿ ಈ ಕೆಳಕಂಡ ಸಲಹೆಗಳನ್ನು ನೀಡಿತು. (1) ಏಳು ವರ್ಷಗಳ ಪ್ರಾಥಮಿಕ ಶಿಕ್ಷಣದ ನಂತರ ಮೂರು ವರ್ಷಗಳ ಕಾಲೇಜು ಶಿಕ್ಷಣಕ್ಕೆ ಪೂರ್ವಭಾವಿಯಾಗಿ ನಾಲ್ಕು ವರ್ಷಗಳ ಉನ್ನತ ಪ್ರೌಢ ಶಿಕ್ಷಣ ನೀಡಬೇಕು. (2) ಮಾಮೂಲು ವಿಷಯಗಳಾದ ಗಣಿತ, ಸಮಾಜಶಾಸ್ತ್ರ, ವಿಜ್ಞಾನ ಮತ್ತು ಭಾಷೆಗಳ ಜೊತೆಗೆ, ಸಾಹಿತ್ಯ, ತಂತ್ರಜ್ಞಾನ,

ಕೃಷಿ, ಲಲಿತಕಲೆ ಮತ್ತು ಗೃಹವಿಜ್ಞಾನ, ಇವೇ ಮೊದಲಾದ ವಿಷಯುಗಳನ್ನು ಪಠ್ಯಕ್ರಮದಲ್ಲಿ ಸೇರಿಸಬೇಕು, ಹಾಗೂ ಇವುಗಳ ಬೋಧನೆ ಪ್ರೌಢಶಿಕ್ಷಣದ ಎರಡನೇ ವರ್ಷದಿಂದ ಪ್ರಾರಂಭವಾಗಬೇಕು.

ಈ ಸಲಹೆಗಳ ಮೇರೆಗೆ ಮೈಸೂರು ಸರಕಾರವು 1957 ರಲ್ಲಿ ಕೊಡಗಿಗೂ ಅನ್ವಯಿಸುವಂತೆ ನೂತನ ಪಠ್ಯಕ್ರಮ ತಯಾರಿಸಿತು. ಮಡಿಕೇರಿ ಮತ್ತು ಪೊನ್ನಂಪೇಟೆಗಳ ಪ್ರೌಢ ಶಾಲೆಗಳನ್ನು ಸರಕಾರ 1956ರಲ್ಲಿ ಹೈಯರ್ ಸೆಕೆಂಡರಿ ಶಾಲೆಗಳಾಗಿ ಪರಿವರ್ತಿಸಿತು. ಈ ಎರಡೂ ಶಾಲೆಗಳಿಂದ 1960ರಲ್ಲಿ ಮೊದಲ ವಿದ್ಯಾರ್ಥಿಗಳ ತಂಡಗಳು ಪಬ್ಲಿಕ್ ಪರೀಕ್ಷೆಗೆ ಹಾಜರಾದವು. ಸಮಗ್ರ ಶಿಕ್ಷಣ ಸಲಹಾ ಸಮಿತಿ ಎಂಟರಿಂದ ಹತ್ತನೇ ತರಗತಿಯುವರೆವಿಗೆ (4 ರಿಂದ 6ನೇ) ಫಾರ್ಮ್) ನೂತನ ಪಠ್ಯಕ್ರಮ ತಯಾರಿಸಿ 1960-61ನೇ ಸಾಲಿನಲ್ಲಿ 8ನೇ ತರಗತಿಗೂ 1961-62ನೇ ವರ್ಷ ಒಂಭತ್ತನೇಯ ತರಗತಿಗೂ ಹಾಗೂ 1962-63ನೇ ವರ್ಷ ಹತ್ತನೇ ತರಗತಿಗೂ ಅನ್ವಯಿಸಿತು.

ವಾರ್ಷಿಕ ವರಮಾನ 2,400 ರೂಪಾಯಿಗಳಿಗಿಂತ ಕಡಿಮೆ ಇದ್ದ ಪೋಷಕರ ಮಕ್ಕಳಿಗೆ 1962-63ನೇ ಸಾಲಿನಿಂದ ಪ್ರೌಢಶಿಕ್ಷಣವನ್ನು ಉಚಿತಗೊಳಿಸಲಾದುದರಿಂದ, ಸುಮಾರು ಶೇಕಡಾ 90ರಷ್ಟು ಮಕ್ಕಳು ಇದರ ಪ್ರಯೋಜನ ಪಡೆದರು. ಜಿಲ್ಲೆಯಲ್ಲಿ 1964-65ರ ವೇಳೆಗೆ ಒಟ್ಟು 32 ಪ್ರೌಢಶಾಲೆಗಳಿದ್ದು, ಇವುಗಳಲ್ಲಿ ಐದು (ಮಡಿಕೇರಿ, ಪೊನ್ನಂಪೇಟೆ, ವೀರರಾಜಪೇಟೆ, ಸೋಮವಾರಪೇಟೆ ಮತ್ತು ನಾಪೋಕ್ಲು) ಸರಕಾರೀ ಪ್ರೌಢಶಾಲೆಗಳಾಗಿದ್ದು, ಉಳಿದ 27 ಖಾಸಗಿ ಪ್ರೌಢಶಾಲೆಗಳಾಗಿದ್ದವು.

ಭಾರತ ಶಿಕ್ಷಣ ಆಯೋಗದ ಶಿಫಾರ್ಸಿನಂತೆ 1ನೇಯ ತರಗತಿಯಿಂದ 10ನೇಯ ತರಗತಿಯವರೆಗೆ ಏಕರೂಪ ಶಿಕ್ಷಣ ಕ್ರಮ ಪ್ರಾರಂಭಿಸಲಾಯಿತು. ಇದನ್ನು 1969-70ನೇ ಸಾಲಿನಿಂದ 9ನೇಯ ತರಗತಿಯಲ್ಲಿಯೂ, 70-71ನೇಯ ಸಾಲಿನಿಂದ 8 ಮತ್ತು 10ನೇಯ ತರಗತಿಯಲ್ಲಿಯೂ ಪ್ರಾರಂಭಿಸಲಾಯಿತು. ಇದರಂತೆ ಪ್ರಠ್ಯಕ್ರಮದಲ್ಲಿ ಮೂರು ಭಾಷೆಗಳು ಮತ್ತು ಮೂರು ಮುಖ್ಯ ವಿಷಯ (ಕೋರ್ ಸಬ್ಜೆಕ್ಟ್ಸ್)ಗಳನ್ನು ಸೇರಿಸಿ, ಐಚ್ಛಿಕ ವಿಷಯುಗಳನ್ನು ಕೈಬಿಡಲಾಯಿತು.

ಜಿಲ್ಲೆಯಲ್ಲಿ 1991ರ ಮಾರ್ಚ್ ವೇಳೆಗೆ 66 ಪ್ರೌಢ ಶಾಲೆಗಳಿದ್ದು, ಅವುಗಳಲ್ಲಿ 23 ಸರಕಾರಿ, 32 ಅನುದಾನಿತ ಮತ್ತು 11 ಅನುದಾನರಹಿತ ಶಾಲೆಗಳಾಗಿದ್ದವು. ಅವುಗಳ ಕಾಲಾನುಕ್ರಮಣ ಪಟ್ಟಿಯನ್ನೂ, ಪ್ರತೀ ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರ ಮತ್ತು ಅಧ್ಯಾಪಕರ ಸಂಖ್ಯೆಯನ್ನೂ ಪುಟ 670 ರಿಂದ ನೋಡಿ.

### ಎಸ್.ಎಸ್.ಎಲ್.ಸಿ. ಪರೀಕ್ಷೆ

ರಾಜ್ಯದ ಇತರೆಡೆಗಳಂತೆ ಜಿಲ್ಲೆಯ ಪ್ರೌಢಶಾಲೆ ಹಾಗೂ ಸಂಯುಕ್ತ ಜ್ಯೂನಿಯರ್ ಕಾಲೇಜ್‌ಗಳ ಪ್ರೌಢಶಾಲಾ ವಿದ್ಯಾರ್ಥಿಗಳು ಕರ್ನಾಟಕ ಪ್ರೌಢಶಾಲಾ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾಗುತ್ತಾರೆ. 1987-88, 88-89 ಹಾಗೂ 89-90 ಈ ಮೂರು ವರ್ಷಗಳಿಗೆ ಜಿಲ್ಲೆಯ ಮೇಲಿನ ಪರೀಕ್ಷಾ ವಿವರಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.

| ವರ್ಷ | ಪರೀಕ್ಷೆಗೆ ಕುಳಿತವರು | | | ಉತ್ತೀರ್ಣರಾದವರು | | | ಶೇಕಡಾವಾರು ಫಲಿತಾಂಶ | | |
|---|---|---|---|---|---|---|---|---|---|
| | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು |
| ಮಾರ್ಚ್ 1988 | 3,466 | 3,029 | 6,495 | 1,290 | 1,135 | 2,425 | 37.21 | 37.47 | 37.33 |
| ಮಾರ್ಚ್ 1989 | 3,464 | 2,937 | 6,401 | 1,172 | 990 | 2,162 | 33.83 | 33.70 | 33.77 |
| ಏಪ್ರಿಲ್ 1990 | 3,179 | 2,958 | 6,137 | 1,394 | 1,392 | 2,786 | 43.85 | 47.05 | 45.39 |
| ಅಕ್ಟೋಬರ್ 1990 | 1,286 | 1,090 | 2,376 | 112 | 117 | 229 | 08.70 | 10.73 | 9.63 |
| ಏಪ್ರಿಲ್ 1991 | 3,283 | 2,799 | 6,082 | 1,672 | 1,430 | 3,102 | 50.92 | 51.08 | 57.00 |

**ಸರಕಾರಿ ಕ್ರೀಡಾ ಶಾಲೆ, ಕೂಡಿಗೆ**

ಯುವಜನ ಸೇವೆ ಹಾಗೂ ಕ್ರೀಡಾ ಇಲಾಖೆಯಿಂದ 1982ರಲ್ಲಿ ಸ್ಥಾಪಿಸಲ್ಪಟ್ಟ ಈ ಶಾಲೆಯಲ್ಲಿ 14 ವರ್ಷ ಮೇಲ್ಪಟ್ಟ ಮಕ್ಕಳನ್ನು ಅವರ ಕ್ರೀಡಾಸಕ್ತಿಗೆ ಅನುಗುಣವಾಗಿ, 8ನೇ ತರಗತಿಗೆ ಸೇರಿಸಿಕೊಳ್ಳಲಾಗುವುದು. ಅವರಿಗೆ ಮೂರು ವರ್ಷಗಳ ಕಾಲ, ಅಂದರೆ 10ನೇ ತರಗತಿಯವರೆಗೆ ಆಟೋಟಗಳಲ್ಲಿ ತರಬೇತಿ ನೀಡಲಾಗುವುದು. ಇದರೊಡನೆ ಇತರ ವಿಷಯಗಳಾದ ಕನ್ನಡ, ಇಂಗ್ಲಿಷ್, ಹಿಂದಿ ಗಣಿತ, ವಿಜ್ಞಾನ ಹಾಗೂ ಸಮಾಜ ಶಾಸ್ತ್ರಗಳನ್ನು, ಕನ್ನಡ ಮತ್ತು ಇಂಗ್ಲಿಷ್ ಎರಡೂ ಮಾಧ್ಯಮಗಳಲ್ಲಿ ಬೋಧನೆ ಮಾಡಲಾಗುವುದು. ಈ ಶಾಲೆಯಲ್ಲಿ 1987-88ರಲ್ಲಿ ಒಟ್ಟು 103 ಮಂದಿ (52 ಗಂಡು 51 ಹೆಣ್ಣು), 1988-89ರಲ್ಲಿ ಒಟ್ಟು 111 (58 ಗಂಡು, 53 ಹೆಣ್ಣು) ಮಂದಿ, 1989-90ರಲ್ಲಿ ಒಟ್ಟು 92 (33 ಗಂಡು, 59 ಹೆಣ್ಣು) ಮತ್ತು 1990-91ರಲ್ಲಿ ಒಟ್ಟು 77 ಮಂದಿ (29 ಗಂಡು, 48 ಹೆಣ್ಣು) ಮಕ್ಕಳು ವ್ಯಾಸಂಗ ಮಾಡುತ್ತಿದ್ದರು. ಇವರೊಡನೆ 6 ಮಂದಿ ಶೈಕ್ಷಣಿಕ ಹಾಗೂ 3 ಕ್ರೀಡಾಬೋಧಕ ಸಿಬ್ಬಂದಿ 1990-91ನೇ ಸಾಲಿನಲ್ಲಿ ಇದ್ದರು.

**ನವೋದಯ ಶಾಲೆ, ಮಡಿಕೇರಿ**

ನೂತನ ಶಿಕ್ಷಣ ನೀತಿಯಡಿ, ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯವು 1986ರಲ್ಲಿ ಪ್ರತೀ ಜಿಲ್ಲೆಗೆ ಒಂದರಂತೆ ನವೋದಯ ಶಾಲೆಗಳನ್ನು ಪ್ರಾರಂಭಿಸಿತು. ಕೇಂದ್ರ ಪ್ರೌಢ ಶಿಕ್ಷಣ ಮಂಡಳಿಯ ಆಡಳಿತಕ್ಕೊಳಪಡುವ ಈ ಶಾಲೆಗಳು, ಸಾಮಾಜಿಕ ಅಥವಾ ಆರ್ಥಿಕ ಹಿನ್ನೆಲೆಯನ್ನವಲಂಬಿಸದೆ, ಮುಖ್ಯವಾಗಿ ಗ್ರಾಮಾಂತರ ವಿದ್ಯಾರ್ಥಿಗಳ ಏಳಿಗೆಗಾಗಿದ್ದು, ರಾಷ್ಟ್ರೀಯ ಭಾವೈಕ್ಯತೆ ಹಾಗೂ ವಿದ್ಯಾರ್ಥಿಗಳಲ್ಲಡಗಿರುವ ಪ್ರತಿಭೆಯ ಸಂಪೂರ್ಣ ಬೆಳವಣಿಗೆಯ ಧ್ಯೇಯಗಳನ್ನು ಹೊಂದಿವೆ. 5ನೇ ತರಗತಿ ಪಾಸಾಗಿರುವ ವಿದ್ಯಾರ್ಥಿಗಳು, ದೆಹಲಿಯ ಎನ್.ಸಿ.ಇ.ಆರ್.ಟಿ. ಸಂಸ್ಥೆ ರೂಪಿಸಿ, ವಿದ್ಯಾರ್ಥಿಗಳ ಪ್ರಾಂತೀಯ ಭಾಷೆಗಳಲ್ಲಿ ನಡೆಸುವ ಪರೀಕ್ಷೆಯಲ್ಲಿ ಪಾಸಾಗುವ ಮೂಲಕ ಈ ಶಾಲೆಗಳಿಗೆ ಸೇರಬಹುದು. ದಾಖಲಾತಿಯ ಒಟ್ಟು ಸಂಖ್ಯೆಯ 1/3 ಭಾಗ ವಿದ್ಯಾರ್ಥಿನಿಯರಿಗೆ ಮೀಸಲಾಗಿದೆ. ಗ್ರಾಮಾಂತರ ಮಕ್ಕಳ ಅನುಕೂಲಕ್ಕಾಗಿ ಈ ಶಾಲೆಗಳಲ್ಲಿ ಏಳು ಅಥವಾ ಎಂಟನೇಯ ತರಗತಿಯವರೆಗೆ ಪ್ರಾಂತೀಯ ಭಾಷೆಯಲ್ಲಿಯೇ ಬೋಧನೆ ಮಾಡಲಾಗುತ್ತದೆ. ಆ ನಂತರ ಹಿಂದಿ ಅಥವಾ ಇಂಗ್ಲಿಷಿನಲ್ಲಿ ಬೋಧನೆ ನಡೆಯುತ್ತದೆ. ಹರಿಜನ ಗಿರಿಜನರಿಗೆ ಮೀಸಲಾತಿ, ಜಿಲ್ಲೆಯ ಜನಸಂಖ್ಯೆಯಲ್ಲಿ ಅವರ ಪ್ರಮಾಣವನ್ನವಲಂಬಿಸಿರುತ್ತದೆ. ಮಕ್ಕಳಿಗೆ ಊಟ, ವಸತಿ, ಸಮವಸ್ತ್ರ, ಪುಸ್ತಕ, ಲೇಖನಿ ಮುಂತಾದ ಇತರ ಪಠ್ಯ ವಸ್ತುಗಳನ್ನು ಉಚಿತವಾಗಿ ನೀಡುವುದರೊಂದಿಗೆ ಸ್ವಂತ ಊರಿಗೆ ಹೋಗಿ ಬರಲು ಬಸ್ಸು ಅಥವಾ ರೈಲು ಖರ್ಚನ್ನೂ ಸರಕಾರ ನೀಡುತ್ತದೆ.

ಕೊಡಗು ಜಿಲ್ಲೆಯ ಮಡಿಕೇರಿಯ ಸರ್ಕಾರಿ ಕಿರಿಯ ಕಾಲೇಜಿನ ಆವರಣದಲ್ಲಿ 1987ರಲ್ಲಿ ಪ್ರಾರಂಭವಾದ ನವೋದಯ ಶಾಲೆಯಲ್ಲಿ ಪ್ರಾರಂಭಿಕ ವರ್ಷ ಒಟ್ಟು 51 (31 ಗಂ. 18 ಹೆಂ., ಇವರಲ್ಲಿ 1 ಪ.ವ. 1 ಪ.ಬು.) ಮಕ್ಕಳಿದ್ದರು. 1990ರಲ್ಲಿ ಒಟ್ಟು ಮಕ್ಕಳ ಸಂಖ್ಯೆ 232 (122 ಗಂ. 110 ಹೆ., ಇವರಲ್ಲಿ 21 ಪ.ವ. 7 ಪ.ಬು.) ಆಗಿದ್ದಿತು. ಬೋಧಕ ಸಿಬ್ಬಂದಿ 14 ಆಗಿದ್ದು, ಇವರಲ್ಲಿ ಒಬ್ಬ ಮಹಿಳೆ ಇದ್ದರು. ಸುಮಾರು 5,000 ಪುಸ್ತಕಗಳ ಗ್ರಂಥಾಲಯವನ್ನೂ ಈ ಶಾಲೆ ಹೊಂದಿದೆ. ಮಕ್ಕಳ ಆರೋಗ್ಯ ರಕ್ಷಣೆಗಾಗಿ ಒಬ್ಬ ಪೂರ್ಣಕಾಲಿಕ ನರ್ಸ್ ಇದ್ದು, ಸರಕಾರಿ ವೈದ್ಯರು ವಾರಕ್ಕೆರಡು ಬಾರಿ ಭೇಟಿ ನೀಡಿ ಅನಾರೋಗ್ಯ ಪೀಡಿತ ಮಕ್ಕಳ ತಪಾಸಣೆ ಮಾಡುತ್ತಾರೆ. ಗಾಳಿಬೀಡಿನಲ್ಲಿ ಸ್ವಂತ ಕಟ್ಟಡಕ್ಕೆ ಇದು ಸ್ಥಳಾಂತರಗೊಳ್ಳುವುದೆಂದು ಹೇಳಲಾಗಿತ್ತು.

## ಪದವಿಪೂರ್ವ ಶಿಕ್ಷಣ

ಜಿಲ್ಲೆಯಲ್ಲಿ ಪದವಿಪೂರ್ವ ಶಿಕ್ಷಣ 1956ರಲ್ಲಿಯೇ ಪ್ರಾರಂಭವಾಯಿತು. 1949ರಲ್ಲಿ ಪ್ರಾರಂಭವಾದ ಮಡಿಕೇರಿಯ ದ್ವಿತೀಯ ದರ್ಜೆ ಕಾಲೇಜಿನಲ್ಲಿ 1956ರಲ್ಲಿ ಪದವಿಪೂರ್ವ ತರಗತಿಗಳು ಆರಂಭಗೊಂಡವು. ಆಗ ಪದವಿ ಹಾಗೂ ಪದವಿಪೂರ್ವ ಶಿಕ್ಷಣ ಮದರಾಸು ವಿಶ್ವವಿದ್ಯಾಲಯದ ಆಡಳಿತದಲ್ಲಿದ್ದಿತು. 1957-58 ರಿಂದ ಅದು ಮೈಸೂರು ವಿಶ್ವವಿದ್ಯಾಲಯದ ಅಧೀನಕ್ಕೆ ಬಂದಿತು. ಎಸ್ಸೆಸ್ಸೆಲ್ಸಿ ಪಾಸಾದ ಜಿಲ್ಲೆಯ ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ತೊಂದರೆ ಪಡುತ್ತಿದ್ದರು. ಅದಕ್ಕಾಗಿ ಅವರು ಮದರಾಸಿಗೆ ಹೋಗುವುದು ಕಷ್ಟಕರವೂ, ದುಬಾರಿಯೂ ಆಗಿತ್ತು. ಈ ತೊಂದರೆಗಳನ್ನು ಮನಗಂಡ ಸರಕಾರ ಇದೇ ವರ್ಷ ಮಡಿಕೇರಿ ಮತ್ತು ಪೊನ್ನಂಪೇಟೆಗಳ ಪ್ರೌಢಶಾಲೆಗಳನ್ನು ಹೈಯರ್ ಸೆಕೆಂಡರಿ ಶಾಲೆಗಳಾಗಿ ಪರಿವರ್ತಿಸಿತು. ಕಾಲಕ್ರಮೇಣ ಜಿಲ್ಲೆಯ ಇನ್ನೂ ಹಲವಾರು ಪ್ರೌಢಶಾಲೆಗಳನ್ನು ಇದೇ ರೀತಿ ಪರಿವರ್ತಿಸಿದುದರಿಂದ ಎಲ್ಲರಿಗೂ ತಮ್ಮ ತಾಲೂಕುಗಳಲ್ಲಿಯೇ ಪದವಿಪೂರ್ವ ಶಿಕ್ಷಣ ದೊರೆಯುವಂತಾಯಿತು. ನಂತರ ಜಾರಿಗೆ ಬಂದ ಒಂದು ವರ್ಷದ ಪಿಯುಸಿ ಶಿಕ್ಷಣ, 1972ರಲ್ಲಿ

1988-89, 89-90 ಮತ್ತು 90-91ನೇ ಸಾಲಿಗೆ ಜಿಲ್ಲೆಯ ಪ್ರೌಢಶಾಲೆಗಳ

| ಕ್ರ. ಸಂ. | ಸಂಸ್ಥೆಯ ಹೆಸರು | ಪ್ರಾರಂಭಿಕ ವರ್ಷ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 1988—89 ಗಂ. | ಹೆಂ. | 89—90 ಗಂ. | ಹೆಂ. | 90—91 ಗಂ. | ಹೆಂ. |
|---|---|---|---|---|---|---|---|---|
| 1 | 2 | 3 | 4 | | 5 | | 6 | |
| 1. | ಸರ್ಕಾರಿ ಪ್ರೌಢಶಾಲೆ, ಮಡಿಕೇರಿ. | 1879 | 651 | 511 | 512 | 357 | 496 | 341 |
| 2. | ಸಂತ ಜೋಸೆಫರ ಪ್ರೌಢಶಾಲೆ, ಮಡಿಕೇರಿ. | 1922 | 52 | 700 | 46 | 668 | 45 | 651 |
| 3. | ಸರ್ಕಾರಿ ಪ್ರೌಢಶಾಲೆ, ಸೋಮವಾರಪೇಟೆ. | 1944 | 336 | 138 | 305 | 169 | 256 | 167 |
| 4. | ಸರ್ಕಾರಿ ಪ್ರೌಢಶಾಲೆ, ಪೊನ್ನಂಪೇಟೆ. | 1944 | 337 | 258 | 337 | 252 | 335 | 296 |
| 5. | ಸರ್ಕಾರಿ ಪ್ರೌಢಶಾಲೆ, ನಾಪೋಕ್ಲು. | 1944 | 148 | 93 | 134 | 84 | 130 | 91 |
| 6. | ಸೇಂಟ್ ಆ್ಯನ್ಸ್ ಪ್ರೌಢಶಾಲೆ, ವೀರರಾಜಪೇಟೆ. | 1945 | 1,205 | 936 | 1,290 | 979 | 1,079 | 960 |
| 7. | ಜನತಾ ಪ್ರೌಢಶಾಲೆ, ಹುದಿಕೇರಿ. | 1949 | 86 | 74 | 87 | 76 | 67 | 70 |
| 8. | ಹಾತೂರು ಪ್ರೌಢಶಾಲೆ, ಹಾತೂರು. | 1950 | 69 | 79 | 59 | 78 | 63 | 74 |
| 9. | ಶ್ರೀಮಂಗಲ ಪ್ರೌಢಶಾಲೆ, ಶ್ರೀಮಂಗಲ. | 1952 | 137 | 131 | 150 | 135 | 156 | 150 |
| 10. | ಮೂರ್ನಾಡು ಪ್ರೌಢಶಾಲೆ, ಮೂರ್ನಾಡು. | 1958 | 161 | 153 | 156 | 153 | 147 | 133 |
| 11. | ಶಾರದಾ ಪ್ರೌಢಶಾಲೆ, ಬೆಕ್ಕೆಸೊಡ್ಲೂರು. | 1958 | 85 | 79 | 85 | 72 | 83 | 87 |

ಕಾಲಾನುಕ್ರಮ ಪಟ್ಟಿ ಮತ್ತು ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರ ವಿವರ.

| ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು. | | | | | | ಪರಿಶಿಷ್ಟ ಬುಡಕಟ್ಟು ವಿದ್ಯಾರ್ಥಿಗಳು | | | | | | ಒಟ್ಟು ಅಧ್ಯಾಪಕರು | |
|---|---|---|---|---|---|---|---|---|---|---|---|---|---|
| 88—89 | | 89—90 | | 90—91 | | 88—89 | | 89—90 | | 90—91 | | 90—91 | |
| ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. | ಗಂ. | ಹಂ. | ಗಂ. | ಹೆಂ. |
| 7 | | 8 | | 9 | | 10 | | 11 | | 12 | | 13 | |
| 77 | 56 | 60 | 42 | 57 | 51 | 14 | 11 | 26 | 16 | 08 | 04 | 19 | 21 |
| 06 | 43 | 06 | 47 | 04 | 45 | 0 | 6 | 01 | 7 | 01 | 7 | 02 | 18 |
| 29 | 12 | 41 | 15 | 20 | 13 | 08 | 07 | 05 | 10 | 2 | 6 | ಬಂದಿಲ್ಲ. | |
| 28 | 31 | 21 | 28 | 29 | 28 | 4 | 5 | 8 | 6 | 1 | 4 | 14 | 11 |
| 17 | 01 | 27 | 01 | 31 | 02 | 7 | 0 | 9 | 0 | 5 | 0 | 12 | 0 |
| 27 | 34 | 31 | 28 | 32 | 30 | 5 | 13 | 5 | 5 | 4 | 3 | 14 | 34 |
| 2 | 04 | 3 | 3 | 1 | 5 | — | — | ಇಲ್ಲ | | — | — | 5 | 02 |
| — | ಇಲ್ಲ | — | | 0 | 1 | 0 | 1 | 0 | 2 | 0 | 1 | 4 | 02 |
| 2 | 6 | 6 | 0 | 5 | 0 | 6 | 1 | 0 | 1 | 0 | 1 | 8 | 2 |
| 16 | 10 | 23 | 16 | 23 | 15 | 0 | 1 | 0 | 2 | 0 | 1 | 3 | 4 |
| 0 | 2 | 2 | 1 | 4 | 2 | 1 | 4 | 1 | 3 | 3 | 3 | 5 | 1 |

| 1 | 2 | 3 | 4 | | 5 | | 6 | |
|---|---|---|---|---|---|---|---|---|
| 12. | ಕರಿಯಂಡ ಕೇಂದ್ರ ಪ್ರೌಢಶಾಲೆ, ಚೇಯಂಡಾನೆ. | 1959 | 65 | 64 | 50 | 47 | 44 | 56 |
| 13. | ಕಾವೇರಿ ಪ್ರೌಢಶಾಲೆ, ಭಾಗಮಂಡಲ. | 1959 | 189 | 147 | 144 | 132 | 121 | 139 |
| 14. | ಚೇರಂಬಾಣೆ ಪ್ರೌಢಶಾಲೆ, ಚೇರಂಬಾಣೆ. | 1960 | 138 | 111 | 130 | 103 | 115 | 105 |
| 15. | ಮೂದಾಪುರ ಪ್ರೌಢಶಾಲೆ, ಮೂದಾಪುರ. | 1960 | 186 | 140 | 160 | 136 | 170 | 148 |
| 16. | ವಿಜಯಲಕ್ಷ್ಮಿ ಪ್ರೌಢಶಾಲೆ, ಬಾಳೆಲೆ. | 1960 | 71 | 55 | 64 | 56 | 65 | 59 |
| 17. | ಅಮ್ಮತ್ತಿ ಪ್ರೌಢಶಾಲೆ. ಅಮ್ಮತ್ತಿ. | 1961 | 184 | 143 | 194 | 146 | 187 | 120 |
| 18. | ವಿವಿಧೋದ್ದೇಶ ಸಹಕಾರಿ ಪ್ರೌಢಶಾಲೆ, ಪೊನ್ನಪ್ಪಸಂತೆ. | 1961 | 54 | 41 | 53 | 47 | 62 | 41 |
| 19. | ಮರೆನಾಡು ಪ್ರೌಢಶಾಲೆ, ಮರೆನಾಡು. | 1963 | 67 | 55 | 75 | 63 | 69 | 51 |
| 20. | ಚಟ್ಟಳ್ಳಿ ಪ್ರೌಢಶಾಲೆ, ಚಟ್ಟಳ್ಳಿ. | 1963 | 97 | 70 | 110 | 64 | 110 | 67 |
| 21. | ಕೆ.ಬಿ. ಪ್ರೌಢಶಾಲೆ, ಕುಟ್ಟಂದಿ | 1963 | 66 | 58 | 64 | 60 | 62 | 48 |
| 22. | ಗೋಣಿಕೊಪ್ಪಲು ಪ್ರೌಢಶಾಲೆ, ಗೋಣಿಕೊಪ್ಪಲು. | 1963 | 176 | 142 | 148 | 130 | 158 | 134 |
| 23. | ಭಾರತಿ ಪ್ರೌಢಶಾಲೆ, ಮರಗೋಡು. | 1963 | 138 | 141 | 146 | 157 | 154 | 149 |
| 24. | ಬಿರುನಾಣಿ ಪ್ರೌಢಶಾಲೆ, ಬಿರುನಾಣಿ. | 1963 | 67 | 65 | 75 | 63 | 68 | 51 |
| 25. | ಕೊಡ್ಲಿಪೇಟೆ ಪ್ರೌಢಶಾಲೆ, ಕೊಡ್ಲಿಪೇಟೆ. | 1963 | 157 | 140 | 170 | 149 | 193 | 128 |

| 7 | | 8 | | 9 | | 10 | | 11 | | 12 | | 13 | |
|---|---|---|---|---|---|---|---|---|---|---|---|---|---|
| 2 | 3 | 1 | 3 | 4 | 5 | ಇಲ್ಲ | | ಇಲ್ಲ | | 2 | 0 | 7 | 1 |
| ಇಲ್ಲ | | 1 | 4 | 4 | 6 | 2 | 6 | 3 | 6 | 1 | 2 | 7 | 4 |
| 6 | 5 | 11 | 9 | 6 | 4 | 2 | 0 | 3 | 1 | 6 | 2 | 7 | 01 |
| 8 | 19 | 12 | 22 | 19 | 17 | 1 | 1 | ಇಲ್ಲ | | 2 | 2 | 9 | 01 |
| 11 | 10 | 10 | 13 | 10 | 12 | 7 | 2 | 3 | 2 | 3 | 3 | 7 | 0 |
| 14 | 14 | 12 | 17 | 15 | 13 | 1 | 0 | ಇಲ್ಲ | | 2 | 1 | 9 | 3 |
| 2 | 5 | 6 | 7 | 7 | 8 | 1 | 1 | 1 | 0 | ಇಲ್ಲ | | 5 | 3 |
| — | | ಇಲ್ಲ | — | | ಇಲ್ಲ | — | | 1 | 0 | 1 | 0 | 6 | 01 |
| 10 | 8 | 15 | 5 | 20 | 8 | 2 | 1 | 2 | 1 | 3 | 3 | 7 | 0 |
| | | — | ಇಲ್ಲ | | — | 2 | 1 | 1 | 1 | 1 | 1 | 6 | 1 |
| 13 | 13 | 9 | 12 | 17 | 14 | ಇಲ್ಲ | | 0 | 4 | 1 | 7 | 7 | 4 |
| 5 | 7 | 4 | 8 | 5 | 12 | 1 | 6 | 2 | 3 | 3 | 3 | 7 | 3 |
| — | | ಇಲ್ಲ | — | | ಇಲ್ಲ | — | | 1 | 0 | 1 | 0 | 6 | 1 |
| 20 | 8 | 23 | 13 | 24 | 09 | 1 | 0 | ಇಲ್ಲ | | 0 | 1 | 8 | 01 |

| 1 | 2 | 3 | 4 | | 5 | | 6 | |
|---|---|---|---|---|---|---|---|---|
| 26. | ಹೆಬ್ಬಾಲೆ ಪ್ರೌಢಶಾಲೆ, ಹೆಬ್ಬಾಲೆ. | 1964 | 244 | 138 | 252 | 136 | 238 | 110 |
| 27. | ಸುಂಟಿಕೊಪ್ಪನಾಡ್ ಪ್ರೌಢ ಶಾಲೆ, ಕೊಡಗರಹಳ್ಳಿ. | 1964 | 155 | 107 | 141 | 112 | 143 | 102 |
| 28. | ಕಕ್ಕಬ್ಬೆ ಪ್ರೌಢಶಾಲೆ, ಕಕ್ಕಬ್ಬೆ. | 1964 | 78 | 60 | 47 | 57 | 100 | 46 |
| 29. | ನೆಲಜಿ ಪ್ರೌಢಶಾಲೆ, ನೆಲಜಿ. | 1965 | 56 | 62 | 58 | 51 | 57 | 47 |
| 30. | ಕಾಕೋಟುಪರಂಬು ಪ್ರೌಢ ಶಾಲೆ, ಕಾಕೋಟುಪರಂಬು. | 1965 | 46 | 34 | 36 | 32 | 23 | 38 |
| 31. | ಉದಯ ಪ್ರೌಢಶಾಲೆ, ಚೆಟಗೇರಿ. | 1966 | 140 | 133 | 147 | 153 | 152 | 136 |
| 32. | ಕುಮಾರಲಿಂಗೇಶ್ವರ ಪ್ರೌಢ ಶಾಲೆ, ಶಾಂತಳ್ಳಿ. | 1966 | 205 | 183 | 214 | 189 | 185 | 169 |
| 33. | ಬಿ.ಸಿ. ಪ್ರೌಢಶಾಲೆ, ದೇವಣಗೇರಿ. | 1966 | 74 | 48 | 69 | 47 | 68 | 61 |
| 34. | ಸಂಪಾಜೆ ಪ್ರೌಢಶಾಲೆ, ಸಂಪಾಜೆ. | 1966 | 147 | 108 | 138 | 104 | 143 | 102 |
| 35. | ಗೌಡಳ್ಳಿ ಪ್ರೌಢಶಾಲೆ, ಗೌಡಳ್ಳಿ. | 1966 | 95 | 78 | 93 | 84 | 101 | 101 |
| 36. | ಸರ್ಕಾರಿ ಪ್ರೌಢಶಾಲೆ, ತಿತಿಮತಿ. | 1967 | 84 | 88 | 92 | 82 | 100 | 100 |
| 37. | ಪ್ರಸಾದ ಪ್ರೌಢಶಾಲೆ, ಟಿ. ಶೆಟ್ಟಿಹಳ್ಳಿ. | 1967 | 60 | 44 | 65 | 49 | 65 | 49 |
| 38. | ಸರ್ಕಾರಿ ಪ್ರೌಢಶಾಲೆ, ಗಾಳಿಬೀಡು. | 1970 | 36 | 33 | 35 | 31 | 34 | 35 |
| 39. | ನಂಜರಾಜಪಟ್ಟಣ ಪ್ರೌಢಶಾಲೆ, ನಂಜರಾಜಪಟ್ಟಣ. | 1971 | 94 | 87 | 85 | 75 | 91 | 87 |
| 40. | ಎಸ್.ಜೆ.ಎಂ. ಬಾಲಕಿಯರ ಪ್ರೌಢಶಾಲೆ, ಸೋಮವಾರಪೇಟೆ. | 1971 | 179 | | 171 | | 159 | |

| 7 | | 8 | | 9 | | 10 | | 11 | | 12 | | 13 | |
|---|---|---|---|---|---|---|---|---|---|---|---|---|---|
| 31 | 14 | 32 | 13 | 33 | 11 | 8 | 3 | 7 | 3 | 4 | 0 | 8 | 01 |
| 16 | 6 | 21 | 11 | 15 | 11 | 5 | 3 | 11 | 7 | 11 | 6 | 2 | 5 |
| 2 | 2 | 3 | 1 | 6 | 1 | 2 | 1 | 3 | 1 | 4 | 1 | 9 | 3 |
| — | | ಇಲ್ಲ | — | 1 | 0 | ಇಲ್ಲ | | 1 | 0 | 1 | 0 | 6 | 1 |
| 6 | 2 | 9 | 3 | 5 | 6 | 0 | 1 | 0 | 5 | 0 | 1 | 4 | 1 |
| 5 | 4 | 4 | 2 | 3 | 7 | 2 | 2 | 3 | 2 | 3 | 2 | 7 | 2 |
| 29 | 06 | 21 | 08 | 13 | 08 | 1 | 0 | 1 | 1 | 2 | 1 | 10 | 1 |
| 4 | 3 | 6 | 1 | 3 | 1 | — | | ಇಲ್ಲ | | — | | 5 | 2 |
| 4 | 3 | 7 | 1 | 10 | 2 | 10 | 2 | 9 | 6 | 11 | 5 | 9 | 0 |
| 2 | 1 | 1 | 4 | 1 | 6 | — | — | ಇಲ್ಲ | — | | — | 11 | 0 |
| 12 | 8 | 13 | 12 | 18 | 6 | 20 | 16 | 15 | 14 | 28 | 45 | 4 | 3 |
| 4 | 2 | 4 | 3 | 6 | 9 | — | — | ಇಲ್ಲ | — | | — | 6 | 0 |
| 3 | 1 | 1 | 3 | 1 | 2 | 4 | 2 | 0 | 6 | 3 | 3 | 5 | 2 |
| 6 | 3 | 5 | 1 | 3 | 8 | 3 | 6 | 4 | 5 | 8 | 6 | 6 | 3 |
| 13 | | 16 | | 10 | | ಇಲ್ಲ | | 01 | | 01 | | 24 | |

| 1 | 2 | 3 | 4 | | 5 | | 6 | |
|---|---|---|---|---|---|---|---|---|
| 41. | ನಮ್ಮ ಪ್ರೌಢಶಾಲೆ, ಪೊಲ್ಲಿಬೆಟ್ಟ. | 1971 | 82 | 54 | 78 | 71 | 101 | 75 |
| 42. | ವಿಜಯ ಪ್ರೌಢಶಾಲೆ, ಕಡಂಗ ಅರಪಟ್ಟು. | 1972 | 88 | 88 | 105 | 91 | 100 | 96 |
| 43. | ಪಿ.ಎಸ್.ಎನ್ ಪ್ರೌಢಶಾಲೆ, ಗರವಾಲೆ. | 1974 | 58 | 39 | 58 | 124 | 56 | 134 |
| 44. | ಸೇಂಟ್ ಜೋಸೆಫ್ ಪ್ರೌಢ ಶಾಲೆ, ಸೋಮವಾರಪೇಟೆ. | 1980 | 191 | 144 | 194 | 155 | 203 | 135 |
| 45. | ಸರ್ಕಾರಿ ಪ್ರೌಢಶಾಲೆ, ಕುಶಾಲನಗರ. | 1980 | 132 | 94 | 147 | 93 | 135 | 84 |
| 46. | ವಿನಾಯಕ ಪ್ರೌಢಶಾಲೆ, ವೀರರಾಜಪೇಟೆ. | 1981 | 172 | 114 | 182 | 113 | 187 | 124 |
| 47. | ದೊರೆ ವೀರರಾಜೇಂದ್ರ ಪ್ರೌಢ ಶಾಲೆ, ಬೇಳೂರು. | 1981 | 56 | 39 | 88 | 28 | 71 | 26 |
| 48. | ಕೊಡಗು ವಿದ್ಯಾಲಯ, ಮಡಿಕೇರಿ. | 1981 | 280 | 162 | 305 | 153 | 306 | 151 |
| 49. | ಸರ್ಕಾರಿ ಪ್ರೌಢಶಾಲೆ, ಹಾಕತ್ತೂರು. | 1981 | 52 | 51 | 36 | 35 | 43 | 41 |
| 50. | ಸರ್ಕಾರಿ ಪ್ರೌಢಶಾಲೆ. ಕುಟ್ಟ. | 1981 | 44 | 46 | 42 | 43 | 36 | 36 |
| 51. | ಸರ್ಕಾರಿ ಪ್ರೌಢಶಾಲೆ, ಸುಂಟಿಕೊಪ್ಪ. | 1981 | 170 | 118 | 198 | 113 | 221 | 113 |
| 52. | ಸರ್ಕಾರಿ ಪ್ರೌಢಶಾಲೆ, ತೊರೆನೂರು. | 1982 | 59 | 28 | 61 | 34 | 60 | 39 |
| 53. | ಸರ್ಕಾರಿ ಪ್ರೌಢಶಾಲೆ, ಶಿರಂಗಾಲ. | 1982 | 99 | 56 | 100 | 49 | 100 | 53 |
| 54. | ಮದೆ ಮಹೇಶ್ವರ ಪ್ರೌಢಶಾಲೆ, ಮದೆ. | 1982 | 109 | 86 | 120 | 100 | 135 | 126 |

| 7 | | 8 | | 9 | | 10 | | 11 | | 12 | | 13 | |
|---|---|---|---|---|---|---|---|---|---|---|---|---|---|
| 21 | 15 | 18 | 14 | 26 | 17 | 1 | 1 | 1 | 1 | 2 | 1 | 3 | 4 |
| 1 | 3 | 6 | 3 | 6 | 6 | 2 | 1 | 2 | 1 | 1 | 1 | 3 | 5 |
| ಇಲ್ಲ | | 1 | 1 | 1 | 2 | — | | ಇಲ್ಲ | | — | | 3 | 2 |
| 0 | 1 | 1 | 0 | 1 | 3 | — | | ಇಲ್ಲ | | — | | 6 | 4 |
| 29 | 12 | 32 | 11 | 36 | 14 | 0 | 3 | 6 | 4 | 0 | 3 | 8 | 1 |
| ಇಲ್ಲ | | 1 | 0 | 2 | 2 | — | | ಇಲ್ಲ | | — | | 4 | 11 |
| 1 | 0 | 1 | 0 | 1 | 0 | ಇಲ್ಲ | | 0 | 1 | 0 | 1 | 4 | 2 |
| 3 | 0 | 4 | 0 | 2 | 0 | 0 | 1 | 1 | 2 | 3 | 3 | 6 | 18 |
| 4 | 6 | 3 | 3 | 7 | 4 | ಇಲ್ಲ | | 0 | 1 | 1 | 1 | 8 | 0 |
| 1 | 3 | 2 | 3 | 5 | 6 | 7 | 13 | 5 | 14 | 4 | 8 | 4 | 3 |
| 21 | 19 | 27 | 22 | 34 | 20 | 2 | 1 | 1 | 1 | 2 | 3 | 6 | 3 |
| 9 | 4 | 10 | 5 | 7 | 3 | 3 | 1 | 1 | 0 | 3 | 0 | 6 | 2 |
| 9 | 6 | 11 | 7 | 12 | 5 | 0 | 1 | 6 | 1 | 4 | 0 | 6 | 2 |
| 2 | 1 | 3 | 4 | 7 | 3 | 12 | 7 | 10 | 6 | 9 | 9 | 4 | 2 |

| 1 | 2 | 3 | 4 | | 5 | | 6 | |
|---|---|---|---|---|---|---|---|---|
| 55. | ಸರ್ಕಾರಿ ಪ್ರೌಢಶಾಲೆ, ಕಾನ್‌ಬೈಯಲ್ಸ್. | 1983 | 31 | 34 | 30 | 23 | 28 | 29 |
| 56. | ಸರ್ಕಾರಿ ಪ್ರೌಢಶಾಲೆ, ಐಗೂರು. | 1983 | 59 | 54 | 65 | 66 | 61 | 63 |
| 57. | ಲೂರ್ದು ವಸತಿ ಪ್ರೌಢಶಾಲೆ, ಪೊಲ್ಲಿಬೆಟ್ಟ. | 1984 | 47 | 84 | 46 | 88 | 84 | 81 |
| 58. | ಸದ್ಗುರು ಅಯ್ಯಪ್ಪಸ್ವಾಮಿ ಪ್ರೌಢಶಾಲೆ, ಕಡಂಗ. | 1984 | 111 | 43 | 107 | 37 | 119 | 41 |
| 59. | ಸರ್ಕಾರಿ ಪ್ರೌಢಶಾಲೆ, ಬೇಸೂರು. | 1984 | 54 | 46 | 52 | 48 | 65 | 52 |
| 60. | ಸರ್ಕಾರಿ ಪ್ರೌಢಶಾಲೆ, ಮಾಯಮುಡಿ. | 1985 | 51 | 58 | 56 | 40 | 60 | 45 |
| 61. | ಸೇಂಟ್ ಆ್ಯಂತೊನಿ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಪೊನ್ನಂಪೇಟೆ. | 1986 | 42 | 38 | 79 | 47 | 97 | 67 |
| 62. | ಸರ್ಕಾರಿ ಪ್ರೌಢಶಾಲೆ, ಅಂಕನಹಳ್ಳಿ, | 1988 | 23 | 10 | 54 | 29 | 83 | 55 |
| 63. | ಸರ್ಕಾರಿ ಪ್ರೌಢಶಾಲೆ, ಬಸವನಹಳ್ಳಿ | 1989 | ಇಲ್ಲ | | 29 | 21 | 59 | 29 |
| 64. | ಸರ್ಕಾರಿ ಪ್ರೌಢಶಾಲೆ, ಮಾಲ್ದಾರೆ. | 1989 | ಇಲ್ಲ | | 20 | 7 | 23 | 19 |
| 65. | ಸರ್ಕಾರಿ ಪ್ರೌಢಶಾಲೆ, ಕರಿಕೆ. | 1991 | ಇಲ್ಲ | | ಇಲ್ಲ | | 11 | 96 |
| 66. | ಕುಶಾಲನಗರ ಪ್ರೌಢಶಾಲೆ, ಕುಶಾಲನಗರ. | | — | | ಮಾಹಿತಿ ಬಂದಿಲ್ಲ | | — | |

| 7 | | 8 | | 9 | | 10 | | 11 | | 12 | | 13 | |
|---|---|---|---|---|---|---|---|---|---|---|---|---|---|
| 3 | 1 | 5 | 1 | 5 | 3 | 0 | 1 | 0 | 1 | 0 | 1 | 6 | 0 |
| 4 | 3 | 5 | 4 | 8 | 3 | 1 | 1 | 2 | 1 | 2 | 2 | 3 | 2 |
| 0 | 1 | ಇಲ್ಲ | | 0 | 1 | 1 | 0 | ಇಲ್ಲ | | 1 | 0 | 1 | 6 |
| 5 | 2 | 5 | 7 | 12 | 4 | 1 | 1 | 6 | 2 | 15 | 3 | 5 | 4 |
| 14 | 11 | 14 | 11 | 16 | 12 | 0 | 1 | 0 | 1 | 3 | 1 | 8 | 1 |
| 2 | 1 | 3 | 1 | 3 | 1 | 2 | 6 | 3 | 2 | 3 | 2 | 4 | 3 |
| ಇಲ್ಲ | | ಇಲ್ಲ | | 0 | 1 | — | | ಇಲ್ಲ | | — | | 4 | 3 |
| 2 | 0 | 5 | 0 | 9 | 3 | — | | ಇಲ್ಲ | | — | | 8 | 2 |
| ಇಲ್ಲ | | 8 | 2 | 3 | 2 | ಇಲ್ಲ | | 1 | 4 | 3 | 1 | 2 | 1 |
| ಇಲ್ಲ | | 4 | 1 | 1 | 0 | ಇಲ್ಲ | | 1 | 1 | ಇಲ್ಲ | | 3 | 2 |
| — | | ಇಲ್ಲ | | — | | ಇಲ್ಲ | | ಇಲ್ಲ | | 0 | 1 | 1 | 2 |

ಪಿಯುಸಿ ಮಂಡಳಿ ಪ್ರಾರಂಭವಾದಾಗ, ಎರಡು ವರ್ಷದ ಪಿಯುಸಿ ಶಿಕ್ಷಣವಾಗಿ ಮಾರ್ಪಟ್ಟಿತು. 1991ರ ಮಾರ್ಚ್ ವೇಳೆಗೆ ಜಿಲ್ಲೆಯಲ್ಲಿ ಒಟ್ಟು 16 ಪದವಿಪೂರ್ವ ಕಾಲೇಜುಗಳಿದ್ದು (11 ಸರಕಾರಿ, ಐದು ಅನುದಾನಿತ), ಅವುಗಳ ಕಾಲಾನುಕ್ರಮ ಪಟ್ಟಿ ಹಾಗೂ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ವಿವರವಾದ ಪಟ್ಟಿಯನ್ನು ಪುಟ 682-683 ನೋಡಿ.

**ಪದವಿ ಪೂರ್ವ ಶಿಕ್ಷಣ ಮಂಡಳಿ :** 1972ರಲ್ಲಿ ಪ್ರಾರಂಭವಾದ ಈ ಸಂಸ್ಥೆ ಖಾಸಗಿ ಪದವಿ ಪೂರ್ವ ಕಾಲೇಜುಗಳ ಆಡಳಿತ ಮತ್ತು ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪರೀಕ್ಷೆಗಳನ್ನು ನಡೆಸುತ್ತದೆ. ಸರಕಾರಿ ಪದವಿ ಪೂರ್ವ ಕಾಲೇಜುಗಳ ಆಡಳಿತ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಿಂದ ನಡೆಸಲ್ಪಡುತ್ತದೆ. 1990 ಮತ್ತು 1991 ರಲ್ಲಿ ಜಿಲ್ಲೆಯಲ್ಲಿ ನಡೆದ ಪದವಿ ಪೂರ್ವ ಪರೀಕ್ಷೆಗಳ ವಿವರಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.

ಮಾರ್ಚ್ 1990

| | ಒಟ್ಟು | ಮೊದಲ ಬಾರಿಗೆ ಹಾಜರಾದವರು | ಅನುತ್ತೀರ್ಣರಾಗಿ ಪುನಃ ಹಾಜರಾದವರು | ಗಂಡು | ಹೆಣ್ಣು | ಪ.ಜಾತಿ | ಪ.ವರ್ಗ |
|---|---|---|---|---|---|---|---|
| ಹಾಜರಾದವರು | 2,772 | 2,046 | 726 | 1,385 | 1,387 | 160 | 44 |
| ಉತ್ತೀರ್ಣರಾದವರು | 1,180 | 964 | 216 | 498 | 682 | 50 | 15 |
| ಶೇಕಡಾವಾರು ಫಲಿತಾಂಶ | 42.56 | 47.11 | 29.75 | 35.95 | 49.17 | 31.25 | 34.09 |
| **ಮಾರ್ಚ್ 1991** | | | | | | | |
| ಹಾಜರಾದವರು | 2,279 | 1,440 | 836 | 1,229 | 1,058 | 132 | 26 |
| ಉತ್ತೀರ್ಣರಾದವರು | 961 | 776 | 185 | 443 | 518 | 35 | 06 |
| ಶೇಕಡಾವಾರು ಫಲಿತಾಂಶ | 42.16 | 53.88 | 22.05 | 36.04 | 49.33 | 26.51 | 23.07 |

ಅಕ್ಟೋಬರ್ 1991

| ಹಾಜರಾದವರು | | | | | ಉತ್ತೀರ್ಣರಾದವರು | | | | | ಶೇಕಡಾ |
|---|---|---|---|---|---|---|---|---|---|---|
| ಗಂ. | ಹೆಂ. | ಪ.ಜಾತಿ | ಪ.ವರ್ಗ | ಒಟ್ಟು | ಗಂ. | ಹೆಂ. | ಪ.ಜಾತಿ | ಪ.ವರ್ಗ | ಒಟ್ಟು | ಫಲಿತಾಂಶ |
| 633 | 427 | 72 | 11 | 1,060 | 153 | 134 | 15 | 05 | 287 | 27.07 |
| **ಮಾರ್ಚ್ 1992** | | | | | | | | | | |
| 1,446 | 1,385 | 181 | 32 | 2,831 | 506 | 656 | 66 | 09 | 1,162 | 41.04 |

ಪ್ಲಾಂಟೇಷನ್ ಡಿಪ್ಲೊಮಾ : ಜಿಲ್ಲೆಯ ಉಲ್ಲೇಖನೀಯ ಶೈಕ್ಷಣಿಕ ವಿಷಯವೆಂದರೆ, ಗೋಣಿಕೊಪ್ಪಲಿನ ಕಾವೇರಿ ಕಾಲೇಜಿನಲ್ಲಿ ನಡೆಸಲ್ಪಡುವ ಡಿಪ್ಲೊಮಾ ಇನ್ ಪ್ಲಾಂಟೇಷನ್ ತರಗತಿಗಳು. 1979 ರಿಂದ ಪ್ರಾರಂಭವಾದ ಈ ವಿಷಯ ವೃತ್ತಿಪರ ಶಿಕ್ಷಣದಡಿ ನಡೆಯುತ್ತದೆ. ಇದು ಎರಡು ವರ್ಷಗಳ ಶಿಕ್ಷಣವಾಗಿದ್ದು, ಮೊದಲನೇಯ ವರ್ಷ ರೂಪರಚನ ಶಾಸ್ತ್ರ (ಮಾರ್ಫಾಲಜಿ), ಪ್ರಕೃತಿ ಚರಿತ್ರೆ (ಟ್ಯಾಕ್ಸಾನಮಿ), ಮಣ್ಣು ರಸಾಯನಶಾಸ್ತ್ರ, ಸಸ್ಯ ಸಂತಾನವೃದ್ಧಿಶಾಸ್ತ್ರ, ಕೃಷಿ ಅರ್ಥಶಾಸ್ತ್ರ, ಮುಂತಾದ ವಿಷಯಗಳನ್ನೂ, ಎರಡನೇಯ ವರ್ಷ ಜೀವಿ ಪರಿಸರ ಶಾಸ್ತ್ರ (ಇಕಾಲಜಿ), ಸಸ್ಯರೋಗಶಾಸ್ತ್ರ (ಪ್ಲಾಂಟ್ ಪ್ಯಾಥೋಲಜಿ), ಫಲಕೃಷಿ ಶಾಸ್ತ್ರ (ಪಾಮಾಲಜಿ) ಮುಂತಾದ ವಿಷಯಗಳು ಬೋಧಿಸಲ್ಪಡುತ್ತವೆ. ಒಟ್ಟು 21 ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಶಿಕ್ಷಣದಲ್ಲಿ 1990–91ರಲ್ಲಿ ಎರಡೂ ವರ್ಷಗಳ ತರಗತಿಗಳಿಂದ 47 ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರೂ, ನಾಲ್ಕು ಮಂದಿ ಅಧ್ಯಾಪಕ ವರ್ಗದವರೂ ಇದ್ದರು. ಅವರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟುಗಳಿಗೆ ಸೇರಿದ ವಿದ್ಯಾರ್ಥಿಗಳು ಇರಲಿಲ್ಲ.

## ತಾಂತ್ರಿಕ ಶಿಕ್ಷಣ

ಜಿಲ್ಲೆಯಲ್ಲಿ 1921ರ ವರೆಗೆ ತಾಂತ್ರಿಕ ವಿಷಯಗಳ ವ್ಯಾಸಂಗಕ್ಕಾಗಿ ವಿದ್ಯಾರ್ಥಿ ವೇತನಗಳನ್ನು ನೀಡಲಾಗುತ್ತಿತ್ತೇ ವಿನಾ ಯಾವುದೇ ತಾಂತ್ರಿಕ ಶಾಲೆ ಅಸ್ತಿತ್ವದಲ್ಲಿ ಇರಲಿಲ್ಲ. ಪೊನ್ನಂಪೇಟೆಯ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕೃಷಿ ಒಂದು ಪಠ್ಯ ವಿಷಯವಾಗಿತ್ತು. 1921 ಮತ್ತು 1927ರಲ್ಲಿ ಕ್ರಮವಾಗಿ ವೀರರಾಜಪೇಟೆ ಮತ್ತು ಮಡಿಕೇರಿಯ ಮುನಿಸಿಪಲ್ ಶಾಲೆಗಳಲ್ಲಿ ದರ್ಜಿ ಕೆಲಸ ಮತ್ತು ಬಡಗಿ ಕೆಲಸಗಳನ್ನು ಪಠ್ಯ ವಿಷಯಗಳಾಗಿ ಸೇರಿಸಲಾಯಿತು. ವೀರರಾಜಪೇಟೆಯಲ್ಲಿ 1927ರಲ್ಲಿ ಸರಕಾರ ಒಂದು ತಾಂತ್ರಿಕ ಶಾಲೆಯನ್ನು ಪ್ರಾರಂಭಿಸಿತು. ಇದು 1938ರ ವರೆಗೆ ನಡೆದು ನಂತರ ಮುಚ್ಚಲ್ಪಟ್ಟಿತು. ಶನಿವಾರಸಂತೆಯ ಉನ್ನತ ಪ್ರಾಥಮಿಕ ಶಾಲೆಯಲ್ಲಿ 1936ರಲ್ಲಿ ನೇಯ್ಗೆಯನ್ನು ಒಂದು ಐಚ್ಛಿಕ ವಿಷಯವಾಗಿ ಪಠ್ಯಕ್ರಮದಲ್ಲಿ ಸೇರಿಸಲಾಯಿತು. ಕೇಂದ್ರ ಸರಕಾರದ ಕಾರ್ಮಿಕ ಸಚಿವಾಲಯ 1950ರಲ್ಲಿ ವೀರರಾಜಪೇಟೆಯಲ್ಲಿ ಒಂದು ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸಿ, ಹೊಲಿಗೆ, ಬಡಗಿ ಕೆಲಸ, ಸಾಮಾನ್ಯ ಗಾಡಿಗಳ ರಿಪೇರಿ ಕೆಲಸ, ಫಿಟ್ಟರ್ ಹಾಗೂ ಡ್ರಾಫ್ಟ್ಸ್‌ಮೆನ್ ಕೆಲಸ, ಮುಂತಾದವುಗಳನ್ನು ಬೋಧನಾ ವಿಷಯಗಳಾಗಿ ಸೇರಿಸಿತು. ಇದನ್ನು 1954ರಲ್ಲಿ ಮಡಿಕೇರಿಗೆ ವರ್ಗಾಯಿಸಲಾಯಿತು. 1955–56ರ ವೇಳೆಗೆ ಮಡಿಕೇರಿಯ ಸೆಂಟ್ರಲ್ ಹೈಸ್ಕೂಲ್‌ನಲ್ಲಿ ತಾಂತ್ರಿಕ ವಿಷಯಗಳು ಪಠ್ಯಕ್ರಮದಲ್ಲಿ ಐಚ್ಛಿಕ ವಿಷಯಗಳಾದವು. ಹಿಂದೆ, ತಾಂತ್ರಿಕ ವಿಷಯಗಳಲ್ಲಿ ಆಸಕ್ತಿಯುಳ್ಳ ಜಿಲ್ಲೆಯ ವಿದ್ಯಾರ್ಥಿಗಳು ತಮ್ಮ ಉನ್ನತ ವ್ಯಾಸಂಗಕ್ಕಾಗಿ ಮದರಾಸು ವಿಶ್ವವಿದ್ಯಾಲಯಕ್ಕೆ ಹೋಗುತ್ತಿದ್ದರು. ದೆಹಲಿ, ಮದರಾಸು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಕೊಡಗಿನ ವಿದ್ಯಾರ್ಥಿಗಳಿಗೆ ಶೇಕಡಾವಾರು ಸೀಟುಗಳನ್ನು ಮೀಸಲಾಗಿಡಲಾಗುತ್ತಿತ್ತು.

1956ರ ನಂತರ : ರಾಜ್ಯ ಪುನರ್ವಿಂಗಡನೆಯ ತರುವಾಯ ಇಂಜನೀಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್‌ಗಳು, ತಾಂತ್ರಿಕ ತರಬೇತಿ ಸಂಸ್ಥೆಗಳು, ಎಲ್ಲವೂ ತಾಂತ್ರಿಕ ಶಿಕ್ಷಣದ ವ್ಯಾಪ್ತಿಗೆ ಒಳಪಟ್ಟು, 1959ರಲ್ಲಿ ಇವೆಲ್ಲದರ ಆಡಳಿತಕ್ಕಾಗಿ ಸರಕಾರ ಒಂದು ತಾಂತ್ರಿಕ ಶಿಕ್ಷಣ ಮಂಡಳಿಯನ್ನು ಸ್ಥಾಪಿಸಿತು.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪಾಲಿಟೆಕ್ನಿಕ್‌ಗಳನ್ನು ತೆರೆಯಬೇಕೆಂಬ ಸರಕಾರದ ನಿಯಮದಂತೆ, 1961ನೇ ಆಗಸ್ಟ್ ತಿಂಗಳಲ್ಲಿ ಕುಶಾಲನಗರದಲ್ಲಿ ಒಂದು ಸರಕಾರಿ ಪಾಲಿಟೆಕ್ನಿಕ್‌ಅನ್ನು ಖಾಸಗಿ ಕಟ್ಟಡವೊಂದರಲ್ಲಿ, ಸಿವಿಲ್ ಇಂಜಿನೀಯರಿಂಗ್ ಡಿಪ್ಲೊಮಾ ತರಗತಿಯೊಂದಿಗೆ ಪ್ರಾರಂಭಿಸಲಾಯಿತು. ಮೊದಲನೇಯ ವರ್ಷ 50 ವಿದ್ಯಾರ್ಥಿಗಳಿದ್ದ ಈ ವಿಭಾಗದಲ್ಲಿ 1990-91ನೇ ಸಾಲಿನಲ್ಲಿ 114 ವಿದ್ಯಾರ್ಥಿಗಳಿದ್ದರು. ಮೆಕ್ಯಾನಿಕಲ್ ಇಂಜನೀಯರಿಂಗ್ ವಿಭಾಗ 1963–64ನೇ ವರ್ಷ 40 ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾಗಿ, 1990-91ನೇ ಸಾಲಿಗೆ 148 ವಿದ್ಯಾರ್ಥಿಗಳನ್ನೂ, 1965-66ನೇ ವರ್ಷ 31 ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾದ ಎಲೆಕ್ಟ್ರಿಕಲ್ ಇಂಜಿನೀಯರಿಂಗ್ ವಿಭಾಗ 1990-91ನೇ ಸಾಲಿಗೆ 133 ವಿದ್ಯಾರ್ಥಿಗಳನ್ನೂ, 1981-82ನೇ ವರ್ಷ 40 ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾದ ಎಲೆಕ್ಟ್ರಿಕಲ್ ಇಂಜಿನೀಯರಿಂಗ್ (ಆಟೋ) ವಿಭಾಗ, 1990-91ನೇ ಸಾಲಿಗೆ 104 ವಿದ್ಯಾರ್ಥಿಗಳನ್ನೂ ಹೊಂದಿದ್ದವು.

ತಾಂತ್ರಿಕ ಕಲೆಗಳಲ್ಲಿ 18 ತಿಂಗಳ ಅಲ್ಪಾವಧಿ ತರಬೇತಿ ನೀಡಲು ಕೇಂದ್ರ ಸರಕಾರದ ಕಾರ್ಮಿಕ ಇಲಾಖೆ, ಬೆಂಗಳೂರು, ರಾಯಚೂರು ಮತ್ತು ಮಡಿಕೇರಿಗಳಲ್ಲಿ 1963ರಲ್ಲಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿತು. ಮಡಿಕೇರಿಯ ಸಂಸ್ಥೆಯಲ್ಲಿ 1989-90, 90-91 ಮತ್ತು

ಕೊಡಗು ಜಿಲ್ಲೆಯ ಪದವಿಪೂರ್ವ ಕಾಲೇಜುಗಳ

| ಕ್ರ. ಸಂ. | ಹೆಸರು ಮತ್ತು ವಿಳಾಸ | ಪ್ರಾರಂಭಿಕ ವರ್ಷ | ವಿದ್ಯಾರ್ಥಿಗಳ ಸಂಖ್ಯೆ 1988—89 ಗಂ. | 1988—89 ಹೆಂ. | 89—90 ಗಂ. | 89—90 ಹೆಂ. | 90—91 ಗಂ. | 90—91 ಹೆಂ. |
|---|---|---|---|---|---|---|---|---|
| 1. | ಸರ್ಕಾರಿ ಪದವಿಪೂರ್ವ ಕಾಲೇಜು ಮಡಿಕೇರಿ. | | 113 | 170 | 113 | 184 | 123 | 112 |
| 2. | ” ನಾಪೋಕ್ಲು. | | | | | | | |
| 3. | ” ಸೋಮವಾರಪೇಟೆ. | 1972 | 183 | 137 | 186 | 170 | 165 | 216 |
| 4. | ” ಪೊನ್ನಂಪೇಟೆ | | 76 | 63 | 28 | 19 | 49 | 36 |
| 5. | ” ವೀರರಾಜಪೇಟೆ. | | 122 | 122 | 98 | 77 | 120 | 69 |
| **ಅನುದಾನಿತ ಕಾಲೇಜುಗಳು** | | | | | | | | |
| 1. | ಪದವಿಪೂರ್ವ ಕಾಲೇಜು, ಮಾದಾಪುರ | | 77 | 62 | 81 | 61 | 97 | 68 |
| 2. | ವಿಜಯಲಕ್ಷ್ಮಿ ಪದವಿಪೂರ್ವ ಕಾಲೇಜು, ಬಾಳೆಲೆ. | 1971 | 59 | 49 | 52 | 37 | 31 | 28 |
| 3. | ಕಾವೇರಿ ಪದವಿಪೂರ್ವ ಕಾಲೇಜು, ಭಾಗಮಂಡಲ. | 1972 | 31 | 52 | 31 | 31 | 46 | 35 |
| 4. | ಪದವಿಪೂರ್ವ ಕಾಲೇಜು, ಶನಿವಾರಸಂತೆ. | 1972 | 93 | 71 | 82 | 57 | 70 | 69 |
| 5. | ಪದವಿಪೂರ್ವ ಕಾಲೇಜು, ಶ್ರೀಮಂಗಲ. | 1972 | 73 | 93 | 88 | 111 | 78 | 107 |
| 6. | ಪದವಿಪೂರ್ವ ಕಾಲೇಜು, ಚೇರಂಬಾಣೆ. | 1972 | 58 | 66 | 40 | 37 | 47 | 56 |
| 7. | ” ಮೂರ್ನಾಡು. | 1975 | 102 | 122 | 132 | 108 | 131 | 105 |
| 8 | ” ಸಂಪಾಜೆ. | 1983 | 33 | 77 | 40 | 31 | 34 | 38 |
| 9. | ಭಾರತಿ ಸಂಯುಕ್ತ ಪದವಿಪೂರ್ವ ಕಾಲೇಜು, ಮರಗೋಡು. | 1984 | 73 | 82 | 110 | 89 | 134 | 124 |
| 10. | ಕನ್ನಡ ಭಾರತಿ ಪದವಿಪೂರ್ವ ಕಾಲೇಜು, ವೀರರಾಜಪೇಟೆ. | 1985 | 79 | 10 | 79 | 12 | 68 | 125 |
| 11. | ಪದವಿಪೂರ್ವ ಕಾಲೇಜು, ಕೊಡ್ಲಿಪೇಟೆ. | | — | ಮಾಹಿತಿ ಬಂದಿಲ್ಲ | — | | | |

ಕಾಲಾನುಕ್ರಮ ಪಟ್ಟಿ ಮತ್ತು ವಿವರ.

| ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು. | | | | | | ಪರಿಶಿಷ್ಟ ಬುಡಕಟ್ಟು ವಿದ್ಯಾರ್ಥಿಗಳು | | | | | | ಅಧ್ಯಾಪಕರು | |
|---|---|---|---|---|---|---|---|---|---|---|---|---|---|
| 88—89 | | 89—90 | | 90—91 | | 88—89 | | 89—90 | | 90—91 | | 90—91 | |
| ಹೆಂ. | ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. | ಗಂ. |
| 6 | 2 | 1 | 8 | 5 | 9 | 7 | 4 | 1 | 9 | 3 | 4 | 6 | 1 |
| | | | | — ಮಾಹಿತಿ ಬಂದಿಲ್ಲ — | | | | | | | | | |
| 6 | 5 | 4 | 5 | 8 | 5 | 2 | 1 | 4 | 1 | 2 | 2 | ನೀಡಿಲ್ಲ | |
| 7 | 2 | 1 | 0 | 0 | 1 | 4 | 0 | 1 | 1 | 1 | 0 | 6 | 0 |
| 5 | 7 | 4 | 3 | 6 | 5 | 0 | 0 | 0 | 1 | 2 | 2 | 9 | 1 |
| 8 | 6 | 5 | 4 | 3 | 4 | 1 | 0 | 0 | 0 | 1 | 0 | 6 | 2 |
| 8 | 2 | 8 | 1 | 4 | 4 | 3 | 0 | ಇಲ್ಲ | | — | | 3 | 3 |
| ಇಲ್ಲ | | ಇಲ್ಲ | | 1 | 1 | 0 | 1 | ಇಲ್ಲ | | 0 | 1 | 5 | 3 |
| 8 | 4 | 3 | 0 | 12 | 2 | — | | ಇಲ್ಲ | | — | | 7 | 0 |
| 0 | 4 | 0 | 3 | 0 | 1 | 4 | 0 | 1 | 0 | 1 | 0 | 5 | 1 |
| 0 | 0 | 1 | 0 | 0 | 3 | ಇಲ್ಲ | | — | | ಇಲ್ಲ | | 4 | 2 |
| 0 | 8 | 2 | 1 | 2 | 4 | ಇಲ್ಲ | | — | | ಇಲ್ಲ | | 6 | 5 |
| 1 | 0 | 0 | 1 | 1 | 3 | 0 | 5 | 0 | 5 | 1 | 5 | 5 | 1 |
| 5 | 0 | 3 | 0 | 2 | 5 | 2 | 2 | 0 | 3 | 0 | 3 | 7 | 4 |
| 1 | 8 | 0 | 20 | 02 | | 0 | 7 | 0 | 7 | 0 | 7 | 7 | 0 |

91-92ನೇ ಸಾಲುಗಳಿಗೆ ಕ್ರಮವಾಗಿ ಒಟ್ಟು 105 (87ಗಂ. 18 ಹೆ. ಇವರಲ್ಲಿ 13 ಪರಿಶಿಷ್ಟ ಜಾತಿ, 6 ಪರಿಶಿಷ್ಟ ವರ್ಗ) ಒಟ್ಟು 115 (97 ಗಂ., 18 ಹೆ., ಇವರಲ್ಲಿ 14 ಪರಿಶಿಷ್ಟ ಜಾತಿ, 2 ಪರಿಶಿಷ್ಟ ವರ್ಗ) ಮತ್ತು ಒಟ್ಟು 106 (89 ಗಂ. 17 ಹೆ., ಇವರಲ್ಲಿ 19 ಪರಿಶಿಷ್ಟ ಜಾತಿ, 7 ಪರಿಶಿಷ್ಟವರ್ಗ) ವಿದ್ಯಾರ್ಥಿ ವಿದ್ಯಾರ್ಥಿನಿಯರಿದ್ದರು.

ಎನ್. ಸಿ. ಸಿ.

ಮಡಿಕೇರಿಯ ಸರಕಾರಿ ಕಾಲೇಜಿನಲ್ಲಿ 1954ರಲ್ಲಿ ಮೂರು ಟ್ರೂಪ್‌ಗಳೊಂದಿಗೆ "ಕೂರ್ಗ್ ಇಂಡಿಪೆಂಡೆಂಟ್ ಕಂಪೆನಿ ಎನ್‌ಸಿಸಿ" ಎಂದು ಪ್ರಾರಂಭವಾದ ಈ ದಳ ಮೊದಲು ಕೇಂದ್ರಾಡಳಿತಕ್ಕೊಳಪಟ್ಟಿತ್ತು. ಇದೇ ಕಾಲೇಜಿನಲ್ಲಿ 1959 ರಲ್ಲಿ ಒಂದು ಹೆಣ್ಣು ಮಕ್ಕಳ ಸೀನಿಯರ್ ಡಿವಿಜನ್ ಸಹ ಪ್ರಾರಂಭವಾಯಿತು. ಆಗ ಜಿಲ್ಲೆಯಲ್ಲಿದ್ದ ಎಲ್ಲಾ ಐದು ಸರಕಾರಿ ಪ್ರೌಢಶಾಲೆಗಳಲ್ಲಿ 12 ಜ್ಯೂನಿಯರ್ ಡಿವಿಜನ್ ಹುಡುಗರ ಟ್ರೂಪ್‌ಗಳೂ, ನಾಲ್ಕು ಜ್ಯೂನಿಯರ್ ಡಿವಿಜನ್ ಹುಡುಗಿಯರ ಟ್ರೂಪ್‌ಗಳೂ ಇದ್ದವು. 1963ರಲ್ಲಿ ಕೊಡಗಿನ ಎನ್.ಸಿ.ಸಿ. ಒಂದು ಬೆಟ್ಯಾಲಿಯನ್ ಆಗಿ ಮಾರ್ಪಟ್ಟು, ಪುತ್ತೂರು ತಾಲೂಕನ್ನು ಇದರ ಆಡಳಿತಕ್ಕೊಳಪಡಿಸಲಾಯಿತು. ಈ ಬೆಟ್ಯಾಲಿಯನ್‌ನಲ್ಲಿ ಎಂಟು ಕಂಪೆನಿಗಳಿದ್ದು ಒಟ್ಟು 1,600 ಕ್ಯಾಡೆಟ್‌ಗಳಿದ್ದರು. 1969ರಲ್ಲಿ ಪುನರ್ರಚನೆಯಾದ ಈ ಬೆಟ್ಯಾಲಿಯನ್‌ನಲ್ಲಿ (ಕೊಡಗು ಮತ್ತು ಪುತ್ತೂರು ಸೇರಿ), ಒಟ್ಟು ಐದು ಸೀನಿಯರ್ ಡಿವಿಜನ್ ಕಂಪೆನಿಗಳು, 15 ಜ್ಯೂನಿಯರ್ ಡಿವಿಜನ್ ಹುಡುಗರ ಟ್ರೂಪ್‌ಗಳೂ ಮತ್ತು ಮೂರು ಜ್ಯೂನಿಯರ್‌ಡಿವಿಜನ್ ಹುಡುಗಿಯರ ಟ್ರೂಪ್‌ಗಳು ಇದ್ದವು. ಇತ್ತೀಚೆಗೆ ವೀರರಾಜಪೇಟೆಯ ಕಾವೇರಿ ಹೆಣ್ಣು ಮಕ್ಕಳ ಕಾಲೇಜಿಗೆ 100 ಕೆಡೆಟ್‌ಗಳ ಸೀನಿಯರ್ ಡಿವಿಜನ್ ಒಂದನ್ನು ಮಂಜೂರು ಮಾಡಲಾಗಿದೆ. ಜಿಲ್ಲೆಯ ಬೆಟ್ಯಾಲಿಯನ್ ಅನ್ನು 1973ರಲ್ಲಿ 7ನೇಯ ಕರ್ನಾಟಕ ಬೆಟ್ಯಾಲಿಯನ್ ಎಂದೂ, 1978 ರಲ್ಲಿ 19ನೇಯ ಕರ್ನಾಟಕ ಬೆಟ್ಯಾಲಿಯನ್ ಎಂದೂ ಹೆಸರಿಸಲಾಗಿದೆ.

ಆಡಳಿತ : ಕೊಡಗು ಹಾಗೂ ಪುತ್ತೂರುಗಳ ಎನ್‌ಸಿ.ಸಿ. ಆಡಳಿತವನ್ನು ಒಬ್ಬ ಕಮಾಂಡಿಂಗ್ ಆಫೀಸರ್, ಒಬ್ಬ ಆಡಳಿತಾಧಿಕಾರಿ (ಅಡ್ಮಿನಿಸ್ಟ್ರೇಟಿವ್ ಆಫೀಸರ್), 22 ಮಂದಿ ಅರೆಕಾಲಿಕ ಎನ್.ಸಿ.ಸಿ. ಅಧಿಕಾರಿಗಳು, ಆರು ಮಂದಿ ಜೆಸಿಓ (ಜ್ಯೂನಿಯರ್ ಕಮಿಷನ್ಡ್ ಆಫೀಸರ್)ಗಳು ಮತ್ತು 14 ಎನ್‌ಸಿಓ (ನಾನ್ ಕಮಿಷನ್ಡ್ ಆಫೀಸರ್)ಗಳು ನಡೆಸುತ್ತಾರೆ. ಈ ಅರೆಕಾಲಿಕ ಎನ್.ಸಿ.ಸಿ. ಅಧಿಕಾರಿಗಳು ಆಯಾಯ ವಿದ್ಯಾಸಂಸ್ಥೆಗಳ ಉಪಾಧ್ಯಾಯ ವರ್ಗದವರೇ ಆಗಿದ್ದು, ಎನ್.ಸಿ.ಸಿ. ತರಬೇತಿ ಹೊಂದಿರುತ್ತಾರೆ. ಉಳಿದೆಲ್ಲ ಅಧಿಕಾರಿಗಳು ಕೇಂದ್ರ ಸರಕಾರದ ನೌಕರರಾಗಿದ್ದು, ಸೈನ್ಯದಿಂದ ಎನ್.ಸಿ.ಸಿ. ದಳಕ್ಕೆ ನಿಯೋಜಿಸಲ್ಪಟ್ಟಿರುತ್ತಾರೆ.

1990ರ ಡಿಸೆಂಬರ್ ವೇಳೆಗೆ ಜಿಲ್ಲೆಯ ಹಲವಾರು ವಿದ್ಯಾಸಂಸ್ಥೆಗಳಲ್ಲಿದ್ದ ಎನ್.ಸಿ.ಸಿ. ಕೆಡೆಟ್‌ಗಳ ಮತ್ತು ಅಧಿಕಾರಿಗಳ ವಿವರಗಳು ಈ ರೀತಿ ಇವೆ :

| ಕ್ರ. ಸಂ. | ಸಂಸ್ಥೆಯ ಹೆಸರು | ಕೆಡೆಟ್‌ಗಳ ಸಂಖ್ಯೆ | | ಅಧಿಕಾರಿಗಳ ಸಂಖ್ಯೆ |
|---|---|---|---|---|
| 1 | 2 | 3 | | 4 |
| 1. | ಸರಕಾರಿ ಕಾಲೇಜು, ಮಡಿಕೇರಿ | 140 | ಎಸ್.ಡಿ. | 1 |
| 2. | ಕಾವೇರಿ ಕಾಲೇಜು, ಗೋಣಿಕೊಪ್ಪಲು | 130 | " | 1 |
| 3. | ಸರಕಾರಿ ಪಾಲಿಟೆಕ್ನಿಕ್, ಕುಶಾಲನಗರ | 95 | " | 1 |
| 4. | ಪದವಿಪೂರ್ವ ಕಾಲೇಜು, ಮೂರ್ನಾಡು | 50 | " | 1 |
| 5. | ಕಾವೇರಿ ಹೆಣ್ಣುಮಕ್ಕಳ ಕಾಲೇಜು, ವೀರರಾಜಪೇಟೆ | 100 | " | 1 |
| 6. | ಸರ್ಕಾರಿ ಪದವಿಪೂರ್ವ ಕಾಲೇಜು, ಮಡಿಕೇರಿ | 110 | ಜೆ.ಡಿ. | 1 |

| 1 | 2 | 3 | | 4 |
|---|---|---|---|---|
| 7. | ಸರಕಾರಿ ಪದವಿಪೂರ್ವ ಕಾಲೇಜು, ಪೊನ್ನಂಪೇಟೆ | 110 | ಜೆ.ಡಿ. | 1 |
| 8. | ಸರಕಾರಿ ಪದವಿಪೂರ್ವ ಕಾಲೇಜು, ಸೋಮವಾರಪೇಟೆ | 100 | " | 1 |
| 9. | ಸಿದ್ಧಾಪುರ ಪ್ರೌಢಶಾಲೆ, ಸಿದ್ದಾಪುರ | 110 | " | 1 |
| 10. | ಸರಕಾರಿ ಪದವಿಪೂರ್ವ ಕಾಲೇಜು, ವೀರರಾಜಪೇಟೆ | 60 | " | 1* |
| 11. | ಸರಕಾರಿ ಪದವಿಪೂರ್ವ ಕಾಲೇಜು, ನಾಪೋಕ್ಲು | 100 | " | 1 |
| 12. | ಎನ್.ಸಿ. ಪ್ರೌಢಶಾಲೆ, ಚೆಯ್ಯಂಬಾಣೆ | 50 | " | 1 |
| 13. | ಪದವಿಪೂರ್ವ ಕಾಲೇಜು, ಶ್ರೀಮಂಗಲ | 100 | " | 1 |
| 14. | ಭಾರತಿ ಪ್ರೌಢಶಾಲೆ, ಮರಗೋಡು | 100 | " | 1 |
| 15. | ಡಿ.ಸಿ. ಪದವಿಪೂರ್ವ ಕಾಲೇಜು, ಮೂದಾಪುರ | 100 | " | 1 |
| 16. | ಜನತಾ ಪೌಢಶಾಲೆ, ಹುದಿಕೇರಿ | 50 | " | 1 |
| 17. | ಕೊಡಗು ವಿದ್ಯಾಲಯ, ಮಡಿಕೇರಿ | 50 | " | 1* |
| 18. | ಮದೆಮಹೇಶ್ವರ ಪ್ರೌಢಶಾಲೆ, ಮದೆ | 60 | " | 1 |
| 19. | ಗೋಣಿಕೊಪ್ಪ ಪ್ರೌಢಶಾಲೆ, ಗೋಣಿಕೊಪ್ಪಲು | 60 | " | 1 |
| 20. | ನವೋದಯ ವಿದ್ಯಾಲಯ, ಮಡಿಕೇರಿ | 50 | " | ಇಲ್ಲ |
| 21. | ಎನ್.ಡಿ.ಸಿ. ಪದವಿಪೂರ್ವ ಕಾಲೇಜು, ಮೂದಾಪುರ | 74 | " | 1 |
| 22. | ಸರ್ಕಾರಿ ಪದವಿಪೂರ್ವ ಕಾಲೇಜು, ಪೊನ್ನಂಪೇಟೆ | 110 | " | 1 |
| 23. | ಸೇಂಟ್ ಮೈಕೇಲ್ಸ್ ಪ್ರೌಢಶಾಲೆ, ಮಡಿಕೇರಿ | 116 | " | 1 |

* ಇಲ್ಲಿ ಇರುವ ಅಧಿಕಾರಿಗಳು ಉಸ್ತುವಾರಿ ಜವಾಬ್ದಾರಿಯವರು.

ಎನ್.ಸಿ.ಸಿ. ಶಿಬಿರಗಳು ಒಂದು ವಾರ್ಷಿಕ ಕಾರ್ಯಕ್ರಮವಾಗಿದ್ದು, ಸಾಮಾನ್ಯವಾಗಿ ಅಕ್ಟೋಬರ್ ತಿಂಗಳಲ್ಲಿ ನಡೆಯುತ್ತವೆ. ಒಟ್ಟು ಸಂಖ್ಯೆಯ ಶೇಕಡಾ 50 ಕ್ಯಾಡೆಟ್‌ಗಳು ಇವುಗಳಲ್ಲಿ ಭಾಗವಹಿಸುತ್ತಾರೆ. ಇದಲ್ಲದೆ ರಾಷ್ಟ್ರೀಯ ಮಟ್ಟದ ಬೇಸಿಗೆ ಶಿಬಿರಗಳಲ್ಲಿಯೂ, ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಸಮಾರಂಭವಲ್ಲಿಯೂ ಭಾಗವಹಿಸಲು, ಪರಿಣತ ಕೆಡೆಟ್‌ಗಳನ್ನು ಆರಿಸಿ ಕಳುಹಿಸಲಾಗುತ್ತದೆ. ಕಳೆದ ಮೂರು ವರ್ಷಗಳಲ್ಲಿ ವಾರ್ಷಿಕ ಶಿಬಿರಗಳಲ್ಲಿ ಭಾಗವಹಿಸಿದ ಎನ್.ಸಿ.ಸಿ. ಕ್ಯಾಡೆಟ್‌ಗಳ ಮತ್ತು ಅಧಿಕಾರಿಗಳ ವಿವರಗಳನ್ನು ಈ ಮುಂದೆ ನೀಡಲಾಗಿದೆ.

| ಕ್ರ.ಸಂ. | ಸಿಬ್ಬಂದಿ ವಿವರ | 1987–88 | 88–89 | 89–90 |
|---|---|---|---|---|
| 1. | ಮುಖ್ಯಾಧಿಕಾರಿಗಳು (ಸಿ.ಓ.) | 1 | ಇಲ್ಲ | 1 |
| 2. | ಪೂರ್ಣಕಾಲಿಕ ಅಧಿಕಾರಿಗಳು (ಎ.ಓ.) | 1 | 1 | 1 |
| 3. | ಅರೆಕಾಲಿಕ ಅಧಿಕಾರಿಗಳು | 15 | 5 | 13 |
| 4. | ಜೆ.ಸಿ.ಓ. ಮತ್ತು ಎನ್.ಸಿ.ಓ.ಗಳು | 19 | 18 | 17 |
| 5. | ಉಳಿದ ಸಿಬ್ಬಂದಿ | 22 | 19 | 20 |
| 6. | ಕ್ಯಾಡೆಟ್‌ಗಳು | 889 | 773 | 739 |
| | ಒಟ್ಟು | 947 | 816 | 791 |

ಕೊಡಗು ಜಿಲ್ಲೆಯಲ್ಲಿ ಎನ್.ಸಿ.ಸಿ. ತರಬೇತಿ ಪಡೆದ 50ಕ್ಕಿಂತ ಹೆಚ್ಚು ಕ್ಯಾಡೆಟ್‌ಗಳು ಭಾರತೀಯ ಸೈನ್ಯದ ವಿವಿಧ ಹುದ್ದೆಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಜಿಲ್ಲೆಯ ಎನ್.ಸಿ.ಸಿ. ಕ್ಯಾಡೆಟ್ ಆಗಿದ್ದ ಸಿ. ಕೆ. ಕರುಂಬಯ್ಯ ಅವರು ಭಾರತೀಯ ಸೈನ್ಯದಲ್ಲಿ ಮೇಜರ್ ಜನರಲ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಇದೇ ರೀತಿ ಕೆ. ಪಿ. ನಂಜಪ್ಪ ಕರ್ನಲ್ ಹುದ್ದೆಯಲ್ಲಿದ್ದು, ವೀರಚಕ್ರ ಗಳಿಸಿದ್ದಾರೆ. ಹಾಗೂ ಎಂ. ಸಿ. ನಂಜಪ್ಪ ಯುದ್ಧಸೇವಾ ಪಾರಿತೋಷಕ ಗಳಿಸಿದ್ದಾರೆ. ಇವರಲ್ಲದೆ ಇನ್ನೂ ಹಲವಾರು ಕ್ಯಾಡೆಟ್‌ಗಳು ಸೈನ್ಯದ ಇತರ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ ಹಾಗೂ ಸಲ್ಲಿಸುತ್ತಿದ್ದಾರೆ.

## ವಯಸ್ಕರ ಶಿಕ್ಷಣ

ವಯಸ್ಕರ ಶಿಕ್ಷಣ ಯೋಜನೆಯು ಜಿಲ್ಲೆಯಲ್ಲಿ 1952 ರಲ್ಲಿ ಜಾರಿಗೆ ಬಂದರೂ, 1940 ರಿಂದ 1947ರ ಅವಧಿಯಲ್ಲಿಯೇ ಹೆಬ್ಬಾಲೆಯಲ್ಲಿ ಒಂದು ಪರಿಶಿಷ್ಟ ಜಾತಿಯವರಿಗಾಗಿ ವಯಸ್ಕರ ಶಿಕ್ಷಣ ಶಾಲೆ ನಡೆಯುತ್ತಿತ್ತು. 1953ರಲ್ಲಿ ಪ್ರಾರಂಭವಾದ ಸಮುದಾಯ ಅಭಿವೃದ್ಧಿ ಕಾರ್ಯಕ್ರಮದಡಿ ಜಿಲ್ಲೆಯ ಎಲ್ಲೆಡೆ ಸರಕಾರಿ ಧನಸಹಾಯದಿಂದ ವಯಸ್ಕರ ಶಿಕ್ಷಣ ತರಗತಿಗಳನ್ನು ಪ್ರಾರಂಭಿಸಲಾಯಿತು. 1956-57 ಮತ್ತು 57-58ರಲ್ಲಿ ಜಿಲ್ಲೆಯ ಹಲವಾರು ಸ್ಥಳಗಳಲ್ಲಿ ನಡೆದ ವಯಸ್ಕರ ಶಿಕ್ಷಣ ತರಗತಿಗಳಲ್ಲಿ ಉಳುಮೆ, ಪಶು ಸಂಗೋಪನೆ, ಸಾಮಾಜಿಕ ಶಿಕ್ಷಣ, ಆರೋಗ್ಯ ಹಾಗೂ ನೈರ್ಮಲ್ಯಗಳ ಬಗ್ಗೆ ತಿಳುವಳಿಕೆ ನೀಡಲಾಯಿತು. ನವೀಕೃತ ಕಬ್ಬಿಣದ ನೇಗಿಲು, ಕಾಂಪೋಸ್ಟ್ ತಯಾರಿಕೆ, ನವ್ಯ ಮಾದರಿಯ ಶೌಚಾಲಯ ನಿರ್ಮಾಣ–ಈ ವಿಷಯಗಳ ಬಗ್ಗೆ ಪ್ರದರ್ಶನಗಳನ್ನು ಏರ್ಪಡಿಸಿತ್ತು. ಮೊದಲನೇಯ ಪಂಚವಾರ್ಷಿಕ ಯೋಜನೆಯಲ್ಲಿ ಸಮುದಾಯ ಅಭಿವೃದ್ಧಿಗಾಗಿ 217 ತರಗತಿಗಳನ್ನು ನಡೆಸಿ, 1,669 ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಲಾಯಿತು. ಇದೇ ಸಮಯಕ್ಕೆ ಒಟ್ಟು 8,000 ಪುಸ್ತಕಗಳ 85 ಗ್ರಾಮಾಂತರ ಗ್ರಂಥಾಲಯಗಳನ್ನು, 36ವಾಚನಾಲಯಗಳನ್ನು ತೆರೆಯಲಾಯಿತು. 1961-62ರಲ್ಲಿ ವಯಸ್ಕರ ಸಾಕ್ಷರತೆಗಾಗಿ 8,000 ರೂ.ಗಳ ವಿಶೇಷ ಧನ ಸಹಾಯವನ್ನು ಸರಕಾರ ನೀಡಿತು. ಶಿಕ್ಷಣ ಇಲಾಖೆಯ ವತಿಯಿಂದ 101 ಹಾಗೂ ಮೂರು ಸಮುದಾಯ ಅಭಿವೃದ್ಧಿ ಕ್ಷೇತ್ರಗಳ ವ್ಯಾಪ್ತಿಯಲ್ಲಿ 50 ಗ್ರಾಮೀಣ ಗ್ರಂಥಾಲಯಗಳ ಸ್ಥಾಪನೆಯಾಯಿತು. ಇದರೊಂದಿಗೆ ಒಂದು ಸಂಚಾರಿ ಘಟಕವುಳ್ಳ ಸರ್ಕ್ಯುಲೇಟಿಂಗ್ ಗ್ರಂಥಾಲಯವೂ ಪ್ರಾರಂಭವಾಯಿತು. ಕೊಡಗು ಜಿಲ್ಲೆ ಮೈಸೂರು ರಾಜ್ಯದಲ್ಲಿ ವಿಲೀನವಾಗುವ ಸಮಯಕ್ಕೆ ಜಿಲ್ಲೆಯಲ್ಲಿ 83 ವಯಸ್ಕರ ಶಿಕ್ಷಣ ಕೇಂದ್ರಗಳಿದ್ದು, ಇದರಲ್ಲಿ ಆರು ಕೇಂದ್ರಗಳು ಹೆಂಗಸರಿಗೆ ಮೀಸಲಾಗಿದ್ದವು.

1974 ರಿಂದ 1986ರ ವರೆಗೆ ಜಿಲ್ಲೆಯಲ್ಲಿ ವರ್ಷಂಪ್ರತಿ 30 ವಯಸ್ಕರ ಶಿಕ್ಷಣ ಕೇಂದ್ರಗಳು ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ವತಿಯಿಂದ ಸ್ಥಾಪಿತವಾಗಿದ್ದು, ವರ್ಷಕ್ಕೆ 900 ಮಂದಿ ಫಲಾನುಭವಿಗಳಿದ್ದರು. 1988-89 ಹಾಗೂ 89–90 ವರ್ಷಗಳಿಗೆ ವಿವಿಧ ಕಾರ್ಯಕ್ರಮಗಳಡಿ ಇದ್ದ ಫಲಾನುಭವಿಗಳ ಸಂಖ್ಯೆ ಈ ರೀತಿ ಇದೆ.

| | ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮ (ಆರ್.ಎಸ್.ಎಲ್.ಪಿ.) | ರಾಜ್ಯ ವಯಸ್ಕರ ಶಿಕ್ಷಣ ಕಾರ್ಯಕ್ರಮ (ಎಸ್.ಎ.ಇ.ಪಿ.) | ಸಾಮೂಹಿಕ ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮ (ಎಂ.ಪಿ.ಎಸ್.ಎಲ್.) | ಬುಡಕಟ್ಟು ಜನರ ಉಪಯೋಜನೆ (ಟಿ.ಎಸ್.ಪಿ.) |
|---|---|---|---|---|
| 1988—89 | 900 | 1,200 | 1,500 | ಇಲ್ಲ |
| 1989—90 | 900 | 1,500 | 1,500 | 6,000 |

1988—89 ಮತ್ತು 1989—90ಕ್ಕೆ ಅಕ್ಷರಸ್ಥರಾದ ಅನಕ್ಷರಸ್ಥರ ವಿವರ

| | | | ಪರಿಶಿಷ್ಟ ಜಾತಿಯ | | ಪರಿಶಿಷ್ಟ ವರ್ಗದ | |
|---|---|---|---|---|---|---|
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| 1988—89 | 3,858 | 3,551 | 944 | 852 | 858 | 535 |
| 1989—90 | 6,004 | 5,691 | 1,939 | 1,055 | 693 | 568 |

## ಕಾಲೇಜು ಶಿಕ್ಷಣ

ಜಿಲ್ಲೆಯಲ್ಲಿ 1949ರ ವರೆಗೆ ಯಾವುದೇ ಕಾಲೇಜು ಇರಲಿಲ್ಲ. ಪ್ರೌಢಶಿಕ್ಷಣ ಮುಗಿಸಿದ ವಿದ್ಯಾರ್ಥಿಗಳು ತಮ್ಮ ಮುಂದಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರು, ಮಂಗಳೂರು, ಮೈಸೂರು, ಮದರಾಸುಗಳಿಗೆ ಹೋಗಬೇಕಿತ್ತು. ಹಲವಾರು ಮಂದಿ ಪರಊರುಗಳವರು ಕಾಲೇಜು ಶಿಕ್ಷಣ ತಮಗೆ ಎಟುಕದೆ ವಿದ್ಯಾಭ್ಯಾಸವನ್ನೇ ನಿಲ್ಲಿಸುವ ಪರಿಸ್ಥಿತಿ ಇತ್ತು. ಕೊಡಗಿನ ಮುಖ್ಯ ಕಮೀಷನರ್ ಆಗಿದ್ದ ಸಿ. ಟಿ. ಮೊದಲಿಯಾರರು ಸ್ಥಳೀಯರ ಸಹಕಾರದೊಂದಿಗೆ ಒಂದು ಕಾಲೇಜನ್ನು ಪ್ರಾರಂಭಿಸುವಲ್ಲಿ ವೈಯ್ಯಕ್ತಿಕ ಆಸಕ್ತಿ ತೋರಿದುದರಿಂದ, ಮಡಿಕೇರಿಯಲ್ಲಿ ದ್ವಿತೀಯ ದರ್ಜೆ ಕಾಲೇಜು ಪ್ರಾರಂಭವಾಯಿತು (1949). ಪ್ರಾರಂಭದಲ್ಲಿ ತರಗತಿಗಳನ್ನು ಸೆಂಟ್ರಲ್ ಶಾಲೆಯ ಕಟ್ಟಡದಲ್ಲಿಯೇ ನಡೆಸಲಾಗುತ್ತಿತ್ತು. ಈ ಕಾಲೇಜಿಗೆ ಆರ್.ಎಚ್.ಪಿ. ಹೋಲ್ಮ್ಸ್‌ರವರು ಪ್ರಥಮ ಪ್ರಾಚಾರ್ಯರಾದರು. ಈಗಿನ ಕಟ್ಟಡ 7.30 ಲಕ್ಷ ರೂ.ಗಳ ವೆಚ್ಚದಲ್ಲಿ 1953ರಲ್ಲಿ ಕಟ್ಟಲ್ಪಟ್ಟು, ಸಂಸ್ಥೆ ಪ್ರಥಮ ದರ್ಜೆ ಕಾಲೇಜಾಗಿ ಮಾರ್ಪಾಡಾಯಿತು. ವಿಜ್ಞಾನ ಪ್ರಯೋಗಾಲಯಗಳು 1954ರಲ್ಲಿ ನಿರ್ಮಿತವಾದವು. ಇದೇ ವರ್ಷ ಬಿ.ಎಸ್ಸಿ. ತರಗತಿಗಳೂ ಪ್ರಾರಂಭಗೊಂಡವು. ಹೊಸ ಪಠ್ಯಕ್ರಮದಂತೆ 1956ರಲ್ಲಿ ಪಿ.ಯು.ಸಿ. ತರಗತಿಗಳನ್ನೂ, 1957ರಲ್ಲಿ ಮೂರು ವರ್ಷ ಪದವಿಯ ಪ್ರಥಮ ತರಗತಿಯನ್ನೂ ಪ್ರಾರಂಭಿಸಲಾಯಿತು. ಈಗ (1992) ಜಿಲ್ಲೆಯಲ್ಲಿ ಐದು ಪದವಿ ಕಾಲೇಜುಗಳು ಇವೆ.

ಪ್ರಾರಂಭಿಕ ವರ್ಷ (1949) ಸಂಸ್ಥೆಯಲ್ಲಿ 111 ವಿದ್ಯಾರ್ಥಿಗಳಿದ್ದು, ಅದರ ಮುಂದಿನ ವರ್ಷ 179 ಮಂದಿ ಇದ್ದರು. ಇವರ ಪೈಕಿ 79 ವಿದ್ಯಾರ್ಥಿಗಳ ತಂಡ 1951ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಪ್ರಥಮವಾಗಿ ಇಂಟರ್ ಮೀಡಿಯೇಟ್ ಪರೀಕ್ಷೆಗೆ ಕಟ್ಟಿದರು. ಅವರಲ್ಲಿ 55 ಮಂದಿ ತೇರ್ಗಡೆಯಾದರು. ನಂತರದ ತಂಡದ 78 ವಿದ್ಯಾರ್ಥಿಗಳ ಪೈಕಿ 51 ಮಂದಿ ತೇರ್ಗಡೆಯಾದರು.

1957-58 ರಿಂದ ಈ ಕಾಲೇಜು ಮೈಸೂರು ವಿಶ್ವವಿದ್ಯಾಲಯದ ಅಧೀನಕ್ಕೊಳಪಟ್ಟಿತು. ಆಗ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 410 ಆಗಿದ್ದಿತು. ಸಂಸ್ಥೆಯಲ್ಲಿ ಒಟ್ಟು 35 ಮಂದಿ ಬೋಧಕ ಸಿಬ್ಬಂದಿ ಇದ್ದು, ಇವರಲ್ಲಿ 17 ಮಂದಿ ಕಲಾ ವಿಭಾಗದಲ್ಲಿಯೂ, 18 ಮಂದಿ ವಿಜ್ಞಾನ ವಿಭಾಗದಲ್ಲಿಯೂ ಇದ್ದರು. ಇವರಲ್ಲಿ ಒಟ್ಟು ನಾಲ್ವರು ಮಹಿಳೆಯರಿದ್ದರು. 1964ರಲ್ಲಿ ಒಂದೂವರೆ ಲಕ್ಷ ರೂ.ಗಳ ವೆಚ್ಚದಲ್ಲಿ ನಿಸರ್ಗ ವಿಜ್ಞಾನ ಕಟ್ಟಡ ಕಟ್ಟಲ್ಪಟ್ಟಿತು. ಸೆಪ್ಟಂಬರ್ 1980ರಿಂದ ಕೊಡಗು ಜಿಲ್ಲೆಯ ಎಲ್ಲ ಕಾಲೇಜುಗಳನ್ನು ಮಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡಿಸಲಾಗಿದೆ.

1987-88ನೇ ಸಾಲಿಗೆ ಕಾಲೇಜಿನ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ 901 ಆಗಿದ್ದು, ಇವರಲ್ಲಿ 420 ಹುಡುಗರು, 481 ಹುಡುಗಿಯರಿದ್ದರು. ಹೆಣ್ಣು ಮಕ್ಕಳು 18, ಗಂಡು ಮಕ್ಕಳು 35, ಗಿರಿಜನ ಹೆಣ್ಣು ಮಕ್ಕಳು 3, ಗಂಡು ಮಕ್ಕಳು 3 ಮಂದಿ ಇವರಲ್ಲಿ ಸೇರಿದ್ದರು. 1988-89ನೇ ಸಾಲಿನ ಒಟ್ಟು 888 ಹಾಜರಾತಿಯಲ್ಲಿ 443 ಗಂಡು ಮಕ್ಕಳು, 445 ಹೆಣ್ಣು ಮಕ್ಕಳು, ಇವರಲ್ಲಿ ಪರಿಶಿಷ್ಟ ಜಾತಿ ಗಂಡು ಮಕ್ಕಳು 42, ಹೆಣ್ಣು ಮಕ್ಕಳು 23, ಪರಿಶಿಷ್ಟ ಬುಡಕಟ್ಟಿನ ಗಂಡು ಮಕ್ಕಳು 3, ಹೆಣ್ಣು ಮಕ್ಕಳು 6 ಇದ್ದರು. 1989-90ನೇ ಸಾಲಿನಲ್ಲಿ ಒಟ್ಟು 746 ವಿದ್ಯಾರ್ಥಿಗಳ ಪೈಕಿ 368 ಗಂಡು ಮಕ್ಕಳು, 378 ಹೆಣ್ಣು ಮಕ್ಕಳು, ಪರಿಶಿಷ್ಟಜಾತಿ ಗಂಡು ಮಕ್ಕಳು 40, ಹೆಣ್ಣು ಮಕ್ಕಳು 19, ಪರಿಶಿಷ್ಟ ಬುಡಕಟ್ಟಿನ ಗಂಡು ಮಕ್ಕಳು 3, ಹೆಣ್ಣು ಮಕ್ಕಳು 5 ಇದ್ದರು. ಕಾಲೇಜಿಗೆ ಸೇರಿದಂತೆ ಗಂಡು ಹಾಗೂ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ವಿದ್ಯಾರ್ಥಿ ನಿಲಯಗಳಿದ್ದು, ಅವು ಕ್ರಮವಾಗಿ 1949 ಮತ್ತು 1957ರಲ್ಲಿ ಪ್ರಾರಂಭವಾದವು. ಅವುಗಳಲ್ಲಿ ಕ್ರಮವಾಗಿ 1989-90ನೇಯ ಸಾಲಿಗೆ ಒಟ್ಟು 36 ಹಾಗೂ 20 ವಿದ್ಯಾರ್ಥಿ ವಿದ್ಯಾರ್ಥಿನಿಯರಿದ್ದರು. 1963ರಲ್ಲಿ ವಿದ್ಯಾರ್ಥಿಗಳಿಗಾಗಿ ತೆರೆಯಲ್ಪಟ್ಟಿದ್ದ ಔಷಧಾಲಯ 1987ರ ವರೆಗೂ ಅಸ್ತಿತ್ವದಲ್ಲಿದ್ದು, ಇತ್ತೀಚೆಗೆ ಮುಚ್ಚಲ್ಪಟ್ಟಿತು. ಇದಲ್ಲದೆ ಜಿಲ್ಲೆಯ ಕುಶಾಲನಗರದಲ್ಲಿ ಒಂದು ಸರಕಾರೀ ಪ್ರಥಮ ದರ್ಜೆ ಕಾಲೇಜು, ಸೋಮವಾರಪೇಟೆ ಹಾಗೂ ಗೋಣಿಕೊಪ್ಪಲುಗಳಲ್ಲಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು ಮತ್ತು ವೀರರಾಜಪೇಟೆಯಲ್ಲಿ ಅನುದಾನಿತ ಮಹಿಳಾ ಪ್ರಥಮ ದರ್ಜೆ ಕಾಲೇಜು ಇವೆ. ಕುಶಾಲನಗರದ ಕಾಲೇಜಿನಲ್ಲಿ 88-89ನೇ ಸಾಲಿಗೆ ಒಟ್ಟು 385 ವಿದ್ಯಾರ್ಥಿಗಳಿದ್ದು ಅವರಲ್ಲಿ 196 ಗಂಡು ಮಕ್ಕಳು ಹಾಗೂ 189 ಹೆಣ್ಣು ಮಕ್ಕಳು ಇದ್ದರು. 1989-90ನೇ ಸಾಲಿಗೆ 444 ಹಾಜರಾತಿ ಇದ್ದು 236 ಗಂಡು ಹಾಗೂ 208 ಹೆಣ್ಣು ಮಕ್ಕಳು ಇದ್ದರು. 1990-91ನೇ ಸಾಲಿಗೆ ಒಟ್ಟು 536 ವಿದ್ಯಾರ್ಥಿಗಳಲ್ಲಿ 314 ಗಂಡಸರು, 222 ಹೆಂಗಸರು, ಇವರಲ್ಲಿ 19 ಪರಿಶಿಷ್ಟ ಜಾತಿಯವರು (13 ಗಂ., 6 ಹೆಂ.) ಮತ್ತು 9 ಪರಿಶಿಷ್ಟ

ಬುಡಕಟ್ಟಿನವರು (5 ಗಂ., 4 ಹೆಂ.) ಇದ್ದರು. ಇದೇ ಸಾಲಿಗೆ ಒಟ್ಟು 28 ಮಂದಿ ಅಧ್ಯಾಪಕ ಸಿಬ್ಬಂದಿ ಇದ್ದು, ಇವರಲ್ಲಿ 20 ಗಂಡಸರು ಮತ್ತು 8 ಮಂದಿ ಹೆಂಗಸರಿದ್ದರು. 1968 ಪ್ರಾರಂಭವಾದ ಗೋಣಿಕೊಪ್ಪಲಿನ ಕಾವೇರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 1988-89ಕ್ಕೆ ಒಟ್ಟು 793 ಮಂದಿ ವಿದ್ಯಾರ್ಥಿಗಳಿದ್ದರು (486 ಗಂಡು ಹಾಗೂ 307 ಹೆಣ್ಣು ಮಕ್ಕಳು). 1989-90ಕ್ಕೆ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 816 (497 ಗಂಡು ಹಾಗೂ 319 ಹೆಣ್ಣು ಮಕ್ಕಳು) ಆಗಿದ್ದಿತು. 1990–91ನೇ ಸಾಲಿಗೆ ಒಟ್ಟು ಸಂಖ್ಯೆಯಾದ 939ರಲ್ಲಿ 521 ಗಂಡು, 418 ಹೆಣ್ಣು, ಇವರಲ್ಲಿ 44 ಪರಿಶಿಷ್ಟ ಜಾತಿ ಹಾಗೂ 6 ಪರಿಶಿಷ್ಟ ಬುಡಕಟ್ಟಿನ ಮಕ್ಕಳಿದ್ದರು. ಇದೇ ಸಾಲಿಗೆ 46 ಮಂದಿ ಒಟ್ಟು ಅಧ್ಯಾಪಕ ಸಿಬ್ಬಂದಿಯಲ್ಲಿ 33 ಗಂಡಸರು ಹಾಗೂ 13 ಹೆಂಗಸರಿದ್ದರು.

1980ರಲ್ಲಿ ಪ್ರಾರಂಭವಾದ ವೀರರಾಜಪೇಟೆಯ ಕಾವೇರಿ ಮಹಿಳಾ ಪ್ರಥಮದರ್ಜೆ ಕಾಲೇಜಿನಲ್ಲಿ 1988-89, 89-90 ಹಾಗೂ 90-91ನೇ ಸಾಲಿಗೆ ಕ್ರಮವಾಗಿ 412 (ಇವರಲ್ಲಿ 5 ಪರಿಶಿಷ್ಟ ಜಾತಿ, 2 ಪರಿಶಿಷ್ಟ ಬುಡಕಟ್ಟು), 413 (5 ಪರಿಶಿಷ್ಟ ಜಾತಿ, 3 ಪರಿಶಿಷ್ಟ ಬುಡಕಟ್ಟು) ಹಾಗೂ 449 (6 ಪರಿಶಿಷ್ಟ ಜಾತಿ, 1 ಪರಿಶಿಷ್ಟ ಬುಡಕಟ್ಟು) ವಿದ್ಯಾರ್ಥಿನಿಯರಿದ್ದರು. 1990-91ನೇ ಸಾಲಿಗೆ ಒಟ್ಟು 14 ಮಂದಿ ಬೋಧಕ ಸಿಬ್ಬಂದಿ ಇದ್ದು, 6 ಮಂದಿ ಗಂಡಸರು 8 ಮಂದಿ ಹೆಂಗಸರೂ ಇದ್ದರು.

### ಗ್ರಂಥಾಲಯಗಳು

ಮಡಿಕೇರಿಯಲ್ಲಿ 1956ರಲ್ಲಿ 'ಮಹಾತ್ಮಾಗಾಂಧಿ ಕೇಂದ್ರ ಗ್ರಂಥಾಲಯ' ಎಂಬ ಹೆಸರಿನಲ್ಲಿ ಪ್ರಾರಂಭವಾದ ಗ್ರಂಥಾಲಯ 1971ರಲ್ಲಿ 'ಜಿಲ್ಲಾ ಕೇಂದ್ರ ಗ್ರಂಥಾಲಯ'ವಾಗಿ ಮಾರ್ಪಟ್ಟಿತು. ತಾಲೂಕು ಕೇಂದ್ರಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸಿ ಗ್ರಾಮೀಣ ಜನರಿಗೆ ಗ್ರಂಥಾಲಯ ಸೇವೆ ಲಭ್ಯವಾಗುವಂತೆ ಮಾಡುವುದೇ ಇದರ ಉದ್ದೇಶ. 85,000 ಗ್ರಂಥಗಳನ್ನು ಹೊಂದಿರುವ ಈ ಗ್ರಂಥಾಲಯ ಸುಮಾರು ಒಂದು ಸಾವಿರ ಸದಸ್ಯರನ್ನು ಹೊಂದಿದೆ. ದಿನಂಪ್ರತಿ ಸರಾಸರಿ 250 ಪುಸ್ತಕಗಳನ್ನು ಇಲ್ಲಿಂದ ಎರವಲು ನೀಡಲಾಗುತ್ತದೆ. 15 ದಿನಪತ್ರಿಕೆಗಳು ಹಾಗೂ 47 ನಿಯತಕಾಲಿಕೆಗಳನ್ನು ಈ ಗ್ರಂಥಾಲಯ ಕೊಳ್ಳುತ್ತದೆ. ಮುಖ್ಯ ಗ್ರಂಥಪಾಲಕರ ಆಡಳಿತದಲ್ಲಿರುವ ಈ ಗ್ರಂಥಾಲಯ ಗ್ರಂಥಪಾಲಕ, ಸಹಗ್ರಂಥಪಾಲಕ, ಗ್ರಂಥಾಲಯ ಸಹಾಯಕ, ಇವರೇ ಮುಂತಾದ 18 ಮಂದಿ ಸಿಬ್ಬಂದಿಯನ್ನು ಹೊಂದಿರುತ್ತದೆ. ಇದರ ವ್ಯಾಪ್ತಿಯಲ್ಲಿ ಇನ್ನೂ ಆರು ಗ್ರಂಥಾಲಯಗಳಿದ್ದು, ಅವುಗಳು ವೀರರಾಜಪೇಟೆ (1972), ಸೋಮವಾರಪೇಟೆ (1972), ಕುಶಾಲನಗರ (1972), ಮಡಿಕೇರಿ ಕಾಲೇಜು ರಸ್ತೆ (1972), ಕೊಡ್ಲಿಪೇಟೆ (1981) ಹಾಗೂ ಸುಂಟಿಕೊಪ್ಪ (1981) ಈ ಸ್ಥಳಗಳಲ್ಲಿ ಇವೆ. ಇದರೊಡನೆ 1987ರಲ್ಲಿ ಪ್ರಾರಂಭವಾದ ಒಂದು ಸಂಚಾರೀ ಗ್ರಂಥಾಲಯವೂ ಸೇರಿದೆ. ಮೇಲಿನ ಗ್ರಂಥಾಲಯಗಳಲ್ಲಿ 1991ನೇ ಮಾರ್ಚ್ ತಿಂಗಳಲ್ಲಿ ಕ್ರಮವಾಗಿ 10,066 ಪುಸ್ತಕಗಳು ಮತ್ತು 1,208 ಸದಸ್ಯರು; 8,906 ಪುಸ್ತಕಗಳು ಮತ್ತು 853 ಸದಸ್ಯರು; 5,561 ಪುಸ್ತಕಗಳು ಮತ್ತು 553 ಸದಸ್ಯರು; 4,033 ಪುಸ್ತಕಗಳು ಮತ್ತು 221 ಸದಸ್ಯರು; 3,806 ಪುಸ್ತಕಗಳು ಮತ್ತು 375 ಸದಸ್ಯರು; 2,908 ಪುಸ್ತಕಗಳು ಮತ್ತು 127 ಸದಸ್ಯರು ಇದ್ದರು. ಸಂಚಾರಿ ಗ್ರಂಥಾಲಯ 3,408 ಪುಸ್ತಕಗಳನ್ನು ಮತ್ತು 1,200 ಮಂದಿ ಸದಸ್ಯರನ್ನು ಹೊಂದಿತ್ತು.

ಇವಲ್ಲದೆ ಜಿಲ್ಲೆಯಲ್ಲಿ 12 ಮಂಡಲ ಕೇಂದ್ರ ಗ್ರಂಥಾಲಯಗಳಿದ್ದು ಅವು ಈ ಕೆಳಕಂಡ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತವೆ. ಪೊನ್ನಂಪೇಟೆ (4,208 ಪುಸ್ತಕಗಳು, 158 ಸದಸ್ಯರು,), ಬಾಳೆಲೆ (4,400 ಪುಸ್ತಕಗಳು, 160 ಸದಸ್ಯರು), ಸಿದ್ದಾಪುರ (790 ಪುಸ್ತಕಗಳು, 95 ಸದಸ್ಯರು), ಮಾದಾಪುರ (850 ಪುಸ್ತಕಗಳು, 80 ಸದಸ್ಯರು), ನಾಪೋಕ್ಲು (1,950 ಪುಸ್ತಕಗಳು, 158 ಸದಸ್ಯರು), ಮೂರ್ನಾಡು (ವಾಚನಾಲಯ ಮಾತ್ರ), ನಿಡ್ತ (850 ಪುಸ್ತಕಗಳು, 27 ಸದಸ್ಯರು), ಶನಿವಾರಸಂತೆ (2,408 ಪುಸ್ತಕಗಳು ಮತ್ತು 110 ಸದಸ್ಯರು), ಭಾಗಮಂಡಲ (86 ಪುಸ್ತಕಗಳು, 25 ಸದಸ್ಯರು), ಕುಟ್ಟ (750 ಪುಸ್ತಕಗಳು, 33 ಸದಸ್ಯರು), ಅಮ್ಮತ್ತಿ (ಎರಡು ಗ್ರಂಥಾಲಯಗಳು-(1) 790 ಪುಸ್ತಕಗಳು, 33 ಸದಸ್ಯರು, (2) 690 ಪುಸ್ತಕಗಳು, 25 ಸದಸ್ಯರು. ಜಿಲ್ಲಾ ಕೇಂದ್ರ ಗ್ರಂಥಾಲಯದ ವ್ಯಾಪ್ತಿಯಲ್ಲಿಯೇ ಬರುವ 13 ಪುಸ್ತಕ ವಿತರಣಾ ಕೇಂದ್ರಗಳು ಜಿಲ್ಲೆಯ ಹಲವಾರು ಸ್ಥಳಗಳಲ್ಲಿವೆ. ವೀರರಾಜಪೇಟೆಯಲ್ಲಿ ಕರ್ನಾಟಕ ಸಂಘವೆಂಬ ಒಂದು ಖಾಸಗಿ ಗ್ರಂಥಾಲಯವಿದೆ.

**ಸಂಚಾರೀ ಗಂಥಾಲಯ :** ಗ್ರಾಮೀಣ ಜನರಿಗೆ ಓದುವ ಸೌಲಭ್ಯ ನೀಡುವುದರೊಂದಿಗೆ ಮನರಂಜನೆಯನ್ನೂ ನೀಡುವ ಉದ್ದೇಶದಿಂದ ಪ್ರಾರಂಭವಾದ ಸಂಚಾರಿ ಗ್ರಂಥಾಲಯ

ಜಿಲ್ಲೆಯ ಎಲ್ಲಾ ಮಂಡಲಗಳಿಗೆ ತಿಂಗಳಿಗೊಂದಾವರ್ತಿ ಭೇಟಿ ನೀಡುತ್ತದೆ. ವಿ.ಸಿ.ಆರ್. ಮತ್ತು ಟಿ.ವಿ. ಅಳವಡಿಸಲ್ಪಟ್ಟಿರುವ ಈ ಗ್ರಂಥಾಲಯದಿಂದ ಗ್ರಾಮೀಣ ಜನತೆ ಸಾಕಷ್ಟು ಪ್ರಯೋಜನ ಪಡೆದಿದ್ದು, ಇದೊಂದು ಯಶಸ್ವೀ ಯೋಜನೆಯಾಗಿದೆ.

**ಚಲನಚಿತ್ರ ಗ್ರಂಥಾಲಯ :** ಮಡಿಕೇರಿಯಲ್ಲಿರುವ ಚಲನಚಿತ್ರ ಗ್ರಂಥಾಲಯದಲ್ಲಿ ಶೈಕ್ಷಣಿಕ, ವ್ಯಾವಸಾಯಿಕ, ಸಾಂಸ್ಕೃತಿಕ ಹಾಗೂ ಸಾಕ್ಷ್ಯಚಿತ್ರಗಳ ಕ್ಯಾಸೆಟ್‌ಗಳನ್ನು ಸಂಗ್ರಹಿಸಿಡಲಾಗಿದೆ. ಸಂಚಾರಿ ಸಿನಿಮಾ ವ್ಯಾನ್ ಹೊಂದಿರುವ ಈ ಗ್ರಂಥಾಲಯ ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡಿ ಮೇಲ್ಕಂಡ ವಿಷಯಗಳ ಬಗ್ಗೆ ಚಲನಚಿತ್ರ ಪ್ರದರ್ಶಿಸಿ, ಜನಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದೆ. ಇಲ್ಲಿಂದ ಶಾಲಾ ಕಾಲೇಜುಗಳೂ ಸಹ ಕ್ಯಾಸೆಟ್‌ಗಳನ್ನು ಎರವಲು ಪಡೆಯಬಹುದಾಗಿದೆ. ತಿಂಗಳೊಂದಕ್ಕೆ ಸುಮಾರು 20 ವಿದ್ಯಾಸಂಸ್ಥೆಗಳು ಇದರ ಉಪಯೋಗ ಹೊಂದುತ್ತವೆ. ಇದಲ್ಲದೆ ವಾರ್ತಾ ಮತ್ತು ಪ್ರಚಾರ, ಆರೋಗ್ಯ ಇಲಾಖೆಗಳ ಸಹಕಾರದೊಂದಿಗೆ ಈ ಗ್ರಂಥಾಲಯ, ಗ್ರಾಮೀಣ ಜನರಲ್ಲಿ ವಯಸ್ಕರ ಶಿಕ್ಷಣ, ಕುಟುಂಬ ಕಲ್ಯಾಣಗಳ ಬಗ್ಗೆ ಅರಿವು ಮೂಡಿಸುತ್ತದೆ.

ಎಲ್ಲಾ ಕಾಲೇಜುಗಳಲ್ಲೂ ಇತರ ಶೈಕ್ಷಣಿಕ ಸಂಸ್ಥೆಗಳಲ್ಲೂ ಗ್ರಂಥಾಲಯಗಳಿವೆ. ಮಡಿಕೇರಿ ಸರಕಾರೀ ಜೂನಿಯರ್ ಕಾಲೇಜಿನ ಗ್ರಂಥಾಲಯವು 19ನೇ ಶತಮಾನದ ಉತ್ತರಾರ್ಧದಲ್ಲಿ ಸೆಂಟ್ರಲ್ ಸ್ಕೂಲಿನಲ್ಲಿ ಸ್ಥಾಪಿಸಲಾದ ಗ್ರಂಥಾಲಯವಾಗಿದ್ದು ಇಲ್ಲಿ ತೀರ ಹಳೆಯ ಪುಸ್ತಕಗಳ ಉತ್ತಮ ಸಂಗ್ರಹವಿದೆ. ಕೊಡಗಿನ ಕಾಫಿ ತೋಟಗಾರರನೇಕರು ಖಾಸಗಿಯಾಗಿ ಉತ್ತಮ ಗ್ರಂಥಾಲಯಗಳನ್ನು ಹೊಂದಿದ್ದು ಇಂಥ ಗ್ರಂಥಾಲಯಗಳು ಕೊಡಗಿನಲ್ಲಿ ವಿಪುಲ ಸಂಖ್ಯೆಯಲ್ಲಿ ಇವೆ.

**ದೈಹಿಕ ಶಿಕ್ಷಣ :** ಕೊಡಗು ಜಿಲ್ಲೆ ಮೊದಲಿನಿಂದಲೂ ದೈಹಿಕ ಶಿಕ್ಷಣ, ವ್ಯಾಯಾಮ ಮತ್ತು ಕ್ರೀಡೆಗಳಿಗೆ ಹೆಸರುವಾಸಿಯಾಗಿದ್ದು, ಪ್ರೈಮರಿ ಹಾಗೂ ಸೆಕೆಂಡರಿ ತರಗತಿಗಳಲ್ಲಿ ದೈಹಿಕ ಶಿಕ್ಷಣಕ್ಕೆ ಹೆಚ್ಚು ಪ್ರಾಧಾನ್ಯತೆ ಇದ್ದಿತು. ಇದು ಕಡ್ಡಾಯವಾದ ಸಾಂಪ್ರದಾಯಿಕ ಶಿಕ್ಷಣ ವಿಷಯವಲ್ಲದಿದ್ದರೂ ಎಲ್ಲಾ ಶಾಲೆಗಳಲ್ಲಿ ಬೋಧಿಸಲ್ಪಡುತ್ತಿತ್ತು. 1929 ರಲ್ಲಿ ಪ್ರೈಮರಿ ಶಾಲೆಗಳಲ್ಲಿ ದೈಹಿಕ ಶಿಕ್ಷಣವನ್ನು ಕಡ್ಡಾಯಗೊಳಿಸಲಾಯಿತು. ರಾಜ್ಯ ಪುನರ್ವಿಂಗಡನೆಯ ತರುವಾಯ ಪರಿಷ್ಕೃತ ಪಠ್ಯಕ್ರಮದಲ್ಲಿ ದೈಹಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಲಾಯಿತು. ಪ್ರೈಮರಿ ಹಾಗೂ ಸೆಕೆಂಡರಿ ಹಂತಗಳಲ್ಲಿ ಅದನ್ನು ವಾರದ ಕಾಲಕೋಷ್ಟದಲ್ಲಿ ಸೇರಿಸಿ, ಅದಕ್ಕಾಗಿ ನಿರ್ದಿಷ್ಟ ಸಮಯವನ್ನು ನೀಡಲಾಯಿತು. ಇದೇ ಸಮಯಕ್ಕೆ ರಾಜ್ಯಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ದೈಹಿಕ ಶಿಕ್ಷಣ ಅಧೀಕ್ಷಕರ ನಿಯೋಜನೆಯಿಂದಾಗಿ ಈ ಯೋಜನೆ ನಿರ್ದಿಷ್ಟ ಸ್ವರೂಪ ಪಡೆಯಿತು.

## ಕ್ರೀಡೆ

ಅನಾದಿಕಾಲದಿಂದಲೂ ಕ್ರೀಡೆಗಳು ಮಾನವನ ಜೀವನದ ಅವಿಭಾಜ್ಯ ಅಂಗಗಳಾಗಿದ್ದು, ಈ ಸಾಂಪ್ರದಾಯಿಕ ಕಲೆಯನ್ನು ಮಾನವ ತನ್ನ ದಿನನಿತ್ಯ ಜೀವನದಲ್ಲಿ ರೂಢಿಸಿಕೊಂಡು ಬಂದಿದ್ದಾನೆ. ಜನರ ವೈಯಕ್ತಿಕ ಹಾಗೂ ಸಾಮಾಜಿಕ ಜೀವನಕ್ಕೆ ಪೂರಕವಾದ ಈ ಕಲೆಗಳು, ಅವರ ಬಿಡುವು ಕಾಲವನ್ನು ಉಪಯುಕ್ತವಾಗಿಯೂ, ಸಂತೋಷಕರವಾಗಿಯೂ ಕಳೆಯಲು, ಹಾಗೂ ಅವರ ದೈಹಿಕ ಮತ್ತು ಮಾನಸಿಕ ಆರೋಗ್ಯವರ್ಧನೆಗೆ ಉತ್ತಮ ಮಾರ್ಗಗಳಾಗಿವೆ. ಕೊಡಗಿನ ವಿಶೇಷ ಕ್ರೀಡೆಗಳಾದ 'ಶಕ್ತಿಕೋಲು' (ನೆಲದ ಮೇಲೆ ಕಾಲಿಗೆ ಕಾಲು ಒತ್ತುಕೊಟ್ಟು ಕುಳಿತ ಇಬ್ಬರು ಒಂದು ದೊಣ್ಣೆಯನ್ನು ತಮ್ಮೆಡೆಗೆ ಎಳೆದುಕೊಳ್ಳುವಾಟ), 'ತಾರು-ಚಿಣ್ಣಿ' (ಹಳೆ ಮೈಸೂರು ಕಡೆಯ 'ಗಿಲ್ಲಿ-ದಾಂಡು' ಆಟದಂತೆ; ಸಾಮಾನ್ಯವಾಗಿ ದನ-ಕುರಿ ಕಾಯುವ ಹುಡುಗರ ಆಟ), 'ಕಲ್ಲೆತ್ತು ಆಟ' (ಊರ ದೇವರ ಮುಂದು ಬಳಿ ಇಡಲ್ಪಡುವ ಭಾರಿ ಗಾತ್ರದ ಕಲ್ಲನ್ನು ಎತ್ತಿ, ಶಕ್ತಿ ಪ್ರದರ್ಶನ ಮಾಡುವಾಟ) ಮತ್ತು 'ಪೀರೆ ಪಡೆ' (ಎದುರು ಬದುರಾಗಿ ನಿಂತ ಜನ ತರಕಾರಿಗಳನ್ನು ಎಸೆದುಕೊಂಡು ಅವುಗಳ ಏಟನ್ನು ತಪ್ಪಿಸಿಕೊಂಡು ಆಡುವಾಟ) ಇವು ಬಹಳ ಜನಪ್ರಿಯ ಆಟಗಳಾಗಿದ್ದು, ಇವುಗಳಲ್ಲಿ ಕೆಲವು ಈಚೀಚೆಗೆ ರೂಢಿಯಲ್ಲಿಲ್ಲದೇ ಹೋಗುತ್ತಿವೆ. ಆದರೆ ಸೂರ್ಯನಮಸ್ಕಾರ, ಯೋಗಾಸನಾದಿ ಕ್ರೀಡಾ ಪ್ರಕಾರಗಳು ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲಿಯೂ ರೂಢಿಗೆ ಬಂದಿದ್ದು, ಹೆಣ್ಣು-ಗಂಡು ಭೇದವಿಲ್ಲದೆ ಎಲ್ಲಾ ವಯಸ್ಸಿನವರೂ ಇವನ್ನು ತಮ್ಮ ಮನೆಗಳಲ್ಲಿಯೇ ಅಭ್ಯಾಸ ಮಾಡುತ್ತ, ತಮ್ಮ ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆ. (ಜಾನಪದ ಕ್ರೀಡೆಗಳ ಬಗ್ಗೆ ಮುಂದಿನ ಅಧ್ಯಾಯ ನೋಡಿ).

ಜಿಲ್ಲೆಯಲ್ಲಿ ಪ್ರಸ್ತುತ ಕ್ರೀಡಾ ಚಟುವಟಿಕೆಗಳು ಚುರುಕಿನಿಂದ ನಡೆಯುತ್ತಿದ್ದು, ಹಲವಾರು ಸರಕಾರೀ ಮತ್ತು ಖಾಸಗಿ ಸಂಸ್ಥೆಗಳು ಇವುಗಳ ಪ್ರವರ್ಧಮಾನಕ್ಕೆ ಶ್ರಮಿಸುತ್ತಿವೆ. ಕರ್ನಾಟಕ ಸರಕಾರದ ಯುವಜನ ಸೇವಾ ಮತ್ತು ಕ್ರೀಡಾ

ಇಲಾಖೆ, ನೆಹರು ಯುವಕೇಂದ್ರ ಹಾಗೂ ರೋಟರಿ ಮತ್ತು ಲಯನ್ಸ್ ಕ್ಲಬ್‌ಗಳಂತಹ ಖಾಸಗೀ ಸಂಸ್ಥೆಗಳೂ ಕ್ರೀಡಾಸಕ್ತ ಯುವಕ-ಯುವತಿಯರಲ್ಲಿನ ಸುಪ್ತ ಕ್ರೀಡಾ ಪ್ರತಿಭೆ ಹೊರ ಹೊಮ್ಮಿಸಲು ಯೋಜನೆಗಳನ್ನು ರೂಪಿಸಿಕೊಂಡಿವೆ. ತಾಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟಗಳಲ್ಲಿ ವಿವಿಧ ಕ್ರೀಡೆಗಳ ಮತ್ತು ಆಟೋಟಗಳ ಸ್ಪರ್ಧೆಗಳನ್ನೇರ್ಪಡಿಸುವ ಮೂಲಕ ಜನರಲ್ಲಿ ಕ್ರೀಡಾಸಕ್ತಿ ಬೆಳೆಸಲು ದುಡಿಯುತ್ತಿವೆ.

**ಜಿಲ್ಲಾ ಯುವಜನ ಸೇವಾ ಇಲಾಖೆ**

ಮಡಿಕೇರಿಯ ಮ್ಯಾನ್ಸ್ ಕ್ರೀಡಾಂಗಣದಲ್ಲಿ 1974ರಲ್ಲಿ ಪ್ರಾರಂಭವಾದ ಈ ಸಂಸ್ಥೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಯ ಮತ್ತು ತಾಲೂಕು ಮಟ್ಟದಲ್ಲಿ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಯ ಆಡಳಿತಕ್ಕೊಳಪಡುತ್ತದೆ. ಈ ಇಲಾಖೆ ಜಿಲ್ಲಾ ಹಾಗೂ ತಾಲೂಕು ಮಟ್ಟಗಳಲ್ಲಿ ಸಾಮಾಜಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳನ್ನು ನಡೆಸುತ್ತದೆ. ಸಾಮಾಜಿಕ ಚಟುವಟಿಕೆಗಳಡಿ ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಯೋಜನೆ ಮತ್ತು ಎನ್.ಎಸ್.ಎಸ್.. ಸಾಂಸ್ಕೃತಿಕ ಚಟುವಟಿಕೆಗಳಡಿ ಜಾನಪದ ನೃತ್ಯ, ಹಾಡು ಮತ್ತು ಯುವಜನ ಮೇಳ, ಹಾಗೂ ಕ್ರೀಡಾ ಚಟುವಟಿಕೆಗಳಡಿ ದಸರಾ ಕ್ರೀಡೆಗಳು, ಸ್ವಾತಂತ್ರ್ಯ ದಿನೋತ್ಸವಕ್ರೀಡೆಗಳು, ಗ್ರಾಮೀಣ ಕ್ರೀಡೆಗಳು, ಮಹಿಳಾ ಕ್ರೀಡೆಗಳು, ಕನ್ನಡ ರಾಜ್ಯೋತ್ಸವ ಕ್ರೀಡೆಗಳು, ಗಣರಾಜ್ಯೋತ್ಸವ ಕ್ರೀಡೆಗಳು, ಅಖಿಲ ಭಾರತ ಸಿವಿಲ್ ಸರ್ವಿಸ್ ಕ್ರೀಡೆಗಳು, ಯುವಕ ಯುವತಿ ಮಂಡಲಿಗಳ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಗುಂಪು ಕ್ರೀಡೆಗಳು, ಇವೇ ಮೊದಲಾದ ಕಾರ್ಯಕ್ರಮಗಳನ್ನು ಇಲಾಖೆ ನಡೆಸುತ್ತದೆ. ಆಸಕ್ತ ಕ್ರೀಡಾಪಟುಗಳಿಗೆ ವಾಲಿಬಾಲ್, ಹಾಕಿ, ಫುಟ್‌ಬಾಲ್, ಬಾಸ್ಕೆಟ್‌ಬಾಲ್ ಮತ್ತು ಇತರೆ ಕ್ರೀಡೆಗಳಲ್ಲಿ ತರಬೇತಿ ನೀಡುವುದೇ ಅಲ್ಲದೆ ಹೋಬಳಿ ತಾಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ವಾಲಿಬಾಲ್, ಕ್ರಿಕೆಟ್ ಮತ್ತು ಹಾಕಿ ಪಂದ್ಯಾವಳಿಗಳನ್ನು ಇಲಾಖೆ ನಡೆಸುತ್ತದೆ. ಎಂಟರಿಂದ ಹದಿನಾಲ್ಕನೇ ವಯಸ್ಸಿನ ಮಕ್ಕಳಿಗೆ ರಾಷ್ಟ್ರೀಯ ಪ್ರತಿಭಾ ಹಾಗೂ ಕ್ರೀಡಾ ಪಂದ್ಯಗಳನ್ನು ಕ್ರೀಡಾಯೋಜನೆಯ ಅಭಿವೃದ್ಧಿಯಡಿ ವಿವಿಧ ಕ್ರೀಡಾ ಘಟಕಗಳನ್ನು ಇಲಾಖೆ ಏರ್ಪಡಿಸುತ್ತದೆ. ಪಂದ್ಯಾವಳಿಗಳನ್ನು ನಡೆಸಲು ಮತ್ತು ಕ್ರೀಡೋಪಕರಣಗಳನ್ನು ಖರೀದಿಸಲು ವರ್ಷಂಪ್ರತಿ 7,000 ರೂ.ಗಳನ್ನು ಇಲಾಖೆ ವಿವಿಧ ಸಂಸ್ಥೆಗಳಿಗೆ ನೀಡುತ್ತದೆ. ಗ್ರಾಮೀಣ ಕ್ರೀಡಾ ಚಟುವಟಿಕೆಗಳ ಅಭಿವೃದ್ಧಿ ಹಾಗೂ ಮೇಲ್ವಿಚಾರಣೆಗಾಗಿ ಒಟ್ಟು 136 ಯುವಕ ಮಂಡಲಿಗಳು (ಮಡಿಕೇರಿ 51, ಸೋಮವಾರಪೇಟೆ 59 ಮತ್ತು ವೀರರಾಜಪೇಟೆ 26), 29 ಯುವತಿ ಮಂಡಲಿಗಳು (ಮಡಿಕೇರಿ 12, ಸೋಮವಾರಪೇಟೆ ಏಳು, ವೀರರಾಜಪೇಟೆ 16) ಹಾಗೂ 20 ಹವ್ಯಾಸಿ ತಂಡಗಳು(ಮಡಿಕೇರಿ ಒಂಭತ್ತು, ಸೋಮವಾರಪೇಟೆ ಐದು, ವೀರರಾಜಪೇಟೆ ಆರು) ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯಪ್ರವೃತ್ತವಾಗಿವೆ.

**ನೆಹರು ಯುವ ಕೇಂದ್ರ**

ಭಾರತ ಸ್ವಾತಂತ್ರ್ಯೋತ್ಸವದ ಬೆಳ್ಳಿ ಹಬ್ಬದ ಪ್ರಯುಕ್ತ 1972ರಲ್ಲಿ ದೇಶದಾದ್ಯಂತ ಒಟ್ಟು 80 ಯುವ ಕೇಂದ್ರಗಳನ್ನು ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಸಚಿವಾಲಯ ಪ್ರಾರಂಭಿಸಿತು. ಇಂತಹ ಒಂದು ಕೇಂದ್ರ ಮಡಿಕೇರಿಯಲ್ಲಿ 1977ರಲ್ಲಿ ಪ್ರಾರಂಭವಾಯಿತು. 1988ರಲ್ಲಿ ನೆಹರು ಯುವ ಕೇಂದ್ರವಾಗಿ ಪರಿವರ್ತನೆಗೊಂಡು ಸ್ವತಂತ್ರ ಸಂಘಟನೆಯಾಯಿತು. ಗ್ರಾಮೀಣ ವಿದ್ಯಾರ್ಥಿಯೇತರ ಯುವಜನರ ಸಂಘಟನೆಯ ಮೂಲಕ ಗ್ರಾಮೀಣಾಭಿವೃದ್ಧಿ, ಯುವಜನರ ಶಕ್ತಿ ಸಾಮರ್ಥ್ಯ ವರ್ಧನೆ, ಬಡತನ ಮತ್ತು ಇತರ ಸಾಮಾಜಿಕ ಪಿಡುಗುಗಳ ನಿರ್ಮೂಲನೆ, ವೈಯಕ್ತಿಕ ಮತ್ತು ಗ್ರಾಮೀಣ ಮಟ್ಟಗಳಲ್ಲಿ ಸಾಮಾಜಿಕ, ನೈತಿಕ ಹಾಗೂ ಆಧ್ಯಾತ್ಮಿಕವಾಗಿ ಸರ್ವತೋಮುಖ ಅಭಿವೃದ್ಧಿ, ಸಹಕಾರ ಮತ್ತು ಸೇವೆಯ ಮೂಲಕ ಸ್ವಾವಲಂಬನೆ – ಇವೇ ಮುಂತಾದ ಧ್ಯೇಯೋದ್ದೇಶಗಳನ್ನು ಕೇಂದ್ರವು ಹೊಂದಿದೆ.

ಸೈಕಲ್ ಪ್ರವಾಸ, ಯುವಜನ ತರಬೇತಿ ಶಿಬಿರ, ವಯಸ್ಕರ ಶಿಕ್ಷಣ, ವೃತ್ತಿ ತರಬೇತಿ ಶಿಕ್ಷಣ, ಶ್ರಮದಾನ ಶಿಬಿರ, ಮೊದಲಾದ ಕಾರ್ಯಕ್ರಮಗಳನ್ನೂ ಕೇಂದ್ರ ಹಮ್ಮಿಕೊಂಡಿದೆ. 1989ರಲ್ಲಿ ಲಕ್ಷದ್ವೀಪದಲ್ಲಿ ನಡೆದ ಸಾಹಸ ಕಾರ್ಯಕ್ರಮಕ್ಕೆ ಈ ಕೇಂದ್ರದಿಂದ ಜಿಲ್ಲೆಯ ಐದು ಯುವಕರನ್ನು ಕಳುಹಿಸಿಕೊಡಲಾಗಿತ್ತು. ಕೇಂದ್ರದ ಕಚೇರಿ ಹಾಗೂ ಕಾರ್ಯಕ್ರಮಗಳನ್ನು ನಡೆಸಲು ಕೇಂದ್ರ ಸರಕಾರದ ಅನುದಾನ ದೊರೆಯುತ್ತದೆ. ಇದರೊಂದಿಗೆ ದಾನಿಗಳ ಸಹಕಾರವೂ ದೊರೆಯುತ್ತದೆ. ಖಾಸಗಿ ಯುವಕ ಸಂಘಗಳು ಪ್ರಾರಂಭವಾದ ಎರಡು ವರ್ಷಗಳ ನಂತರ ನೆಹರು ಯುವ ಕೇಂದ್ರದೊಡನೆ ನೋಂದಾಯಿಸಿಕೊಂಡರೆ ಅವುಗಳಿಗೆ 2,000 ರೂ.ಗಳ ಅನುದಾನ ನೀಡಲಾಗುತ್ತದೆ.

ಕ್ರೀಡಾಕ್ಷೇತ್ರದಲ್ಲಿ ಕೊಡಗು ಜಿಲ್ಲೆ ಮುಂಚೂಣಿಯಲ್ಲಿದ್ದು, ಇದರ ಕ್ರೀಡಾಮಟ್ಟ ವಿಶ್ವಮಾನ್ಯವಾಗಿದೆ. ರಾಜ್ಯದ ಪ್ರಮುಖ ಹಾಕಿ ತಂಡಗಳಾದ ಎಂ.ಇ.ಜಿ., ಪಿ.ಟಿ.ಐ., ಕೆ.ಎಸ್.ಆರ್.ಪಿ., ಕೆನರಾ, ಬೆಮೆಲ್, ಎಸ್.ಎ.ಐ., ಮೈಕೋ ಮುಂತಾದ ತಂಡಗಳಲ್ಲಿ ಕೊಡಗಿನವರದೇ ಸಿಂಹಪಾಲು.

ಜಿಲ್ಲೆಯಲ್ಲಿರುವ ಪ್ರತ್ಯೇಕ ಹಾಕಿ ತಂಡ ರಾಷ್ಟ್ರದ ಉತ್ತಮ ಹಾಕಿ ತಂಡಗಳಲ್ಲಿ ಒಂದಾಗಿದೆ. ಬಾಲಕಿಯರ ಹಾಕಿ ತಂಡವೂ ಸಹ ಜಿಲ್ಲೆಯಲ್ಲಿದ್ದು, ಪ್ರತೀವರ್ಷ ರಾಷ್ಟ್ರೀಯ ಮಟ್ಟದ ಜನರಲ್ ಕಾರ್ಯಪ್ಪ ಅಡ್ವಾನ್ಸ್ ಹಾಕಿ ಪಂದ್ಯಾಟ ನಡೆಸುತ್ತದೆ. ಸೋಮವಾರಪೇಟೆಯ 'ಬ್ಲೂಸ್ಟಾರ್ ಹಾಕಿ ಕ್ಲಬ್' ಹಾಕಿ ಆಟದಲ್ಲಿ ಸಾರ್ವಜನಿಕರಲ್ಲಿ ಉತ್ಸಾಹ ಕುಗ್ಗದಂತೆ ಮಾಡಲು ಹಾಕಿ ಪಂದ್ಯಾಟಗಳನ್ನು ನಡೆಸುತ್ತದೆ. ಕಬಡ್ಡಿ ಆಟದಲ್ಲಿಯೂ ಜಿಲ್ಲೆ ಹಿಂದೆ ಬಿದ್ದಿಲ್ಲ. ಮಡಿಕೇರಿಯ 'ವಿನಾಯಕ ಸಂಘ' ವರ್ಷಂಪ್ರತಿ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿಗಳನ್ನು ನಡೆಸುವುದರ ಮೂಲಕ ಕಬಡ್ಡಿ ಆಟದ ಬೆಳವಣಿಗೆಗೆ ಸೂಕ್ತ ಪರಿಸರ ಕಲ್ಪಿಸಿದೆ. 'ಯಂಗ್ ಛಾಲೆಂಜರ್ಸ್' ಯುವಕ ಸಂಘ ವಾಲಿಬಾಲ್ ಆಟದ ಪ್ರಗತಿಗಾಗಿ ಶ್ರಮಿಸುತ್ತಿದೆ. ಜೇಸೀಸ್ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮುಂತಾದ ಸಂಸ್ಥೆಗಳು ಟೇಬಲ್ ಟೆನ್ನಿಸ್ ಪಂದ್ಯಾಟಗಳನ್ನು ನಡೆಸುತ್ತವೆ. ಜನಪ್ರಿಯ ಕ್ರಿಕೆಟ್ ತಂಡವಾದ 'ಕೂರ್ಗ್ ವಂಡರ್ಸ್' ಕೊಡಗಿನ ಹಳೆಯ ಕ್ರಿಕೆಟ್ ಸಂಸ್ಥೆ. ಮಡಿಕೇರಿಯಲ್ಲಿ ಕೆಲಕಾಲದ ಹಿಂದೆ ಅಸ್ತಿತ್ವದಲ್ಲಿದ್ದ 'ಹರ್ಕ್ಯುಲಿಸ್ ಜಿಮ್ನಾಸ್ಟಿಕ್ಸ್' ವ್ಯಾಯಾಮಶಾಲೆ ಹಲವಾರು ರಾಷ್ಟ್ರಮಟ್ಟದ ವ್ಯಾಯಾಮ ಪಟುಗಳನ್ನು ತಯಾರು ಮಾಡಿದೆ. ಮಡಿಕೇರಿಯ ಕಿರಿಯ ಕಾಲೇಜಿನ ಮೈದಾನದಲ್ಲಿ ಈಜುಕೊಳವೊಂದಿದ್ದು, ಈಗ ಇದರ ದುರಸ್ತಿ ಕಾರ್ಯ ನಡೆದಿದೆ.

### ಕ್ರೀಡಾಂಗಣಗಳು

ಮಡಿಕೇರಿಯ ಮ್ಯಾನ್ಸ್ ಕಾಂಪೌಂಡಿನಲ್ಲಿರುವ ಎಂಟು ಎಕರೆ ಪ್ರದೇಶದ ಕ್ರೀಡಾ ಮೈದಾನ, ನಾಪೋಕ್ಲು, ಸೋಮವಾರಪೇಟೆ, ವೀರರಾಜಪೇಟೆಗಳ ಮಿನಿ ಕ್ರೀಡಾಂಗಣಗಳನ್ನೂ ಸೇರಿಸಿ, ಜಿಲ್ಲೆಯಲ್ಲಿ ಒಟ್ಟು 43 ವಿವಿಧ ಕ್ರೀಡಾಂಗಣಗಳಿವೆ. ಗಾಳಿಬೀಡಿನ ಕರ್ನಾಟಕ ಪ್ರವಾಸೋದ್ಯಮದ ಗಾಲ್ಫ್ ಕ್ರೀಡಾಂಗಣ, ಕಡಗದಾಳಿನ ಖಾಸಗಿ ಕ್ಲೋವರ್‌ಬರ್ನ್ ಗಾಲ್ಫ್ ಕ್ರೀಡಾಂಗಣ, ಬೇಲೂರ್ ಸ್ಪೆಷಲ್ ಕ್ಲಬ್ ಗಾಲ್ಫ್ ಕ್ರೀಡಾಂಗಣ, ಸೋಮವಾರಪೇಟೆ ಮತ್ತು ಪೊಲ್ಲಿಬೆಟ್ಟಗಳ ಖಾಸಗಿ ಗಾಲ್ಫ್ ಕ್ರೀಡಾಂಗಣಗಳೂ ಈ ಸಂಖ್ಯೆಯಲ್ಲಿ ಸೇರಿವೆ.

ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ಮೇಲೆ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಕ್ರಮ ತೆಗೆದುಕೊಳ್ಳಲಾಗಿದೆ. ಇದಕ್ಕಾಗಿ ಯುವಜನ ಸೇವಾ ಇಲಾಖೆ 10 ಲಕ್ಷ ರೂ.ಗಳನ್ನು ನೀಡಿದ್ದು ಈಗಾಗಲೇ 2 ಲಕ್ಷ ರೂ. ಮಂಜೂರಾಗಿದೆ. ಕ್ರೀಡಾ ಪ್ರತಿಭೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ದೇಶದ ಹತ್ತು ಜಿಲ್ಲೆಗಳನ್ನು ಗುರುತಿಸಲಾಗಿದ್ದು, ದಕ್ಷಿಣ ಭಾರತದಿಂದ ಈ ಯೋಜನೆಯಡಿ ಕೊಡಗು ಜಿಲ್ಲೆಯನ್ನು ಆಯ್ಕೆ ಮಾಡಲಾಗಿದೆ. ಮಡಿಕೇರಿಯ ಸರಕಾರಿ ಕಾಲೇಜ್ ಮೈದಾನದಲ್ಲಿ ಆಸ್ಟ್ರೋ-ಟರ್ಫ್ ಹಾಕಿ ಮೈದಾನ ರಚನೆಗೆ ಸಿದ್ಧತೆಗಳು ನಡೆಯುತ್ತಿವೆ. ಜಿಲ್ಲೆಯ ಅಂತರರಾಷ್ಟ್ರೀಯ ಖ್ಯಾತಿಯ ಕೆಲವು ಕ್ರೀಡಾ ಪಟುಗಳ ವಿವರ ಇಲ್ಲಿ ನೀಡಲಾಗಿದೆ.

1. **ಹಾಕಿ : ಎಂ. ಪಿ. ಗಣೇಶ್ :** ಜಿಲ್ಲೆಯ ಉತ್ತಮ ಹಾಕಿ ಪಟುವಾದ ಇವರು 1970ರಲ್ಲಿ ಬ್ಯಾಂಕಾಕ್‌ನಲ್ಲಿ ನಡೆದ ಏಷ್ಯನ್ ಕ್ರೀಡೆಗಳಲ್ಲಿ, 1971ರ ಬಾರ್ಸಿಲೋನ ವರ್ಲ್ಡ್ ಕಪ್ ಹಾಕಿಯಲ್ಲಿ, 1972ರ ಮ್ಯೂನಿಚ್ ಒಲಂಪಿಕ್ಸ್‌ನಲ್ಲಿ, 1974ರ ಟೆಹೆರಾನ್ ಏಷ್ಯಾಡ್‌ನಲ್ಲಿ, ಭಾರತವನ್ನು ಪ್ರತಿನಿಧಿಸಿದ್ದರು. 1973ರಲ್ಲಿ ಆ್ಯಂಸ್ಟರ್‌ಡ್ಯಾಂನಲ್ಲಿ ನಡೆದ ಹಾಕಿ ಪಂದ್ಯದಲ್ಲಿ ಭಾರತ ತಂಡದ ನಾಯಕರಾಗಿದ್ದರು. 1972ನೇ ಸಾಲಿನ ಹಾಕಿಯಲ್ಲಿ ಪ್ರಪಂಚದ ಅತ್ಯುತ್ತಮ ಹನ್ನೊಂದು (ವರ್ಲ್ಡ್ 11) ಮಂದಿಯಲ್ಲಿ ಒಬ್ಬರಾಗಿದ್ದರು. 1970 ಹಾಗೂ 1974ರಲ್ಲಿ ಏಷ್ಯನ್ ಸ್ಟಾರ್ ಟೀಂನ ಸದಸ್ಯರಾಗಿದ್ದು 1973ರಲ್ಲಿ ಅರ್ಜುನ ಪ್ರಶಸ್ತಿಯನ್ನು ಪಡೆದರು. 1980ರ ಮಾಸ್ಕೋ ಒಲಂಪಿಕ್ಸ್‌ನಲ್ಲಿ ಚಿನ್ನದ ಪದಕ ಗಳಿಸಿದ ಭಾರತದ ತಂಡಕ್ಕೆ ಕೋಚ್ ಆಗಿದ್ದರು.

**ಬಿ. ಪಿ. ಗೋವಿಂದ :** ನುರಿತ ಹಾಕಿ ಆಟಗಾರರಾದ ಇವರು, 1972ರ ಮ್ಯೂನಿಚ್ ಹಾಗೂ 1976ರ ಮೆಲ್‌ಬೋರ್ನ್ ಒಲಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. 1972ರ ವರ್ಲ್ಡ್ 11ರಲ್ಲಿ ಒಬ್ಬರಾಗಿದ್ದ ಗೋವಿಂದ, 1977ರಲ್ಲಿ ಅರ್ಜುನ ಪ್ರಶಸ್ತಿ ಪಡೆದರು. 1970ರಲ್ಲಿ ಬ್ಯಾಂಕಾಕ್, 1974ರ ಟೆಹೆರಾನ್ ಏಷ್ಯನ್ ಕ್ರೀಡಾಕೂಟಗಳಲ್ಲಿ ಭಾರತದ ಪರವಾಗಿ ಆಡಿದ್ದು, 1978ರ ಏಷ್ಯನ್ ಕ್ರೀಡೆಗಳಲ್ಲಿ ಭಾರತ ತಂಡದ ನಾಯಕತ್ವ ವಹಿಸಿದ್ದರು.

**ಸೋಮಯ್ಯ :** 1975ರಲ್ಲಿ ರಾಷ್ಟ್ರೀಯ ಜ್ಯೂನಿಯರ್ ತಂಡದಲ್ಲಿ ಭಾಗವಹಿಸುವುದರೊಂದಿಗೆ ಹಾಕಿ ಕ್ರೀಡೆಗೆ ಕಾಲಿಟ್ಟ ಇವರು, 1980ರ ಮಾಸ್ಕೋ ಒಲಂಪಿಕ್ಸ್, 1981ರ ಮುಂಬೈ ವಿಶ್ವಕಪ್ ಹಾಕಿ, 1982ರ ದೆಹಲಿ ಏಷ್ಯನ್ ಕ್ರೀಡೆ, 1984ರ ಲಾಸ್ ಏಂಜಲಿಸ್ ಒಲಂಪಿಕ್ ಕ್ರೀಡೆಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

ಜಿಲ್ಲೆಯ ಇತರ ಹೆಸರಾಂತ ಹಾಕಿ ಪಟುಗಳೆಂದರೆ : 1) ಬಿ.ಕೆ. ಸುಬ್ರಮಣಿ (1988-89 ಸಿಯೋಲ್ ಒಲಿಂಪಿಕ್ಸ್ ಮತ್ತು ಏಷಿಯಾಡ್), 2) ಎ.ಬಿ. ಸುಬ್ಬಯ್ಯ (ಏಷಿಯಾಡ್ ಮತ್ತು ಒಲಿಂಪಿಕ್ಸ್), 3) ವಿನೋದ್ ಚಿನ್ನಪ್ಪ (1989 ಬರ್ಲಿನ್), 4) ಪಿ. ಇ. ಕಾಳಯ್ಯ (ಆಸ್ಟ್ರೇಲಿಯಾ), 5) ಬಿ. ಎ. ಚೆಂಗಪ್ಪ (ಸ್ವೀಡನ್-1989), 6) ಕೆ.ಎಸ್. ಉತ್ತಯ್ಯ (ಸ್ವೀಡನ್-1989), 7) ಸಿ. ಎಸ್. ಪೂಣಚ್ಚ (ಸ್ವೀಡನ್-1989), 8) ಬಿ.ಎನ್. ಹೇಮಲತ (ಬೀಜಿಂಗ್-ಏಷಿಯಾಡ್), 9) ಎಂ.ಡಿ. ಕಾವೇರಿಯಪ್ಪ, 10) ಎಂ.ಎ. ಅಪ್ಪಯ್ಯ, 11) ಎಂ. ಎಸ್. ಪೋನಪ್ಪ, 12) ಮಲ್ಲು ಅಯ್ಯಪ್ಪ, 13) ಅಮ್ಮಂಡ ವಾಸು, 14) ಬೋವೆರಿಯಂಡ ಕುಟ್ಟಪ್ಪ, 15) ದೇಚು ಅಪ್ಪಯ್ಯ, 16) ಚೆರಿ ಚಿಟ್ಟಿಯಣ್ಣ, 17) ಇತ್ತೀಚೆಗೆ ನಿಧನ ಹೊಂದಿದ ಹಾಕಿ ಕೋಚ್ ಮತ್ತು ಆಟಗಾರ ಕೆ.ಕೆ. ಪೂಣಚ್ಚ.

2. ಅಥ್ಲೆಟಿಕ್ಸ್ : ಅಥ್ಲೆಟಿಕ್ಸ್‌ಗೆ ಕೊಡಗಿನ ಕೊಡುಗೆ ಅಪಾರ. ನಿರ್ಮಲಾ ಉತ್ತಯ್ಯ, ಕೆ.ಕೆ ಗಂಗಮ್ಮ-ಸೀತಮ್ಮ ಸಹೋದರಿಯರು, ರೀತ್-ಸೀತ್ ದೇವಯ್ಯ ಸಹೋದರಿಯರು, ಪುಷ್ಪ-ಅಶ್ವಿನಿ ನಾಚಪ್ಪ ಸಹೋದರಿಯರು, ಮಾಚಮ್ಮ ಮತ್ತು ಇತ್ತೀಚಿನ ಕುಪ್ಪಂಡ ಕೆ. ಗೀತಾ-ಇವರೆಲ್ಲ ರಾಷ್ಟ್ರೀಯ ಮಟ್ಟದ ಓಟಗಾರ್ತಿಯರು.

**ಅಶ್ವಿನಿ ನಾಚಪ್ಪ :** ತನ್ನ 12ನೇ ವಯಸ್ಸಿಗೇ ಅಖಿಲ ಭಾರತ ಜೂನಿಯರ್ ಓಟದ ಪಂದ್ಯದಲ್ಲಿ ಪ್ರಥಮ ಸ್ಥಾನ ಗಳಿಸಿದ ಅಶ್ವಿನಿ, ಈಗ ಭಾರತದ ಕ್ರೀಡಾ ಜಗತ್ತಿನ ತಾರೆ ಪಿ.ಟಿ.ಉಷಾರನ್ನು ಎರಡು ಬಾರಿ ಸೋಲಿಸಿ, ದಾಪುಗಾಲು ಹಾಕಿ ಮುನ್ನಡೆದಿರುವ ಕೊಡಗಿನ ಮಹಿಳೆ. ಅರ್ಜುನ ಪ್ರಶಸ್ತಿ ವಿಜೇತೆಯಾದ ಈಕೆ ತಮ್ಮ ಕ್ರೀಡಾ ಜೀವನವನ್ನೇ ಆಧರಿಸಿ ನಿರ್ಮಿತವಾಗಿರುವ ಚಲನಚಿತ್ರದ ಮೂಲಕ ಚಿತ್ರರಂಗದಲ್ಲಿಯೂ ಮಿಂಚಿದ್ದಾರೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಈಕೆಯ ಸಾಧನೆ ಮಹತ್ವದ್ದಾಗಿದೆ. 1984ರ ನೇಪಾಳದ ಸೌತ್ ಏಷ್ಯನ್ ಫೆಡರೇಷನ್ ಗೇಮ್ಸ್, 1985ರ ಜಕಾರ್ತಾದ ಏಷ್ಯನ್ ಫೀಲ್ಡ್ ಮತ್ತು ಟ್ರ್ಯಾಕ್ ಈವೆಂಟ್ಸ್, 1985ರ ಬಾಂಗ್ಲಾ ದೇಶದ ಎಸ್.ಎ.ಎಫ್. ಗೇಮ್ಸ್, 1986ರ ಸಿಯೋಲ್ ಏಷ್ಯನ್ ಗೇಮ್ಸ್, 1987ರ ಸಿಂಗಪುರದ ಏಷ್ಯನ್ ಟ್ರ್ಯಾಕ್ ಮತ್ತು ಫೀಲ್ಡ್ ಈವೆಂಟ್ಸ್, 1987ರ ರೋಂನ ವಿಶ್ವ ಚಾಂಪಿಯನ್‌ಷಿಪ್, 1988ರ ಸಿಯೋಲ್ ಒಲಿಂಪಿಕ್ಸ್, 1989ರ ಪಾಕಿಸ್ತಾನದ ಎಸ್.ಎ.ಎಫ್. ಗೇಮ್ಸ್, 1989ರ ದೆಹಲಿಯ ಟ್ರ್ಯಾಕ್ ಮತ್ತು ಫೀಲ್ಡ್ ಈವೆಂಟ್ಸ್ ಮತ್ತು 1990ರ ಬೀಜಿಂಗ್‌ನ ಏಷ್ಯನ್ ಗೇಮ್ಸ್ ಇವು ಅಶ್ವಿನಿಯವರು ಭಾಗವಹಿಸಿದ ಪ್ರಮುಖ ಸ್ಪರ್ಧೆಗಳು. ಇವರು ಇತ್ತೀಚೆಗೆ ಅಥ್ಲೆಟಿಕ್ ಕಣಕ್ಕೆ ತಮ್ಮ ವಿದಾಯ ಪ್ರಕಟಿಸಿದರು.

ಜಿಲ್ಲೆಯ ಇತರ ಅಂತರರಾಷ್ಟ್ರೀಯ ಖ್ಯಾತಿಯ ಕ್ರೀಡಾಪಟುಗಳೆಂದರೆ 1) ರೀತ್ ಅಬ್ರಹಾಂ (1986–ಕರ್ನಾಟಕ ಏಷ್ಯನ್ ಟ್ರ್ಯಾಕ್ ಮತ್ತು ಫೀಲ್ಡ್ ಚಾಂಪಿಯನ್, ಇಸ್ಲಾಮಾಬಾದ್ ಹಾಗೂ ಸಿಯೋಲ್ ಒಲಂಪಿಕ್ಸ್), 2) ಪುಷ್ಪ ನಾಚಪ್ಪ (ವರ್ಲ್ಡ್ ಯೂನಿವರ್ಸಿಟಿ), 3) ಅರ್ಜುನ ದೇವಯ್ಯ (1990–ಏಷಿಯಾಡ್, ಬೀಜಿಂಗ್), 4) ಕೆ.ಎಂ. ಸುರೇಶ್ (1986–ಏಷಿಯಾಡ್, ಸಿಯೋಲ್), 5) ಐ. ಎಂ. ಅಪ್ಪಯ್ಯ (1990–ಕೌಲಾಲಂಪುರ್, 6ನೇ ಏಷ್ಯನ್ ವೆಟರನ್ ಚಾಂಪಿಯನ್), 6) ಕೆ. ಬಿ. ಮಾದಯ್ಯ (1987–ದೆಹಲಿ), 7) ಸಿ. ಎಂ. ಮುತ್ತಯ್ಯ, 8) ಕೆ. ಕೆ. ಗೀತಾ (ಐದು ವರ್ಷ ರಾಷ್ಟ್ರೀಯ ಹಾಕಿಕೂಟ, ಮುಂಬೈ ರಾಷ್ಟ್ರೀಯ ಅಥ್ಲೆಟಿಕ್ ಕೂಟ, ಮಂಗಳೂರಿನ ರಾಷ್ಟ್ರೀಯ ಚಾಂಪಿಯನ್‌ಷಿಪ್, ಕಲ್ಕತ್ತ, ತಿರುವನಂತಪುರ ಹಾಗೂ ದೆಹಲಿಗಳ ಅಂತರ ರಾಜ್ಯ ಅಥ್ಲೆಟಿಕ್ ಕೂಟ, ಕೌಲಾಲಂಪುರದ ಟ್ರ್ಯಾಕ್ ಮತ್ತು ಫೀಲ್ಡ್ ಕೂಟ).

3. ಬಾಸ್ಕೆಟ್ ಬಾಲ್ : 1) ಪುಷ್ಪ ಕುಟ್ಟಣ್ಣ, 2) ರೇಷ್ಮ ಚೆಂಗಪ್ಪ, 3) ಎಂ. ಎಂ. ದೇಚಮ್ಮ (ಮೂರೂ ಮಂದಿ ಫಿಲಿಪಿನ್ಸ್ ಮತ್ತು ಮನೀಲಾ), 4) ರೀತ್ ದೇವಯ್ಯ (ವರ್ಲ್ಡ್ ಯೂನಿವರ್ಸಿಟಿ), 5) ನಂದಿನಿ ಬಸಪ್ಪ (ವರ್ಲ್ಡ್ ಯೂನಿವರ್ಸಿಟಿ).

4. ಫುಟ್‌ಬಾಲ್ : 1) ಎ. ಪಿ. ಇಫ್ತಿಕಾರ್ (ರಷ್ಯಾ–1987); ಬಿ. ಪಿ. ಅಣ್ಣಪ್ಪ (ಜಕಾರ್ತ–1990).

5. ಬಾಕ್ಸಿಂಗ್ : 1) ಸಿ. ಎ. ಮಾಚಯ್ಯ (1982–ಏಷಿಯಾಡ್); 2) ಕೆ. ಎ. ನಾಣಯ್ಯ (ಜರ್ಮನಿ).

6. ಕ್ರಾಸ್ ಕಂಟ್ರಿ : ಕೆ. ಎಂ. ಚಿನ್ನಪ್ಪ (1990 ಚಾಂಪಿಯನ್); ಎಚ್. ಎಸ್. ಸೀತಾರಾಂ (ದೆಹಲಿ ಏಷಿಯಾಡ್).

7. ಜಿಮ್‌ನ್ಯಾಸ್ಟಿಕ್ಸ್ : ವೈ. ಜಿ. ಮೂಲದೀಪ್ (ಜರ್ಮನಿ). ಹದಿಮೂರು ವರ್ಷದ 7ನೇ ತರಗತಿಯ ಟೆನ್ನಿಸ್ ಆಟಗಾರ ಚೆಂಗಪ್ಪ ಏಪ್ರಿಲ್ 1992ರಲ್ಲಿ ಬೆಂಗಳೂರಿ

ನಲ್ಲಿ ನಡೆದ ರಾಷ್ಟ್ರೀಯ ಸಬ್-ಜ್ಯೂನಿಯರ್ಸ್ ಫೈನಲ್‌ನಲ್ಲಿ ರೆಫರಿ ಕಾರ್ಯ ನಿರ್ವಹಿಸಿದರು.

ಕ್ರಿಕೆಟ್ : ಜಿಲ್ಲೆಯ ಯುವಕರ ಕ್ರೀಡಾ ಪ್ರತಿಭೆ ಸೂಕ್ತ ರೀತಿಯಲ್ಲಿ ಅರಳಲು ಆಧಾರಸ್ತಂಭವಾಗಿರುವವರು ಕರ್ನಲ್ ಹೇಮು ಅಧಿಕಾರಿ. ಇವರು 12 ರಿಂದ 21ರ ವಯೋಮಿತಿಯ ಪ್ರತಿಭಾವಂತ ಯುವಕರಿಗೆ ಉಚಿತ ಮಾರ್ಗದರ್ಶನ ಹಾಗೂ ತರಬೇತಿ ನೀಡುತ್ತಿದ್ದಾರೆ. ಇವರೊಟ್ಟಿಗೆ ಕೊಡಗಿನ ಮತ್ತೊಬ್ಬ ಕ್ರೀಡಾಪಟು ಸಿ. ವಿ. ಶಂಕರ್ ಕ್ರಿಕೆಟ್‌ನ ಪೂರ್ವ ಭಾವಿ ತರಬೇತಿ ನೀಡುತ್ತಾರೆ. ಈ ಈರ್ವರಿಂದ ತರಬೇತಿ ಹೊಂದಿದ ಎ. ಸಿ. ಸುಬ್ಬಯ್ಯ, ಎಂ. ಎಂ. ಗಣಪತಿ, ಕೆ. ಸಿ. ಗೋಪಾಲಕೃಷ್ಣ, ಕೆ. ಯು. ಮುತ್ತಪ್ಪ, ಡಿ. ಎಂ. ಭೀಷ್ಮ ಮತ್ತು ಬೌಲರ್ ಎಂ. ಟಿ. ಅಪ್ಪಚ್ಚು ಉತ್ತಮ ಭರವಸೆ ಮೂಡಿಸಿದ್ದಾರೆ. ಜಿಲ್ಲೆಯ ಹಲವಾರು ಸ್ಥಳಗಳಲ್ಲಿ 20ಕ್ಕೂ ಹೆಚ್ಚು ಕ್ರಿಕೆಟ್ ಕ್ಲಬ್ಬುಗಳು ತಮ್ಮ ತಮ್ಮ ತಂಡಗಳನ್ನು ತಯಾರು ಮಾಡಿಕೊಂಡಿವೆ. ಕೊಡಗು ಜಿಲ್ಲಾ ಕ್ರಿಕೆಟ್ ಸಂಸ್ಥೆ ಕೆಲವು ವರ್ಷಗಳಿಂದ ಜಿಲ್ಲಾಮಟ್ಟದ ಕಾರ್ನ್ಸಕಾಫಿ ಬೆಳ್ಳಿಕಪ್ ಟೂರ್ನಿ ನಡೆಸಿಕೊಂಡು ಬಂದಿದೆ.

ಯಂಗ್‌ಮೆನ್ಸ್ ಸ್ಪೋರ್ಟ್ಸ್ ಕ್ಲಬ್, ವೀರರಾಜಪೇಟೆ

ಜಿಲ್ಲೆಯಲ್ಲಿ ಕ್ರಿಕೆಟ್ ಆಟದ ಬೆಳವಣಿಗೆಯ ಏಕೈಕ ಉದ್ದೇಶದಿಂದ 1959ರಲ್ಲಿ ಮಾತಂಡ ಬೋಪಯ್ಯನವರ ನೇತೃತ್ವದಲ್ಲಿ ಪ್ರಾರಂಭವಾದ ಈ ಸಂಸ್ಥೆಗೆ ನೆಲ್ಲಮಕ್ಕಡ ರಾಜಪ್ಪ, ನೆಲ್ಲಮಕ್ಕಡ ಜಗ್ಗ, ಕಾಳೇಗಂಡ ಪ್ರಭು, ಕಾಳೇಗಂಡ ರಮೇಶ್, ಜಯಚಂದೂಲಾಲ್, ಹೀರಾಲಾಲ್, ಬಿ.ಬಿ. ಉತ್ತಪ್ಪ, ಮುರಳಿ, ಪ್ರಸಾದ್, ಶೌಕತ್‌ಅಲಿ ಮತ್ತು ಖಲೀಲ್‌ಮುನ್ನಾ ಇವರುಗಳು ಸಂಸ್ಥಾಪಕ ಸದಸ್ಯರಾಗಿದ್ದರು. ಕೊಡಗಿನ ಅತೀ ಹಳೆಯ ಸಂಸ್ಥೆಗಳಲ್ಲಿ ಒಂದಾಗಿರುವ ಈ ಕ್ಲಬ್, ಕ್ರಿಕೆಟ್ ಅಭಿವೃದ್ಧಿಗೆ ನೀಡಿರುವ ಕೊಡುಗೆ ಮಹತ್ವದ್ದಾಗಿದೆ. 'ಯಂಗ್ ಮೆನ್ಸ್ ಕ್ರಿಕೆಟ್ ಕ್ಲಬ್' ಎಂದು ಪ್ರಾರಂಭವಾದ ಈ ಸಂಸ್ಥೆಯ ಹೆಸರು 1989ರಲ್ಲಿ 'ಯಂಗ್ ಮೆನ್ಸ್ ಸ್ಪೋರ್ಟ್ಸ್ ಕ್ಲಬ್' ಎಂದು ಬದಲಾವಣೆಯಾಯಿತು. ಜಿಲ್ಲಾ ಹಾಗೂ ರಾಜ್ಯಮಟ್ಟದ ಪಂದ್ಯಾಟಗಳಲ್ಲಿಯೂ ಇದು ಪ್ರತೀವರ್ಷ ತನ್ನ ಆಟಗಾರರನ್ನು ಕಳುಹಿಸುವುದರ ಮೂಲಕ ಪಾಲ್ಗೊಳ್ಳುತ್ತದೆ. ವಿಸ್ತಾರಗೊಂಡ ಉದ್ದೇಶದಿಂದ ಈಗ ಸಂಸ್ಥೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನೂ ಹಮ್ಮಿಕೊಂಡಿದೆ. ಕಳೆದ ಆರು ವರ್ಷಗಳಿಂದ ವೀರರಾಜಪೇಟೆಯಲ್ಲಿ ರಾಜ್ಯ ಮತ್ತು ಜಿಲ್ಲಾಮಟ್ಟದ ಕ್ರಿಕೆಟ್ ಪಂದ್ಯಾವಳಿಗಳನ್ನು, ಕ್ರಿಕೆಟ್ ಕ್ವಿಜ್ ಮತ್ತು ಚೆಸ್ ಪಂದ್ಯಾವಳಿಗಳನ್ನೂ ನಡೆಸುತ್ತಿದೆ. ಮಂಡಲ ಪಂಚಾಯತಿಯ ವತಿಯಿಂದ ನಿವೇಶನ ಮಂಜೂರಾಗಿರುವ ಈ ಕ್ಲಬ್‌ನಲ್ಲಿ 1991ನೇ ಸೆಪ್ಟಂಬರ್ ವೇಳೆಗೆ ಸುಮಾರು 50 ಮಂದಿ ಸದಸ್ಯರಿದ್ದರು.